ದೆಹಲಿ ಕರ್ನಾಟಕ ಸಂಘದ ಅಭಿಮತ

ಜುಲೈ 2012
ಬೆಲೆ ರೂ. 1

# ಅರವತ್ತರ ಸಂಭ್ರಮದಲ್ಲಿ ಕರ್ನಾಟಕ ವಿಧಾನ ಮಂಡಲ



# ದೆಹಲಿ ಕರ್ನಾಟಕ ಸಂಘಕ್ಕೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷೆ ತಾರಾ ಭೇಟಿ




ಕರ್ನಾಟಕ ಚಲನಚಿತ್ರ ಅಕಾಡೆಮಿಯ ನೂತನ ಅಧ್ಯಕ್ಷೆ ತಾರಾ ಅವರು ನವದೆಹಲಿಯಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಆಯೋಜಿಸಬಹುದಾದ ಕೆಲವು ಕಾರ್ಯಕ್ರಮಗಳನ್ನು ಕುರಿತಂತೆ ಚರ್ಚಿಸುವ ಸಲುವಾಗಿ ಜೂನ್ 30ರ ಶನಿವಾರ ಸಂಜೆ ಸಂಘಕ್ಕೆ ಭೇಟಿ ಇತ್ತರು. ದೆಹಲಿ ಕರ್ನಾಟಕ ಸಂಘದ ಸಹಯೋಗದೊಡನೆ ಅಕಾಡೆಮಿಯ ಜನಪ್ರಿಯ ಕಾರ್ಯಕ್ರಮಗಳಾದ ಕನ್ನಡ ಚಿತ್ರೋದ್ಯಮದ ಪ್ರಸಿದ್ಧ ನಟ-ನಟಿಯರು ಹಾಗೂ ತಂತ್ರಜ್ಞರೊಂದಿಗೆ ಬೆಳ್ಳಿಹೆಜ್ಜೆ (ಗಣ್ಯರ ಬದುಕು ಸಾಧನೆ) ವ್ಯವಸ್ಥೆ, ಬೆಳ್ಳಿಹೆಜ್ಜೆಯಲ್ಲಿ ಭಾಗವಹಿಸುವ ಅತಿಥಿಗಳನ್ನು ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ, ಚಿತ್ರೋದ್ಯಮ ಕುರಿತಂತೆ ವಿಚಾರ ಸಂಕಿರಣ, ಕನ್ನಡ ಚಿತ್ರೋದ್ಯಮ ಬೆಳೆದು ಬಂದ ದಾರಿ ಬಗ್ಗೆ ಛಾಯಾಚಿತ್ರ ಪ್ರದರ್ಶನ, ಕನ್ನಡ ಚಿತ್ರಗಳ ಚಿತ್ರೋತ್ಸವಗಳನ್ನು ಆಯೋಜಿಸುವ ತಮ್ಮ ಯೋಜನೆಗಳನ್ನು ಮುಂದಿಟ್ಟರು. ಚಿತ್ರರಂಗದ ಏಳು-ಬೀಳುಗಳನ್ನು, ನೋವು ನಲಿವುಗಳನ್ನು ಅಭಿವ್ಯಕ್ತಿಗೊಳಿಸಿ ಅದನ್ನು ಛಾಯಾಚಿತ್ರ, ಧ್ವನಿಮುದ್ರಣ ಹಾಗೂ ವೀಡಿಯೋ ಮೂಲಕ ಸಂಗ್ರಹಿಸಿ ಮುಂದಿನ ಪೀಳಿಗೆಗೂ ಕಾಯ್ದಿಡುವ ಮೂಲ ಉದ್ದೇಶವುಳ್ಳ 'ಬೆಳ್ಳಿಹೆಜ್ಜೆ' ಕಾರ್ಯಕ್ರಮ ಅತ್ಯಂತ ಜನಪ್ರಿಯವಾಗಿದೆ ಎಂದು ಅವರು ತಿಳಿಸಿದರು. ಕರ್ನಾಟಕ ಚಲನಚಿತ್ರೋದ್ಯಮವನ್ನು ರಾಜ್ಯದೆಲ್ಲೆಡೆ ಮಾತ್ರವಲ್ಲದೇ ಗಡಿನಾಡು ಹಾಗೂ ಹೊರನಾಡಿನಲ್ಲಿಯೂ ಪರಿಚಯಿಸುವ ಸಲುವಾಗಿ ಹಲವಾರು ಕಾರ್ಯಕ್ರಮಗಳನ್ನು ಅಕಾಡೆಮಿ ಹಮ್ಮಿಕೊಂಡಿದೆ. ಈ ನಿಟ್ಟಿನಲ್ಲಿ ರಾಷ್ಟ್ರದ ರಾಜಧಾನಿಯಲ್ಲಿ ಆಯೋಜಿಸುವ ಕಾರ್ಯಕ್ರಮಗಳಿಗೆ ದೆಹಲಿ ಕರ್ನಾಟಕ ಸಂಘದ ಸಹಯೋಗವನ್ನು ಕೋರಿದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿಯವರು ಚಲನಚಿತ್ರ ಅಕಾಡೆಮಿಯ ಕಾರ್ಯಕ್ರಮಗಳಿಗೆ ದೆಹಲಿ ಕರ್ನಾಟಕ ಸಂಘವು ಎಲ್ಲ ರೀತಿಯ ಸಹಾಯ, ಸಹಕಾರ ನೀಡುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಅಕಾಡೆಮಿ ಅಧ್ಯಕ್ಷೆ ಶ್ರೀಮತಿ ತಾರಾ ಅವರನ್ನು ಅಭಿನಂದಿಸಲಾಯಿತು. ಅಭಿನಂದನೆಯನ್ನು ಸ್ವೀಕರಿಸಿದ ತಾರಾ ಅವರು ಈ ಹಿಂದೆ 'ಹಸೀನಾ' ಚಿತ್ರದಲ್ಲಿನ ಅಭಿನಯಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದ ನಂತರ ದೆಹಲಿ ಕರ್ನಾಟಕ ಸಂಘದಲ್ಲಿ ಪಡೆದ ಮೊದಲ ಸನ್ಮಾನದ ಸಂತಸದ ಕ್ಷಣಗಳನ್ನು ಸ್ಮರಿಸುತ್ತಾ ದೆಹಲಿ ಕನ್ನಡಿಗರ ಪ್ರೀತಿ, ಅಭಿಮಾನಕ್ಕಾಗಿ ವಂದನೆ ಸಲ್ಲಿಸಿದರು. ಕನ್ನಡ ಚಿತ್ರೋದ್ಯಮದ ಸರ್ವತೋಮುಖ ಬೆಳವಣಿಗೆ ಹಾಗೂ ಸಿನಿಮಾ ಸಂಸ್ಕೃತಿಯನ್ನು ನಾಡಿನಲ್ಲಿ ಪಸರಿಸುವ ಸಲುವಾಗಿ 2009ರಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಎರಡನೆಯ ಅಧ್ಯಕ್ಷೆಯಾಗಿರುವ ತಾರಾ ಅವರು ಅತ್ಯುತ್ಸಾಹದಿಂದ ತಮ್ಮ ಹಲವಾರು ಯೋಜನೆ, ಆಶಯಗಳನ್ನು ವಿವರಿಸಿದರು. ದೆಹಲಿ ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೆ ಕನ್ನಡ ಚಿತ್ರೋದ್ಯಮವನ್ನು ಪರಿಚಯಿಸುವ ಚಲನಚಿತ್ರೋತ್ಸವ ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಪೂರ್ಣ ವ್ಯವಸ್ಥೆ ಅಕಾಡೆಮಿ ಮಾಡುವುದಾಗಿ ತಿಳಿಸಿದರು. ಇದಕ್ಕಾಗಿ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡಿಗರ ಬೆಂಬಲ, ಸಹಕಾರವನ್ನು ಅವರು ಕೋರಿದರು. ಕನ್ನಡ ಚಿತ್ರಗಳನ್ನು ತೋರಿಸುವ ಮೂಲಕ ಮಕ್ಕಳಲ್ಲಿ ಕನ್ನಡ ಪ್ರೇಮವನ್ನು ಬೆಳೆಸಿ, ಉಳಿಸಿ ಎಂಬುದಾಗಿ ಅವರು ಕರೆ ಇತ್ತರು.

ಜಂಟಿ ಕಾರ್ಯದರ್ಶಿ ಎನ್.ಆರ್.ಶ್ರೀನಾಥ್, ಸದಸ್ಯರುಗಳಾದ ಟಿ.ಎಂ. ಮೈಲಾರಪ್ಪ, ಪಿ.ಸಿ.ಶ್ರೀನಿವಾಸ್, ಮತ್ತು ಹೇಮಲತ ಎಸ್.ಸಿ., ಹಾಗೂ ವಾರ್ತಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎಲ್.ಪಿ.ಗಿರೀಶ್, ಅಕಾಡೆಮಿಯ ಸದಸ್ಯ ಮುರಳೀಧರ ಹಾಲಪ್ಪ ಮತ್ತು ಹಲವಾರು ಕನ್ನಡಿಗರು ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು. ಖಜಾಂಚಿ ಕೆ.ಆರ್. ರಾಮಮೂರ್ತಿ ವಂದನೆ ಸಲ್ಲಿಸಿದರು.

❑ ಉಷಾ ಭರತಾದ್ರಿ

## ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆಯ ನಿರ್ದೇಶಕರಾಗಿ ವರ್ಗಾವಣೆಗೊಂಡ ಡಾ. ಮನು ಬಳಿಗಾರ್



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಾಲ್ಕೂವರೆ ವರ್ಷಗಳ ಸೇವೆಯ ನಂತರ ಇದೀಗ ಡಾ. ಮನು ಬಳಿಗಾರ್ ಅವರು ಕರ್ನಾಟಕ ಸರ್ಕಾರದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆಯ ನಿರ್ದೇಶಕರಾಗಿ ವರ್ಗಾವಣೆಯಾಗಿದ್ದಾರೆ. ನಾಡಿನಲ್ಲಿ ಮಾತ್ರವಲ್ಲದೇ ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಂಸ್ಕೃತಿಯನ್ನು ಪಸರಿಸುವಲ್ಲಿ ಮಹತ್ವದ ಪಾತ್ರವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಡಾ. ಮನು ಬಳಿಗಾರ್ ಅವರ ಉತ್ತಮ ಸೇವೆ ನಿರಂತರವಾಗಿ ಸಾಗಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ಹೊರನಾಡ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಆಯುಕ್ತರಾಗಿ ಶ್ರೀ ಕೆ.ಆರ್. ರಾಮಕೃಷ್ಣ



ಹಿರಿಯ ಶ್ರೇಣಿಯ ಕೆ.ಎ.ಎಸ್. ಅಧಿಕಾರಿಗಳಾದ ಶ್ರೀ ಕೆ.ಆರ್.ರಾಮಕೃಷ್ಣ ಅವರು ಮೈಸೂರಿನ ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ವಿಭಾಗದ ಆಯುಕ್ತರಾಗಿ ಸೇವೆ ಸಲ್ಲಿಸಿದ ನಂತರ ಇದೀಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ವಿಜ್ಞಾನ ಪದವೀಧರರಾದ ಇವರು ಶಿಕ್ಷಣ ಶಾಸ್ತ್ರ, ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯದ ಸ್ನಾತಕೋತ್ತರ ಪದವಿಯ ನಂತರ ಇಂಗ್ಲೆಂಡ್‌ನಲ್ಲಿ ಎಂ.ಬಿ.ಎ ಪದವಿಯನ್ನು ಪಡೆದಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ-ಧಾರವಾಡ ಪುರಸಭೆಗಳ ಆಯುಕ್ತರಾಗಿ ಸೇರಿದಂತೆ ಕರ್ನಾಟಕದ ಹಲವಾರು ಇಲಾಖೆಗಳಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅಲ್ಲದೇ ಈ ಹಿಂದೆ ದೆಹಲಿಯ ಕರ್ನಾಟಕ ಭವನದ ಉಪನಿವಾಸಿ ಆಯುಕ್ತರಾಗಿ ಸೇವೆ ಸಲ್ಲಿಸಿರುವ ರಾಮಕೃಷ್ಣ ಅವರು ದೆಹಲಿಯ ಕೃಷಿ ಮಂತ್ರಾಲಯದಲ್ಲಿ ಸಲಹೆಗಾರರಾಗಿ ಹಾಗೂ CAPART ನ ಪ್ರಧಾನ ಆಡಳಿತ ಅಧಿಕಾರಿಯಾಗಿಯೂ ತಮ್ಮ ಸೇವೆ ಸಲ್ಲಿಸಿದ್ದಾರೆ. ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರಾಗಿ ಮೈಸೂರು, ಶ್ರೀರಂಗಪಟ್ಟಣ, ಕಿತ್ತೂರು, ಬಿಜಾಪುರ, ಬೀದರ್ ಮತ್ತು ಗುಲ್ಬರ್ಗಾ ಪರಂಪರೆ ನಗರಗಳ ಸಂರಕ್ಷಣೆ ಹಾಗೂ ದಾಖಲಾತಿಯ ಉಸ್ತುವಾರಿಯನ್ನು ಮಾಡಿದ್ದಾರೆ. ರಾಜ್ಯದ ಹಲವಾರು ರಕ್ಷಿತ ಸ್ಮಾರಕಗಳು, ಸಂಗ್ರಹಾಲಯಗಳನ್ನು ಉಳಿಸುವ ನಿಟ್ಟಿನಲ್ಲಿ ವಿಚಾರ ಸಂಕಿರಣಗಳ ಆಯೋಜನೆ ಮತ್ತು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ. ಭಾರತ ಸರ್ಕಾರದ ಅನುಮತಿಯಿಂದ ಹಲವು ಇತಿಹಾಸ ಪೂರ್ವ ಹಾಗೂ ಪರಂಪರೆಯ ತಾಣಗಳ ಪರಿಶೋಧನೆ ಮತ್ತು ಉತ್ಖನನ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

**ಅಪಾರ ಪಾಂಡಿತ್ಯವುಳ್ಳ ಕೆ.ಆರ್. ರಾಮಕೃಷ್ಣ ಅವರು ಕನ್ನಡ ಮತ್ತು ಸಂಸ್ಕೃತಿಯನ್ನು ಪಸರಿಸುವಲ್ಲಿ ತಮ್ಮ ಉತ್ಕೃಷ್ಟ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಲಿ ಎಂದು ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶುಭ ಹಾರೈಸುತ್ತೇವೆ.**

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 22 ಸಂಚಿಕೆ 10
ಜುಲೈ 2012, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಚಿನ್ನ ಯಾರಿಗೆ ಬೇಕಿಲ್ಲ ಹೇಳಿ? ಅದರಲ್ಲಂತೂ ಸ್ತ್ರೀಯರಿಗೆ ಚಿನ್ನ–ಚಿನ್ನದ ಆಭರಣಗಳು ಆಪ್ಯಾಯಮಾನ. ಅದರಿಂದಲೇ ಚಿನ್ನದ ಬೆಲೆ ಬಗ್ಗೆ ಎಲ್ಲರ ಕಾಳಜಿ. ಕೇವಲ ಹತ್ತು ಹದಿನೈದು ವರ್ಷಗಳ ಹಿಂದೆ 10 ಗ್ರಾಂ ಚಿನ್ನದ ಬೆಲೆ ಕೇವಲ 5000 ರೂಪಾಯಿ. ಇಂದು ಅದರ ಬೆಲೆ 6 ಪಟ್ಟು ಏರಿದೆ ರೂ. 30,000ಕ್ಕೆ ! ಚಿನ್ನಗಳಲ್ಲೂ ವಿಧವಿಧ ! ಅಮೇರಿಕನ್ ಗೋಲ್ಡ್, ಪ್ಯೂರ್ ಗೋಲ್ಡ್, 24 ಕ್ಯಾರೆಟ್, 18 ಕ್ಯಾರೆಟ್ ಇತ್ಯಾದಿ. ಇತ್ತೀಚಿನ ಸುದ್ದಿ ಎಂದರೆ ಮೈಸೂರು ಗೋಲ್ಡ್ ಒಂದು ಟನ್‌ಗೆ ಕೇವಲ 6000 ರೂಪಾಯಿ! ದಯಮಾಡಿ ಮೈಸೂರು ಗೋಲ್ಡ್ ಕೊಳ್ಳಲು ತತ್‌ಕ್ಷಣ ಮೈಸೂರಿಗೆ ದೌಡಾಯಿಸಬೇಡಿ. ಮೈಸೂರ್ ಗೋಲ್ಡ್ ಅನ್ನುವುದು ಜೈವಿಕ ಗೊಬ್ಬರ! ಮೈಸೂರು ನಗರದ ಜೈವಿಕ ಕಸವನ್ನು ಸದುಪಯೋಗಪಡಿಸಿಕೊಳ್ಳುವ ಸದುದ್ದೇಶದಿಂದ ಮೈಸೂರು ಮಹಾನಗರಪಾಲಿಕೆ ಈ ಕಸವನ್ನು ಸಂಸ್ಕರಿಸಿ 'ಮೈಸೂರ್ ಗೋಲ್ಡ್' ಎನ್ನುವ ಅನ್ವರ್ಥ ನಾಮದಡಿ ಜೈವಿಕ ಗೊಬ್ಬರವನ್ನು ಉತ್ಪಾದಿಸುವ ಘಟಕವನ್ನು ಸ್ಥಾಪಿಸಿದೆ. ಇದುವರೆವಿಗೂ 35ಟನ್ ಗೊಬ್ಬರ ಮಾರಾಟವಾಗಿದೆ. ಕೇವಲ ಎರಡು ತಿಂಗಳ ಹಿಂದೆ ಸ್ಥಾಪನೆಯಾದ ಈ ಘಟಕ ಒಂದು ಬೃಹತ್ ಉದ್ಯಮವಾಗಿ ಬೆಳೆಯಲಿದೆ. ಏಕೆಂದರೆ ಈ ಗೊಬ್ಬರಕ್ಕೆ ಇರುವ ಅಪರಿಮಿತ ಬೇಡಿಕೆ. ಈ ಗೊಬ್ಬರದ ಹೇರಳ ಬಳಕೆಯಾಗುವುದು ಮನೆ ಮಾಡಿನ ಕುಂಡಗಳಲ್ಲಿನ ಗಿಡಗಳಿಗೆ ಹಾಗೂ ಮನೆ ಸುತ್ತಣದ ಹಸಿರು ತಾಣಗಳಿಗೆ. ಇದರಿಂದ ಮೈಸೂರು ಮಹಾ ನಗರಪಾಲಿಕೆಗೆ ಆದಾಯ ಹೆಚ್ಚುವುದು ಮಾತ್ರವಲ್ಲ, ಸ್ಥಳೀಯರಿಗೆ ಉದ್ಯೋಗ ಕೂಡ ಲಭಿಸುವಂತಾಗಿದೆ. ಹೆಮ್ಮೆಯ ಸಂಗತಿ ಎಂದರೆ ಮೈಸೂರು ನಗರದಲ್ಲಿ 258 ತಾಣಗಳಲ್ಲಿ ಗೊಬ್ಬರ ಸಂಸ್ಕರಣದ ಸಣ್ಣ ಸಣ್ಣ ಘಟಕಗಳಿವೆ. ಇಲ್ಲಿ ಮುಖ್ಯವಾಗಿ ಗಮನಕ್ಕೆ ಬರುವುದು ವೈಜ್ಞಾನಿಕ ಕಸ ನಿರ್ವಹಣೆ ಹಾಗೂ ಜೈವಿಕ ಕೃಷಿಗೆ ಬೆಂಬಲವಾಗಿರುವ ಜೈವಿಕ ಗೊಬ್ಬರದ ಉತ್ಪಾದನೆ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಇದು ನಿಜಕ್ಕೂ ಶ್ಲಾಘನೀಯ ಸಾಧನೆ. ಅದಕ್ಕಾಗಿ ನಾವು ನಮ್ಮ ಮೈಸೂರು ಮಹಾನಗರ ಪಾಲಿಕೆಯನ್ನು ಅಭಿನಂದಿಸಲೇಬೇಕು. ಇದು ಇತರೆ ನಗರ ಪಾಲಿಕೆಗಳಿಗೂ ಆದರ್ಶವಾಗಲಿ ಎಂಬುದು ನಮ್ಮ ಹೃತ್ಪೂರ್ವಕ ಹಾರೈಕೆ.

ಇಡೀ ದೇಶ ಆಗಸದತ್ತ ದೃಷ್ಟಿ ನೆಟ್ಟಿದೆ. ಮಳೆಗಾಗಿ ಹಾತೊರೆದಿದೆ. ಇಷ್ಟು ಹೊತ್ತಿಗೆ ಬರಲೇ ಬೇಕಿದ್ದ ಮಳೆಯ ಪ್ರಮಾಣದಲ್ಲಿ ಶೇಕಡ 83ರಷ್ಟು ಕಡಿತ ಆಗಿರುವುದು ಬೆಚ್ಚಿ ಬೀಳುವ ಸಂಗತಿ. ಕರ್ನಾಟಕವಂತೂ ದುರದೃಷ್ಟಕರ ರೀತಿಯಲ್ಲಿ ಬರಗಾಲದಿಂದ ತತ್ತರಿಸುತ್ತಿದೆ. ಬೆಂಗಳೂರು ನಗರವೂ ಸೇರಿದಂತೆ ಇಡೀ ನಾಡಿನಲ್ಲಿ ಇನ್ನೂ ಮಳೆಯಾಗಿಲ್ಲ. ಭೀಕರ ಬರಗಾಲವನ್ನು ಎದುರಿಸಲು ಜನತೆ ಮತ್ತು ಸರ್ಕಾರ ಸಜ್ಜಾಗಬೇಕಿದೆ. ನಮ್ಮ ನಾಡಿನ ಸಂದರ್ಭದಲ್ಲಂತೂ ಇದು ಅನಿವಾರ್ಯ. ಏಕೆಂದರೆ ಮಳೆ ಆಧಾರಿತ ಕೃಷಿ ಸಂಪೂರ್ಣ ನೆಲ ಕಚ್ಚಿದೆ. ಇದನ್ನೇ ಅವಲಂಬಿಸಿ ಬದುಕಬೇಕಾದ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಇಂಥಲ್ಲಿ ನಮ್ಮ ನಾಡನ್ನಾಳುವ ಪ್ರಭುಗಳು ಅಧಿಕಾರಕ್ಕಾಗಿ ಕದನವನ್ನು ಮುಂದುವರಿಸದೆ ಸಧ್ಯದ ಭಯಾನಕ ಬರಗಾಲವನ್ನು ಸಮರ್ಥವಾಗಿ ನಿಭಾಯಿಸುವತ್ತ ತೀವ್ರ ಗಮನ ಹರಿಸಬೇಕು. ನಮ್ಮ ನಾಡಿನಲ್ಲೇಕೆ, ಇಡೀ ದೇಶದಲ್ಲಿ ಸಮೃದ್ಧ ಮಳೆಯಾಗಲಿ, ಜನ ಸಮುದಾಯದ ಒಳಿತನ್ನು ಮಾತ್ರ ಗುರಿಯಲ್ಲಿಟ್ಟುಕೊಂಡು ನಮ್ಮ ನೇತಾರರು ಮುಂದಡಿ ಇಡುವಂತಾಗಲಿ, ಸ್ವಾರ್ಥ ಹಿತಾಸಕ್ತಿಗಳು ಮರೆಯಾಗಿ ಸಮಷ್ಟಿ–ಹಿತ ಪ್ರಾಧಾನ್ಯತೆ ಪಡೆಯಲಿ–ಇದು ನಮ್ಮ ಸದಾಶಯ.

ಗುಜರಾತ್, ಮಹಾರಾಷ್ಟ್ರಗಳ ಗಡಿಯಲ್ಲಿ ಹಾಯ್ದು ಗೋವಾ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಮೂಲಕ ಪಸರಿಸಿರುವ ಪಶ್ಚಿಮಘಟ್ಟಗಳು ಈಗ ವಿಶ್ವಪರಂಪರೆಯ ಪಟ್ಟಿಗೆ ಸೇರಿವೆ. ಯುನೆಸ್ಕೊ ಅಧಿಕೃತವಾಗಿ ಈ ಬಗ್ಗೆ ಘೋಷಿಸಿದೆ. 1600 ಕಿ.ಮೀ. ಉದ್ದದ ಈ ಘಟ್ಟ ಪ್ರದೇಶ ಹಿಮಾಲಯಕ್ಕಿಂತ ಹಿರಿಯ ಪರ್ವತಶ್ರೇಣಿ. ಅಚ್ಚಹಸಿರು, ಜೈವಿಕ ವೈವಿಧ್ಯತೆ ಹಾಗೂ ಪರಿಶುದ್ಧ ಪರಿಸರಗಳಿಗೆ ಹೆಸರಾದ ಪಶ್ಚಿಮ ಘಟ್ಟಗಳು ದೇಶದ, ನಮ್ಮ ರಾಜ್ಯದ, ಈಗ ಇಡೀ ವಿಶ್ವದ ಹೆಮ್ಮೆಯ ಹಸಿರ್ದಾಣಗಳು. ಈ ವಿಶ್ವ ಪರಂಪರೆಯ ಪಟ್ಟಗಿಟ್ಟಿಸಲು 2006 ರಿಂದ ನಾವು ಹೋರಾಡಿದ್ದೆವು ; ಪರಿಸರದ ಸಮತೋಲನಕ್ಕೆ ಈ ಘಟ್ಟಗಳ ಮಹತ್ವವನ್ನು ಜಗತ್ತಿಗೆ ಪ್ರತಿಪಾದಿಸಿದ್ದೆವು ; ಭಾರತದ ಹವಾಮಾನದ ವೈಪರೀತ್ಯಗಳ ನಿಯಂತ್ರಣಕ್ಕೆ ಈ ಘಟ್ಟಗಳ ಅಗತ್ಯತೆ ಹಾಗೂ ಸಂರಕ್ಷಣೆ ಅನಿವಾರ್ಯ ಎಂದು ವಾದಿಸಿದ್ದೆವು. ಈ ನಿರಂತರ ಯತ್ನಕ್ಕೆ ಯಶ ದೊರಕಿರುವುದು ನಿಜಕ್ಕೂ ಸಂತಸದ ಸಂಗತಿ. ಆದರೆ ಅಭಿವೃದ್ಧಿಯ ಹೆಸರಿನಲ್ಲಿ ಇದಕ್ಕೆ ವಿರೋಧಗಳು ಅಲ್ಲಲ್ಲಿ ಕಿಡಿಯಾಡುತ್ತಿವೆ. ಆದರೆ ಭೂಗ್ರಹದ ಉಳಿವಿಗೆ ಪಶ್ಚಿಮಘಟ್ಟಗಳಂತಹ ಹಸಿರ್ದಾಣಗಳ ಸಂರಕ್ಷಣೆ ಅತ್ಯವಶ್ಯಕ. ಈ ಸದ್ವಿವೇಕ ಎಲ್ಲರಲ್ಲಿ ಮೂಡಲಿ ಎಂಬುದು ನಮ್ಮ ಕಳಕಳಿಯ ಬಯಕೆ.

ನಮ್ಮೊಡನೆ–ನಮ್ಮ ಅಭಿಮತದ ಬಳಗದೊಂದಿಗೆ ಅವಿನಾಬಾಂಧವ್ಯವನ್ನು ಹೊಂದಿದ್ದ ಸಜ್ಜನ, ಸುಸಂಸ್ಕೃತ, ವಿದ್ವಾಂಸ ಡಾ. ಜಿ.ಎ. ಬಿರಾದಾರರ ಅಕಾಲ ಮೃತ್ಯು ನಮಗೆಲ್ಲಾ ಅಪಾರ ದುಃಖ ತಂದಿದೆ. ಭಾರತ ರಾಷ್ಟ್ರೀಯ ಪತ್ರಾಗಾರದಲ್ಲಿ ಸಂಗ್ರಹಕಾರರಾಗಿ ಸೇವೆ ಸಲ್ಲಿಸುತ್ತಿದ್ದ ಬಿರಾದಾರರು ಇತಿಹಾಸತಜ್ಞರು. ಸ್ವಾತಂತ್ರ್ಯ ಪೂರ್ವ ಭಾರತದ ಇತಿಹಾಸದಲ್ಲಿ ಪಾಂಡಿತ್ಯ ಪಡೆದಿದ್ದ ಅವರು ಭೂತಕಾಲದ ಒಳಹೊಕ್ಕು ಅನೇಕ ಅಲಿಖಿತ ವಾಸ್ತವಾಂಶಗಳನ್ನು ಸಂಶೋಧಿಸಿ ಅಪೂರ್ವ ದಾಖಲಾತಿ ಮಾಡುವ ಕಾಯಕದಲ್ಲಿ ನಿರತರಾಗಿದ್ದರು. ಅದರಲ್ಲೂ ಕರ್ನಾಟಕಕ್ಕೆ ಸಂಬಂಧಿಸಿದ ಅವರ ಸಂಶೋಧನಾತ್ಮಕ ಕೃತಿಗಳು ಅವರ ನೆನಪನ್ನು ಚಿರಸ್ಥಾಯಿಯಾಗಿಸಿವೆ. ಬಿರಾದಾರರು ತಮ್ಮ ಬಿಡುವಿಲ್ಲದ ವಿದ್ವತ್ಪೂರ್ಣ ಚಟುವಟಿಕೆಗಳ ನಡುವೆಯೂ ಅಭಿಮತದ ಕರೆಗಳಿಗೆ ಸದಾ ಸ್ಪಂದಿಸುತ್ತಿದ್ದರು. ಇತಿಹಾಸ ಸಂಬಂಧಿತ ಹಲವಾರು ಲೇಖನಗಳನ್ನು ಅಭಿಮತಕ್ಕಾಗಿ ನೀಡಿದ್ದಾರೆ. ಬಿರಾದಾರರ ಅಗಲಿಕೆಯಿಂದಾದ ತುಂಬಲಾರದ ನಷ್ಟವನ್ನು ಭರಿಸುವ ಶಕ್ತಿ ಅವರ ಕುಟುಂಬಕ್ಕೆ, ಬಂಧು ಮಿತ್ರರಿಗೆ, ದೆಹಲಿ ಕನ್ನಡ ಸಮುದಾಯಕ್ಕೆ ಪ್ರಾಪ್ತವಾಗಲಿ ಎಂಬುದು ನಮ್ಮ ಪ್ರಾರ್ಥನೆ. ಅಗಲಿದ ಬಿರಾದಾರರ ಆತ್ಮಕ್ಕೆ ನಮ್ಮ ಭಾವಪೂರ್ಣ ಅಶ್ರು ನಮನ.

❑ ಉಷಾ ಭರತಾದ್ರಿ

# ನಮ್ಮ ಗ್ರಂಥ ಭಂಡಾರ

ದೆಹಲಿ ಕರ್ನಾಟಕ ಸಂಘದಲ್ಲಿ ಒಂದು ಉತ್ತಮವಾದ ಗ್ರಂಥ ಭಂಡಾರವನ್ನು ಬೆಳೆಸುವುದು ನಮ್ಮ ಆಶಯವಾಗಿದೆ. ಸಂಘದ ಕೆಳಗಿನ ಮಾಳಿಗೆಯಲ್ಲಿ ಈಗಾಗಲೇ ಸಾವಿರಾರು ಪುಸ್ತಕಗಳ ಭಂಡಾರವೇ ಇದೆ. ನಮ್ಮ ಗ್ರಂಥ ಭಂಡಾರದಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಪುಸ್ತಕಗಳಿವೆ. ಪ್ರತಿ ವರ್ಷವೂ ನೂರಾರು ಪುಸ್ತಕಗಳನ್ನು ಖರೀದಿಸುವ, ಸಹಾಯರೂಪದಲ್ಲಿ ಪಡೆಯುವ ಪ್ರಯತ್ನ ನಮ್ಮದು. ಈ ದಿಶೆಯಲ್ಲಿ ಗ್ರಂಥ ಭಂಡಾರ ಸಮಿತಿಯೂ ಸಹ ಹಲವಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದೆ.

ಈಗಿನ ಕಾಲದಲ್ಲಿ ಪುಸ್ತಕ ಓದುವವರ ಸಂಖ್ಯೆಯೇ ಕಡಿಮೆಯಾಗುತ್ತಿದೆಯೆಂಬುದು ಹಲವರ ವಿಚಾರ. ಹೊಸ ತಾಂತ್ರಿಕ ಆವಿಷ್ಕಾರಗಳ ಕಾರಣದಿಂದಾಗಿ ಹೀಗಾಗುತ್ತಿದೆಯೆಂದು ಹೇಳಿಕೊಂಡು ನಾವು ಸುಮ್ಮನಾಗಬಹುದು. ಇದು ಕಂಪ್ಯೂಟರ್ ಯುಗ. ಅದಲ್ಲದೆ, ಹಲವಾರು ಬಗೆಯ ಚಿತ್ರ-ವಿಚಿತ್ರವಾದ ಹಾಗು ವಿನೂತನವಾದ ತಾಂತ್ರಿಕ ಆವಿಷ್ಕಾರಗಳು ಹುಟ್ಟಿಕೊಳ್ಳುವುದರ ಮೂಲಕ ಮುಂದಿನ ಹಲವು ದಶಕಗಳಲ್ಲಿ ಪುಸ್ತಕಗಳ ಪ್ರಾಮುಖ್ಯತೆಯೇ ಕಡಿಮೆಯಾಗಬಹುದೆಂದು ತಜ್ಞರು ಹೇಳುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ನಿಜವೋ ಎಂಬುದನ್ನು ಕಾಲವೇ ಹೇಳಬೇಕು. ಈಗಾಗಲೇ ನಮ್ಮ ದೇಶದಲ್ಲಿ ಹಾಗೂ ಜಗತ್ತಿನ ಇತರ ಭಾಗಗಳಲ್ಲಿ 'ಡಿಜಿಟಲ್' ಗ್ರಂಥ ಭಂಡಾರಗಳ ಸಾಲೇ ತುಂಬಿ ಬರುತ್ತಿವೆ. ನಮಗೆ ಬೇಕಾದ ಎಲ್ಲ ಓದಿನ ಸಲಕರಣೆಗಳು ಈಗ 'ಡಿಜಿಟಲ್' ರೂಪದಲ್ಲಿ ದೊರಕುತ್ತಿವೆ. ಈ 'ಡಿಜಿಟಲ್' ಪುಸ್ತಕಗಳನ್ನು ಓದಲು, ಓದಿ ಅದನ್ನು ಮನದಲ್ಲಿ ಇಳಿಸಿಕೊಳ್ಳಲು ವಿಶಿಷ್ಟವಾದ 'ಪ್ಲಾಡ್'ಗಳು ಕೂಡಾ ಹೊರಬರುತ್ತಿವೆ. ಸಾವಿರಾರು ಪುಟಗಳ ಓದಿನ ಸರಕನ್ನು ನಾವು ನಮ್ಮ ಅಂಗೈ ಮೇಲೆ ಇರಿಸಿಕೊಂಡು ಬೇಕಾದಾಗ ಗುಂಡಿಗಳನ್ನು ಒತ್ತಿ ಓದುವ ಕೆಲಸ ಮಾಡಬಹುದು. ಬೇಸರವಾದರೆ, ಇನ್ನೊಂದು ಗುಂಡಿಯನ್ನು ಒತ್ತಿ ಜಗತ್ತಿನ ಮೂಲೆಮೂಲೆಗಳನ್ನು ಅಂತರ್‌ಜಾಲದ ಮೂಲಕ ಜಾಲಾಡಿ ಬರಬಹುದು. ಎಲ್ಲವೂ ಕುಳಿತಲ್ಲೇ ಆಗಿಬಿಡಬಹುದು. ಯಾವುದಕ್ಕೂ ನಾವು ನಮ್ಮ ಶಾರೀರಿಕ ಹಾಗೂ ಮಾನಸಿಕ ಸ್ತರಗಳನ್ನು ಉಪಯೋಗಿಸುವ ಸಾಧ್ಯತೆಗಳೇ ಇಲ್ಲ, ಅಥವಾ ಈ ಸಾಧ್ಯತೆಗಳೇ ಕಡಿಮೆಯಾಗುತ್ತ ಹೋಗುತ್ತಿವೆಯೆಂದರೆ ಅತಿಶಯೋಕ್ತಿಯಲ್ಲ.

ಮುಂಬರುವ ಪೀಳಿಗೆಗಳು ಈ ಬಗೆಯ ಓದಿಗೆ ಸಜ್ಜಾಗುತ್ತಿವೆ. ಆದರೆ, ಪುಸ್ತಕದ ಅಕ್ಷರಗಳ ಪ್ರಪಂಚವನ್ನು ನಾವು ಸುಲಭವಾಗಿ ಮರೆಯಲಾದೀತೇ? ನೂರಾರು ಪುಟಗಳ ಪುಸ್ತಕದಲ್ಲಿ ಅಡಗಿರುವ ಪ್ರಪಂಚವನ್ನು ನಾವು ಮನದಾಳದಲ್ಲಿ ಇಳಿಸಿಕೊಳ್ಳುವ ಬಗೆಯೇ ಹಲವಾರು ಬಗೆಗಳಲ್ಲಿ ವಿಶಿಷ್ಟವಾದದ್ದು. ಕಣ್ಣು ಈ ಅಕ್ಷರಗಳ ಮೇಲೆ ಹರಡಿಕೊಂಡು, ಈ ಅಕ್ಷರಗಳು ನಮ್ಮ ಮಾನಸಿಕ ಹಾಗೂ ಸೃಜನಶೀಲ ಪ್ರಪಂಚವನ್ನು ಅರಳಿಸುವ ಬಗೆಯನ್ನು ನಾವು ಕಳೆದುಕೊಳ್ಳಲು ಸಿದ್ಧರಾಗಿದ್ದೇವೆಯೇ? ಇದೊಂದು ಅದ್ಭುತವಾದ ಮಾನಸಿಕ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಸಿಲುಕಿದವರು ನಾವು. ಈ ಪುಸ್ತಕಗಳ ಒಟ್ಟಾರೆ ಪ್ರಪಂಚದಿಂದ ದೂರವಾಗಿ ಉಳಿಯುವುದು ಅಸಾಧ್ಯ.

ನಾನೇ ಎಷ್ಟೋ ಬಾರಿ ಲೇಖನಗಳನ್ನು ಕಂಪ್ಯೂಟರ್ ಹಾಗೂ ಪ್ಲಾಡ್‌ಗಳ ಮೂಲಕ ಓದುವ ಪ್ರಯತ್ನ ಮಾಡಿದ್ದೇನೆ. ಈ ಬಗೆಯಲ್ಲಿ ಲೇಖನಗಳನ್ನು ಓದಿದ ಮೇಲೂ ಒಂದು ಬಗೆಯ ಅತೃಪ್ತಿ ಮನವನ್ನು ಕಾಡುತ್ತದೆ. ಪುಸ್ತಕವಾದರೆ, ಅದು ನನ್ನ ಕೈಯಲ್ಲಿ, ಬಗಲಲ್ಲಿ, ಇಲ್ಲಾ . . . .ಕೈಚೀಲದಲ್ಲಿ. . .ಒಟ್ಟಾರೆ ನಾನಾ ಬಗೆಯಲ್ಲಿ ನನ್ನ ಬಳಿ ಇರುತ್ತದೆ. ಬೇಕಾದ ರೀತಿಯಲ್ಲಿ ಪುಟಗಳನ್ನು ತಿರುವಿ ಹಾಕಬಹುದು. ಹತ್ತನೇ ಪುಟದಿಂದ ಮೂರುನೂರನೇಯ ಪುಟಕ್ಕೆ ಒಮ್ಮೆಗೆ ಜಿಗಿಯಬಹುದು. ಬೇಜಾರಾದರೆ, ಪುಟಗಳನ್ನು ಪಟಪಟ ಅಂತ ತಿರುಗಿಸಿ ಹಾಕಿಬಿಡಬಹುದು. ಓದಿದ ನಂತರ, ಅದೊಂದು ಅದ್ಭುತವಾದ ಪುಸ್ತಕವಾದರೆ, ಅದಕ್ಕೆ, ಅದರದ್ದೇ ಆದ ಜೀವಂತಿಕೆ ಬಂದು ಬಿಡುತ್ತದೆ. ಪುಸ್ತಕ ಪುಸ್ತಕವಾಗಿ ಉಳಿಯುವುದಿಲ್ಲ. ಅದೊಂದು ಹಲವಾರು ಕನಸುಗಳ, ಸಂತಸದ ಬುಗ್ಗೆಯಾಗಿ ಪರಿಣಮಿಸುತ್ತದೆ. ಈ ಬಗೆಯ ಅನುಭವ 'ಡಿಜಿಟಲ್' ಗ್ರಂಥಭಂಡಾರದಲ್ಲಿ ಆಗದೆ, ನಾನೇ ಎಷ್ಟೊ ಬಾರಿ 'ಪ್ರಿಂಟ್‌ಔಟ್'ನ ಮೊರೆ ಹೊಕ್ಕಿದ್ದೇನೆ.

ಈ ಎಲ್ಲ ದೃಷ್ಟಿಯಿಂದ ನಮ್ಮ ಗ್ರಂಥಭಂಡಾರವನ್ನು ಮುಂಬರುವ ವರ್ಷಗಳಲ್ಲಿ ಸುಸಜ್ಜಿತಗೊಳಿಸುವ ಕೆಲಸ ಆಗಬೇಕಾಗಿದೆ. ಹೊಸ ಆವಿಷ್ಕಾರಗಳು ಹಾಗೂ ಹಳೆಯ ಪುಸ್ತಕದ ರೂಪಗಳು ನಮ್ಮ ಗ್ರಂಥಭಂಡಾರದಲ್ಲಿ ಮೈದಾಳಬೇಕಾಗಿದೆ. ಈ ದಿಶೆಯಲ್ಲಿ ನಮ್ಮ ಪ್ರಯತ್ನ ಮುಂದುವರೆದಿದೆ. ಸಂಘದ ಗ್ರಂಥಭಂಡಾರದಲ್ಲಿ ಪುಸ್ತಕಗಳ ಜೊತೆಗೆ 'ಡಿಜಿಟಲ್' ರೂಪದ ಪುಸ್ತಕಗಳನ್ನು ಇರಿಸಿಕೊಳ್ಳುವ ವ್ಯವಸ್ಥೆಗಳನ್ನು ನಾವು ಮಾಡಿಕೊಳ್ಳಬೇಕಾಗಿದೆ. ಅದಕ್ಕೆ ಬೇಕಾದ ಸಲಹೆ-ಸಹಕಾರಗಳನ್ನು ತಾವೆಲ್ಲ ನೀಡುತ್ತೀರೆಂದು ಹಾರೈಸುತ್ತೇನೆ.

❑ **ಡಾ. ವೆಂಕಟಾಚಲ ಹೆಗಡೆ**

## ಮುನ್ನೋಟ

ಮುಂಗಾರು ಮಳೆ ಬರಬೇಕಾಗಿದ್ದುದು ಇನ್ನೂ ದೆಹಲಿಗೆ ಬರದೇ ಇರುವುದು ದೆಹಲಿಯಲ್ಲಿ ಈ ಬಾರಿ ಬೇಸಿಗೆಯ ಬಿಸಿಯನ್ನು ಹೆಚ್ಚಿಸಿದೆ. ಪರಿಣಾಮವಾಗಿ ಬೇಸಿಗೆಯ ರಜೆಯ ನಂತರ ಜುಲೈ 1ರಿಂದ ಪ್ರಾರಂಭವಾಗಬೇಕಾಗಿದ್ದ ಶಾಲೆಗಳಿಗೆ ಇನ್ನೂ ಒಂದು ವಾರ ರಜೆಯನ್ನು ಹೆಚ್ಚಿಸಲಾಗಿದೆ. ಸಂಘದ ಕಾರ್ಯಕ್ರಮಗಳು ಸಹ ಬೇಸಿಗೆಯ ಈ ಒಂದೆರೆಡು ತಿಂಗಳಲ್ಲಿ ಕಡಿಮೆ ನಡೆದಿದ್ದು ಇನ್ನು ಮುಂದೆ ಶುರುವಾಗಲಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರು ಸಂಘಕ್ಕೆ ಭೇಟಿ ನೀಡಿ ಸಂಘದಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಕ್ರಮಗಳನ್ನು ವೀಕ್ಷಿಸಿ ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ. ಜೊತೆಗೆ "ಯಮುನೆಯ ತಡಿಯಲ್ಲಿ ಕನ್ನಡ ನುಡಿ" ಎಂಬ ಪ್ರತಿ ತಿಂಗಳಿಗೊಂದು ಸಾಂಸ್ಕೃತಿಕ ಕಾರ್ಯಕ್ರಮದ ಆಯೋಜನೆಯ ನಮ್ಮ ಮನವಿ ಪತ್ರಕ್ಕೆ ಅವರು ಪ್ರತಿ ತಿಂಗಳ ಎರಡನೇ ಶನಿವಾರದಂದು ಒಂದು ಒಳ್ಳೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲು ತಂಡವನ್ನು ಕಳುಹಿಸಿಕೊಡಲು ಒಪ್ಪಿರುತ್ತಾರೆ. ಅದರಂತೆ ಮೊದಲಿಗೆ ಶುಭಾ ಧನಂಜಯ ನೃತ್ಯರೂಪಕ ತಂಡದಿಂದ ನೃತ್ಯರೂಪಕ, ಆಗಸ್ಟ್ ತಿಂಗಳಿನಲ್ಲಿ, ಸೆಪ್ಟಂಬರ್ ತಿಂಗಳಿನಲ್ಲಿ ಕುಮಾರಿ ಪೂಜ್ಯಾ ಮೋಹನ್ ತುಮಕೂರು ಅವರ ವಚನ ಗಾಯನ, ಅಕ್ಟೋಬರ್ ತಿಂಗಳಿನಲ್ಲಿ ಮೃತ್ಯುಂಜಯ ದೊಡ್ಡಾಟ ಬೆಂಗಳೂರು, ತಂಡದಿಂದ ಸುಗಮ ಸಂಗೀತ, ನವೆಂಬರ್ ತಿಂಗಳಿನಲ್ಲಿ ಶ್ರೀ ಸಾಣೇ ಹಳ್ಳಿ ಶಿವಕುಮಾರ್ ಕಲಾತಂಡ, ಚಿತ್ರದುರ್ಗ ಅವರಿಂದ ನಾಟಕ, ಡಿಸೆಂಬರ್ ತಿಂಗಳಿನಲ್ಲಿ ಡಾ. ವೀರೇಶ್ ಬಳ್ಳಾರಿ ಮತ್ತು ತಂಡದವರಿಂದ ಜಾನಪದ ಸಂಗೀತ ಕಾರ್ಯಕ್ರಮಗಳ ಆಯೋಜನೆಗೆ ನಮ್ಮ ನೆಚ್ಚಿನ ಆಯುಕ್ತರಾದ ಡಾ. ಮನುಬಳಿಗಾರ್ ಅವರು ಒಪ್ಪಿಗೆ ನೀಡಿರುತ್ತಾರೆ. ಹಾಗೆ ಅವರು ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬೇರೆ ಇಲಾಖೆಗೆ ವರ್ಗಾವಣೆ ಗೊಂಡಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಲೇಬೇಕು, ಏಕೆಂದರೆ ಸರ್ಕಾರದಿಂದ ಒಂದು ಕೋಟಿ ರೂ ಹಣ ತರುವಾಗ ತುಂಬ ಸಹಕಾರ ನೀಡಿದ್ದಾರೆ. ಹಾಗೆ ಅವರ ಜಾಗಕ್ಕೆ ಹೊಸ ಆಯುಕ್ತರಾಗಿ ಕೆ.ಆರ್. ರಾಮಕೃಷ್ಣ ಅವರು ಬಂದಿದ್ದಾರೆ. ಅವರಿಗೆ ನಮ್ಮ ಸಂಘದ ಪರವಾಗಿ ಸ್ವಾಗತವನ್ನು ಕೋರುತ್ತೇವೆ. ಮೊನ್ನೆ ತಾನೇ ಚಲನಚಿತ್ರ ನಟಿ ತಾರಾ ಅವರು ಕರ್ನಾಟಕ ಚಲನ ಚಿತ್ರ ಅಕಾಡೆಮಿಯ ಅಧ್ಯಕ್ಷರಾದ ನಂತರ ಸಂಘಕ್ಕೆ ಭೇಟಿ ನೀಡಿದ್ದರು. ಅವರು ಸಹ ಸಂಘದಲ್ಲಿ ಕನ್ನಡ ಚಲನಚಿತ್ರದ ಪ್ರಸಿದ್ಧ ನಟ-ನಟಿಯರ 'ಬೆಳ್ಳಿ ಹೆಜ್ಜೆ' ಗಣ್ಯರ ಬದುಕು ಸಾಧನೆಗಳನ್ನು ಹಾಗೂ ಕನ್ನಡ ಚಲನಚಿತ್ರೋದ್ಯಮ ಬೆಳೆದ ಬಂದ ದಾರಿ ಬಗ್ಗೆ ಛಾಯಾಚಿತ್ರ ಹಾಗೂ ಕನ್ನಡ ಚಲನಚಿತ್ರಗಳ ಚಿತ್ರೋತ್ಸವವನ್ನು ಮಾಡಲು ಒಪ್ಪಿಗೆಯನ್ನು ನೀಡಿರುತ್ತಾರೆ. ಅವರಿಗೂ ಸಹ ಧನ್ಯವಾದಗಳು.

ಇವುಗಳೆಲ್ಲದರ ನಡುವೆ ನಮ್ಮ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಡಾ.ಜಿ.ಎ. ಬಿರಾದಾರ ಅವರು ನಮ್ಮನ್ನು ಬಿಟ್ಟು ಇಹಲೋಕಕ್ಕೆ ತೆರಳಿದ್ದಾರೆ. ಅವರು ನಮ್ಮ ಸಂಘದ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅವರು ನಮ್ಮೆಲ್ಲರ ಮನಸ್ಸನ್ನು ಗೆದ್ದ ವ್ಯಕ್ತಿ, ಹೃದಯಾಘಾತದಿಂದ ತುಂಬ ಚಿಕ್ಕ ವಯಸ್ಸಿನಲ್ಲಿಯೇ ಸಾವನ್ನಪ್ಪಿರುವುದು ತುಂಬಾ ಬೇಸರದ ವಿಷಯ. ಅವರ ಮನೆಯವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

❑ **ಸಿ.ಎಂ. ನಾಗರಾಜ**



"ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆ"

## ನೃತ್ಯ ರೂಪಕ-"ಬೆಳ್ಳಿ ಚುಕ್ಕಿ-ಕಿತ್ತೂರು ರಾಣಿ ಚೆನ್ನಮ್ಮ"

ಮತ್ತು

## ನೃತ್ಯ ವೈವಿಧ್ಯ

ಆಗಸ್ಟ್ 11, 2012ರ ಶನಿವಾರ
ಸಮಯ : ಸಂಜೆ 5.00ಗಂಟೆಗೆ
ಸ್ಥಳ : ಸಂಘದ ಸಭಾಂಗಣ

## ದೆಹಲಿ ಕರ್ನಾಟಕ ಸಂಘ

ಜುಲೈ 22, 2012ರ ಭಾನುವಾರ
ಸ್ಥಳ : ಸಂಘದ ಸೆಮಿನಾರ್ ಹಾಲ್
ಸಮಯ : ಸಂಜೆ 5.30ಕ್ಕೆ

### "ದಾಸ ಸಾಹಿತ್ಯ ಪರಂಪರೆಯಲ್ಲಿ ಸುಳಾದಿ"

ಉಪನ್ಯಾಸ ಹಾಗೂ ಗಾಯನ ಕಾರ್ಯಕ್ರಮ

ಶ್ರೀ ಜಗನ್ನಾಥ ದಾಸರು, ಶ್ರೀಮತಿ ತ್ರಿವೇಣಿಬಾಯಿ ಹಾಗೂ
ಶ್ರೀ ನರಸಿಂಹಾಚಾರ್ಯ ಅವರಿಂದ

ತಮಗೆಲ್ಲರಿಗೂ ಆದರದ ಸ್ವಾಗತ

**ಡಾ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ

## ದೆಹಲಿ ಕರ್ನಾಟಕ ಸಂಘ

### ಸಾಹಿತ್ಯ ಸಂಜೆ

ಜುಲೈ 28, 2012ರ ಶನಿವಾರ
ಸ್ಥಳ : ಸಂಘದ ಸೆಮಿನಾರ್ ಹಾಲ್
ಸಮಯ : ಸಂಜೆ 5.30ಕ್ಕೆ

### "ಜೈನ ಸಾ ಹಿತ್ಯದಲ್ಲಿ ಅನನ್ಯತೆ"

ಕುರಿತು ಮಾತನಾಡಲಿದ್ದಾರೆ

ನಾಡೋಜ ಹಂಪನಾ
ಖ್ಯಾತ ಸಾಹಿತಿಗಳು

ತಮಗೆಲ್ಲರಿಗೂ ಆದರದ ಸ್ವಾಗತ

**ಡಾ. ವೆಂಕಟಾಚಲ ಹೆಗಡೆ**
ಅಧ್ಯಕ್ಷರು

**ಸಿ.ಎಂ. ನಾಗರಾಜ**
ಪ್ರಧಾನ ಕಾರ್ಯದರ್ಶಿ

### ಉಚಿತ ವೈದ್ಯಕೀಯ ತಪಾಸಣೆ

ಜುಲೈ 29ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

# ದೆಹಲಿ ಕರ್ನಾಟಕ ಸಂಘಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯುಕ್ತ ಡಾ. ಮನು ಬಳಿಗಾರ್ ಭೇಟಿ

"ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕದ ಸಾಹಿತ್ಯಿಕ, ಸಾಂಸ್ಕೃತಿಕ ರಾಯಭಾರಿಯಂತೆ ದೆಹಲಿ ಕರ್ನಾಟಕ ಸಂಘ ಕಳೆದ ಆರು ದಶಕಗಳಿಂದ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತ ಹೊರನಾಡ ಕನ್ನಡಿಗರ ಅಭಿಮಾನವನ್ನು ಹೆಚ್ಚಿಸಿದೆ" ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯುಕ್ತ ಡಾ. ಮನು ಬಳಿಗಾರ್ ಅವರು ಪ್ರಶಂಸೆಯ ನುಡಿಗಳನ್ನಾಡಿದರು. ಅವರು ಜೂನ್ 9ರಂದು ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ್ದರು.



ಸಂಘದ ಕಟ್ಟಡ ನಿರ್ಮಾಣ ಕಾರ್ಯ ಕೆಲಸ ಕಾರ್ಯಗಳನ್ನು ಪರಿವೀಕ್ಷಿಸಿದ ಮನು ಬಳಿಗಾರ್ ಅವರು ಸಮರ್ಪಕವಾದ ಕೆಲಸ ನಡೆದಿರುವ ಬಗ್ಗೆ ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕಳೆದ ಬಜೆಟ್ ಸಾಲಿನಲ್ಲಿ ಕರ್ನಾಟಕ ಸರ್ಕಾರ ಅನುದಾನ ನೀಡಿದ ಒಂದು ಕೋಟಿ ರೂಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ಸಂಬಂಧಪಟ್ಟ ನಿರ್ಮಾಣ ಕಾರ್ಯಗಳು ಭರದಿಂದ ಸಾಗುತ್ತಿರುವುದರ ಬಗ್ಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ. ವೆಂಕಟಾಚಲ ಹೆಗಡೆ ಅವರು ಡಾ. ಮನು ಬಳಿಗಾರ್ ಅವರಿಗೆ ವಿವರವಾದ ಮಾಹಿತಿ ನೀಡಿದರು. ಮನು ಬಳಿಗಾರ್ ಅವರೊಡನೆ ಕರ್ನಾಟಕ ಸರ್ಕಾರದ ವಿಶೇಷ ಹೆಚ್ಚುವರಿ ಪ್ರತಿನಿಧಿ, ಬೈಕೆರೆ ನಾಗೇಶ್ ಅವರೂ ಉಪಸ್ಥಿತರಿದ್ದು ಸಂಘದ ಕಟ್ಟಡ ಕಾರ್ಯಗಳು ಸೂಕ್ತವಾಗಿ ನಡೆಯುತ್ತಿರುವುದರ ಬಗ್ಗೆ ಹಾಗೂ ಉತ್ತಮ ಕಾರ್ಯಗಳನ್ನು ಮಾಡುತ್ತಿರುವ ಸಂಘದ ಕಾರ್ಯಕಾರಿ ಸಮಿತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಘದ ಅಭಿವೃದ್ಧಿಗಾಗಿ ಸದಾ ಸಹಕಾರ ನೀಡುವುದಾಗಿ ಭರವಸೆ ಇತ್ತರು.

ಇದೇ ಸಂದರ್ಭದಲ್ಲಿ ಧಾರವಾಡ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪಡೆದ ಡಾ. ಮನು ಬಳಿಗಾರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ದೆಹಲಿಯ ಹಿರಿಯ ಕನ್ನಡಿಗ, ಮಾಜಿ ಅಧ್ಯಕ್ಷ, ಭಾರತದ ಮಾಜಿ ಪ್ರಧಾನ ವಾರ್ತಾಧಿಕಾರಿ, ಶ್ರೀ ಐ. ರಾಮಮೋಹನ ರಾವ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದೆಹಲಿ ಕರ್ನಾಟಕ ಸಂಘಕ್ಕೆ ನೀಡುತ್ತಿರುವ ನಿರಂತರ ಪ್ರೋತ್ಸಾಹವನ್ನು ಸ್ಮರಿಸುತ್ತ ಬಳಿಗಾರ್ ಅವರನ್ನು ಅಭಿನಂದಿಸಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು "ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಮಹತ್ತರ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೊಡುಗೆ ಅಪಾರ" ಎಂದು ಅಭಿನಂದಿಸುತ್ತಾ ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ ಸಹಾಯ, ಸಹಕಾರಕ್ಕಾಗಿ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸಿದರು. ಅಲ್ಲದೇ ಕರ್ನಾಟಕ ಸರ್ಕಾರದ ನೆರವಿನಿಂದ ದೆಹಲಿಯ ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠದ ಸ್ಥಾಪನೆ, ಕರ್ನಾಟಕ ಆಹಾರ ಮೇಳ, ದೆಹಲಿಯ ಪ್ರತಿಷ್ಠಿತ ದಿಲ್ಲಿ ಹಾತ್‌ನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತಂತೆ ತಮ್ಮ ಆಶಯಗಳನ್ನು ಮನು ಬಳಿಗಾರ್ ಅವರ ಮುಂದಿಟ್ಟರು. ಹೊರನಾಡಿನಲ್ಲಿ ಕನ್ನಡದ ತೇರನ್ನು ಎಳೆಯುವವರಿಗೆ ಸದಾ ತಮ್ಮ ಇಲಾಖೆಯ ಬೆಂಬಲವಿದೆ ಎಂಬ ಆಶ್ವಾಸನೆಯ ಮೂಲಕ ಬಳಿಗಾರ್ ಅವರು ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ಇತ್ತರು. ಅಲ್ಲದೇ ಮುಂದಿನ ಆಗಸ್ಟ್ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಪ್ರತಿತಿಂಗಳೂ ಕನ್ನಡದ ಕಂಪನ್ನು ಪಸರಿಸುವ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುವ ಆದೇಶವನ್ನು ಸ್ಥಳದಲ್ಲೇ ನೀಡುವ ಮೂಲಕ ತಮ್ಮ ಕನ್ನಡ ಪ್ರೇಮವನ್ನು ಮೆರೆದರು.

ಈಗಾಗಲೇ "ಯಮುನೆಯ ತಡಿಯಲ್ಲಿ ಕನ್ನಡ ನುಡಿ-ಸಾಂಸ್ಕೃತಿಕ ಮಾಲಿಕೆ"ಗಾಗಿ 5 ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಂಜೂರು ಮಾಡಿದ್ದಾರೆ.

ಗದಗ ಜಿಲ್ಲೆಯ ಶಿಗ್ಲಿ ಗ್ರಾಮದ ಪ್ರಗತಿಪರ ಕೃಷಿ ಕುಟುಂಬದಲ್ಲಿ ಜನಿಸಿದ ಮನು ಬಳಿಗಾರ್ ಅವರು ಕರ್ನಾಟಕ ಆಡಳಿತ ಸೇವೆಯಲ್ಲಿ ಅಧಿಕಾರಿಯಾಗಿ ಹತ್ತು ಹಲವು ಇಲಾಖೆಗಳಲ್ಲಿ ಪ್ರಮುಖ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಪ್ರವೃತ್ತಿಯಿಂದ ಸಾಹಿತಿಯಾದ ಬಳಿಗಾರ್ ಅವರು ಕನ್ನಡ ಸಾಹಿತ್ಯಕ್ಕೆ ಒಟ್ಟು 25 ಕೃತಿಗಳ ಕೊಡುಗೆ ನೀಡಿದ್ದಾರೆ. ಸಣ್ಣಕತೆ, ಕವನ, ಲಲಿತ ಪ್ರಬಂಧಗಳು, ನಾಟಕ, ಜೀವನ-ಚರಿತ್ರೆಯನ್ನು ರಚಿಸಿರುವುದಲ್ಲದೇ ಹಲವಾರು ಗ್ರಂಥಗಳನ್ನು ಸಂಪಾದನೆ ಮಾಡಿದ್ದಾರೆ. ಇವರ ಹಲವಾರು ಕಥೆಗಳು ಇಂಗ್ಲಿಷ್, ಒರಿಯಾ ಮತ್ತು ಹಿಂದಿಗೆ ಭಾಷಾಂತರಗೊಂಡಿದೆ ಹಾಗೂ ರವೀಂದ್ರನಾಥ ಠಾಕೂರರ ಅನೇಕ ಕವನಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ಇವರು ಸಲ್ಲಿಸಿರುವ ಅನನ್ಯ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಗೌರವ ಡಾಕ್ಟರೇಟ್ ಪುರಸ್ಕಾರ ನೀಡಿದೆ. 2011ರಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ರನ್ನ ಸಾಹಿತ್ಯ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ ಮೊದಲಾದ ಸಾಹಿತ್ಯ ಪುರಸ್ಕಾರಗಳಲ್ಲದೇ ಸರಕಾರಿ ಸೇವೆಯಲ್ಲಿ ಅತ್ಯುತ್ತಮ ಅಧಿಕಾರಿಯೆಂದು ಎರಡು ಚಿನ್ನದ ಪದಕ ಸಮೇತ ಒಟ್ಟು 5 ಬಹುಮಾನಗಳನ್ನು ಗಳಿಸಿದ ಹೆಗ್ಗಳಿಕೆ ಇವರದ್ದು. ಯುರೋಪ್, ಅಮೆರಿಕಾ, ಥೈಲ್ಯಾಂಡ್, ಮಲೇಷಿಯಾ, ದುಬೈ, ಆಸ್ಟ್ರಿಯಾ, ಸಿಂಗಾಪುರಗಳಲ್ಲಿ ವ್ಯಾಪಕ ಪ್ರವಾಸ ಮಾಡಿ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ.

9ನೇ ತರಗತಿಯಿಂದಲೇ ಬರೆಯುವ ಅಭ್ಯಾಸ ಬೆಳೆಸಿಕೊಂಡ ಸಾಹಿತಿ, ಲೇಖಕ ಮನು ಬಳಿಗಾರ್ ಅವರು ತಮ್ಮ ಬಿಡುವಿಲ್ಲದ ಕೆಲಸದ ಒತ್ತಡದ ನಡುವೆಯೂ ಸಾಹಿತ್ಯ ರಚನೆ ಅಪಾರ ಸಂತೋಷ, ಆತ್ಮತೃಪ್ತಿ ತಂದಿದೆ ಎಂದು ತಮ್ಮ ಸಂತಸವನ್ನು ಹಂಚಿಕೊಂಡರು.

ಹೊರನಾಡಿನಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಹಬ್ಬಿಸುವ ಎಲ್ಲ ಕನ್ನಡಪರ ಚಟುವಟಿಕೆಗಳಿಗೆ ಉದಾರವಾಗಿ ಸ್ಪಂದಿಸುವ ಡಾ. ಮನು ಬಳಿಗಾರ್ ಅವರು ತಮ್ಮ ಅಧಿಕಾರಾವಧಿಯ ಕ್ರಿಯಾ ಯೋಜನೆಯಲ್ಲಿ ಹಮ್ಮಿಕೊಂಡಿರುವ ಅನೇಕ ಯೋಜನೆಗಳ ಬಗ್ಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ದೆಹಲಿಯ ಇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಮಾಹಿತಿ ನೀಡಿ ಪ್ರೋತ್ಸಾಹಿಸಿದರು. ದೆಹಲಿಯ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸರವು ಕೃಷ್ಣ ಭಟ್, ಪ್ರಧಾನ ಕಾರ್ಯದರ್ಶಿ ಆಂಜನಿ ಗೌಡ ಹಾಗೂ ಮಾಧ್ಯಮ ಮಿತ್ರರು ಉಪಸ್ಥಿತರಿದ್ದು ಮನು ಬಳಿಗಾರ್ ಅವರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ತಮ್ಮ ಅನೇಕ ಕೋರಿಕೆಗಳನ್ನು ಮಂಡಿಸಿ ಸಮಾಧಾನಕರವಾದ ಸಲಹೆಗಳನ್ನು ಪಡೆದರು.

ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರ್ವಹಿಸಿದರು. ಸಕಾರಾತ್ಮಕವಾಗಿ ಸ್ಪಂದಿಸಿ ಉತ್ತೇಜನ ನೀಡಿದ್ದಕ್ಕಾಗಿ ಬಳಿಗಾರ್ ಅವರಿಗೆ ಸಂಘದ ಜಂಟಿ ಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದ ನಂತರ ವಿಶೇಷ ಭೋಜನ ಕೂಟದ ವ್ಯವಸ್ಥೆ ಮಾಡಲಾಗಿತ್ತು.

❑ ಉಷಾ ಭರತಾದ್ರಿ



# ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತ ಡಾ. ಮನು ಬಳಿಗಾರ್ ಅವರಿಂದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸ್ಥಳ ಪರೀಕ್ಷೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯು ಬಹು ಉದ್ದೇಶಿತ ಶೈಕ್ಷಣಿಕ ಸಮುಚ್ಚಯದ ನಿರ್ಮಾಣ ಯೋಜನೆ ಕೈಗೊಂಡಿದ್ದು, ಕರ್ನಾಟಕ ಸರ್ಕಾರ ಈ ಯೋಜನೆಗೆ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಕನ್ನಡ ಪರ ಕೆಲಸಗಳಿಗೆ ಕಾಳಜಿಯಿಂದ ಸಹಕಾರ ನೀಡುವ ಡಾ. ಮನು ಬಳಿಗಾರ್, ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಮತ್ತು ಕರ್ನಾಟಕ ಭವನದ ತಾಂತ್ರಿಕ ಪರಿಣತರೊಂದಿಗೆ ಸ್ಥಳಕ್ಕೆ ಆಗಮಿಸಿ ಸ್ಥಳ ಪರೀಕ್ಷೆ ಮಾಡಿದರಲ್ಲದೆ, ವಾಸ್ತುಶಿಲ್ಪಿಗಳೊಡನೆ ಚರ್ಚಿಸಿ ಯೋಜನೆಯ ಸಮಗ್ರ ಮಾಹಿತಿ ಪಡೆದರು. ಕಾರ್ಯ ಯೋಜನೆಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಪರಿಶೀಲಿಸಿದ ಬಳಿಗಾರ್ ಸರ್ಕಾರದಿಂದ ಮಂಜೂರಾದ ಒಂದು ಕೋಟಿ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡುವುದಾಗಿ ತಿಳಿಸಿದರು.



ಕನ್ನಡ ಶಿಕ್ಷಣ ಸಂಸ್ಥೆಯ ಕುರಿತಾದ ಎಲ್ಲಾ ಮಾಹಿತಿಗಳನ್ನು ಶಾಲಾ ಆಡಳಿತ ಮಂಡಳಿ ನೀಡಿದ್ದು, ಅಧ್ಯಕ್ಷ ಎಸ್. ಕೃಷ್ಣ ಭಟ್, ಗೌರವ ಕಾರ್ಯದರ್ಶಿ ಆಂಜನಿ ಗೌಡ, ಉಪಾಧ್ಯಕ್ಷ ಬಸವರಾಜ್ ಎಸ್. ಮೇಟಿ, ಖಜಾಂಚಿ ಸಿ.ಆರ್. ಶ್ರೀನಿವಾಸ್, ಸದಸ್ಯರುಗಳಾದ ಎನ್.ಆರ್. ಶ್ರೀನಾಥ್, ರಾಧಾಕೃಷ್ಣ, ಗುಡ್ಡೇ ಗೌಡ, ಕಾಶೀನಾಥ್ ಬಿರಾದಾರ ಮಾತ್ರವಲ್ಲದೆ ರೈಲ್ವೇ ಸಚಿವಾಲಯದ ಅಧಿಕಾರಿ ರಮೇಶ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಡಾ. ಬಿರಾದಾರ್, ವಿ.ವಿ. ಬಿರಾದಾರ್, ಎನ್.ಎ. ಮಾಧವ, ಜನಕಪುರಿ ಕನ್ನಡಕೂಟದ ಅಧ್ಯಕ್ಷ ಎಸ್.ಎಲ್. ಭಂಡಾರ್‌ಕರ್, ರೋಶನ್, ರತ್ನಾಕರ ಪೂಜಾರಿ, ರಕ್ಷಕ ಸಂಘದ ಕಾರ್ಯದರ್ಶಿ ಕುಮಾರಸ್ವಾಮಿ, ಶಿವರಾಮ ಗೌಡ, ವಿದ್ಯಾ ಕೋಳ್ಯೂರು, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ನಾರಾಯಣ, ಶಶಿಕಾಂತ ಪಾಟೀಲ, ಕರ್ನಾಟಕ ಭವನದ ಕಾರ್ಯಪಾಲ ಅಭಿಯಂತ ಗುರುದೇವ್, ಪ್ರಾಂಶುಪಾಲ ಕೆ.ಟಿ. ಗಣೇಶ್ ಹಾಗೂ ಅನೇಕ ಮಂದಿ ಗಣ್ಯರು ಉಪಸ್ಥಿತರಿದ್ದರು.

ಕನ್ನಡೇತರ ಮಕ್ಕಳಿಗೂ ಸಹ ಕಡ್ಡಾಯವಾಗಿ ಕನ್ನಡವನ್ನು ಪ್ರಾಥಮಿಕ ತರಗತಿಗಳಲ್ಲಿ ನಿರಂತರವಾಗಿ ಕಲಿಸುವ ಯೋಜನೆ ದೇಶದ ಬೇರೆಲ್ಲೂ ಇಲ್ಲವೆಂಬುದನ್ನು ತಿಳಿದು ಮನು ಬಳಿಗಾರ್ ಶ್ಲಾಘಿಸಿದರಲ್ಲದೆ, ಶಾಲೆಗೆ 1000 ಕನ್ನಡ ಪುಸ್ತಕಗಳನ್ನು ಉಚಿತವಾಗಿ ಕೊಡುವ ಭರವಸೆ ಇತ್ತರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಮಗ್ರ ಚಟುವಟಿಕೆಗಳನ್ನು ಗಮನಿಸಿದ ಮನು ಬಳಿಗಾರ್ ಮತ್ತು ಬೈಕೆರೆ ನಾಗೇಶ್ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಎಲ್ಲಾ ರೀತಿಯ ಸಹಕಾರ ನೀಡಿ, ಸದ್ಯದಲ್ಲಿಯೇ ಅನುದಾನವನ್ನು ಬಿಡುಗಡೆ ಮಾಡುವ ಭರವಸೆ ಇತ್ತರು.


**Saujanya Printing Press**

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ರಾಜಧಾನಿಯಲ್ಲಿ ಜೈನ ಅಸ್ಮಿತೆ–ಕನ್ನಡಿಗ ಆಚಾರ್ಯ ಶ್ರೀ ವಿದ್ಯಾನಂದ ಮುನಿ



ಐತಿಹಾಸಿಕವಾಗಿ ಕರ್ನಾಟಕದೊಂದಿಗೆ ಜೈನ ಧರ್ಮದ ಸಂಬಂಧ ಕ್ರಿ.ಪು. 6ನೇ ಶತಮಾನದಿಂದಲೇ ಇದೆ. ಕನ್ನಡಕ್ಕೆ ಪಂಪ, ಪೊನ್ನ, ರನ್ನ, ಜನ್ನ, ರತ್ನಾಕರ ವರ್ಣಿಯಂಥ ಮಹಾಕವಿಗಳನ್ನು ಅದು ನೀಡಿದ್ದಲ್ಲದೇ, ಪ್ರಖ್ಯಾತವಾದ ಗೊಮ್ಮಟನನ್ನೂ ಅದು ಕೊಡುಗೆಯಾಗಿ ನೀಡಿದೆ. ಕರ್ನಾಟಕವನ್ನು 'ಜೈನ ಧರ್ಮದ 'ಆಡುಂಬೊಲಂ' ಎಂದು ಒಂದು ಶಾಸನ ಕರೆದಿದೆ. ಆದರೆ ಒಂದು ಕಾಲಕ್ಕೆ ಹೀಗೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜಿನ ಧರ್ಮವು ಕಳೆದ ಅನೇಕ ಶತಮಾನಗಳಿಂದ ಕಳೆಗುಂದುತ್ತಾ ಬಂದು ಇದೀಗ ಅಲ್ಪಸಂಖ್ಯಾತ ಸಮುದಾಯವಾಗಿ ಪರಿಗಣಿಸಲಾಗುತ್ತಿದೆ. ಜೈನ ಧರ್ಮ ಉಳಿದುಕೊಂಡು ಬಂದಿದ್ದಾದರೆ ಅದು ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಎನ್ನಬಹುದು. ಕರ್ನಾಟಕದಲ್ಲಿ ಇಂದಿಗೂ ಸಾಕಷ್ಟು ಸಂಖ್ಯೆಯಲ್ಲಿ ಜೈನರಿದ್ದಾರೆ. ಕರ್ನಾಟಕದ ಶ್ರವಣಬೆಳಗೊಳ ಜೈನ ಧರ್ಮಿಗಳ ಪವಿತ್ರ ಯಾತ್ರಾ ಸ್ಥಳವಾಗಿದೆ. ಅದನ್ನು ಜೈನ ಕಾಶಿಯೆಂತಲೂ ಕರೆಯುತ್ತಾರೆ. ಇನ್ನು ಜೈನ ಧರ್ಮದ ಪ್ರಾಚೀನತೆ ಹರಪ್ಪಾ–ಮೊಹೆಂಜೋದಾರೋ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎನ್ನುವ ಪುರಾವೆಗಳನ್ನು ಕೆತ್ತನೆ ಅವಶೇಷಗಳಲ್ಲಿ ದೊರೆತ ವೃಷಭದೇವರ, ಮತ್ತು ಸಂನ್ಯಾಸಿಗಳ ಧ್ಯಾನಸ್ಥ ಪ್ರತಿಮೆಗಳು ಪ್ರಮಾಣೀಕರಿಸಿವೆ. ಜೈನ ಧರ್ಮದ ಆಧ್ಯಾತ್ಮಿಕ ಆಚಾರ್ಯರು, ಸಾಧು ಸಂನ್ಯಾಸಿಗಳು ಜೈನ ಧರ್ಮದ ಪ್ರಚಾರ ಕಾರ್ಯದ ಜೊತೆ ನಿರಂತರವಾಗಿ ಸಾಮಾಜಿಕ, ಶೈಕ್ಷಣಿಕ , ರಾಜಕೀಯ ಕ್ಷೇತ್ರಗಳಿಗೆ ತಮ್ಮ ಅನನ್ಯ ಪರಂಪರೆಯ ಅಮೂಲ್ಯ ಕೊಡುಗೆಯನ್ನು ಕಾಲಕಾಲಕ್ಕೆ ನೀಡುತ್ತ ಬಂದಿದ್ದಾರೆ. ಅಂಥವರಲ್ಲಿ ಆಚಾರ್ಯ ಕುಂದ ಕುಂದ ಭಾರತಿ ಅಗ್ರಗಣ್ಯರು. ಜೈನರು ಆಚಾರ್ಯ ಕುಂದ ಕುಂದ ಭಾರತಿ ಅಂಥ ಪರಮ ಪಾವನ ಚೇತನರ ಸ್ಮರಣೆ ಮಾತ್ರವೇ ಮೋಕ್ಷಪ್ರದಾನವಾದುದು ಎಂದು ನಂಬುತ್ತಾರೆ. ಅನೇಕ ಜೈನ ಸಂನ್ಯಾಸಿಗಳು, ಸಾಧುಗಳು, ವಿದ್ವಾಂಸರುಗಳು ತಮ್ಮನ್ನು ಆಚಾರ್ಯ ಕುಂದ ಕುಂದರ ವಂಶಜರೆಂದು ಗುರುತಿಸಿಕೊಳ್ಳಲು ಹೆಮ್ಮೆಪಡುತ್ತಾರೆ.

ರಾಷ್ಟ್ರದ ರಾಜಧಾನಿ ದೆಹಲಿಯ ದಕ್ಷಿಣ ವಲಯದ ಕಟವಾರಿಯಾ ಸರಾಯ್ ಅಥವಾ ಕುತುಬ್ ಸಾಂಸ್ಥಿಕ ಪ್ರದೇಶದಲ್ಲಿ 'ಪ್ರಾಕೃತ ಭವನ' ಅಥವಾ 'ಕುಂದ ಕುಂದ ಭಾರತಿ' ಜೈನ ದಿಗಂಬರ ಸಂಘ ಯಾವ ಸದ್ದು ಗದ್ದಲವಿಲ್ಲದೇ ತನ್ನ ಸಾಮಾಜಿಕ, ಆಧ್ಯಾತ್ಮಿಕ, ಶೈಕ್ಷಣಿಕ ಸೇವೆಯನ್ನು ನೀಡುತ್ತಾ ಬಂದಿದೆ. ಆಚಾರ್ಯ ಕುಂದ ಕುಂದರು ಜೈನರ 24ನೇ ತೀರ್ಥಂಕರ – ಭಗವಾನ ಮಹಾವೀರನ ನಂತರ ಅತ್ಯುನ್ನತ ಸ್ಥಾನದಲ್ಲಿ ಗುರುತಿಸಲ್ಪಡುತ್ತಾರೆ. ಆಚಾರ್ಯ ಕುಂದ ಕುಂದರು ಜೈನ ದಿಗಂಬರ ಪಂಥದದವರು. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕೊಂದಾಕುಂದ ಅಥವಾ ಕುಂದಕುಂದಾಪುರಮ್ ಎಂಬ ಗ್ರಾಮದವರು. ಅನೇಕ ಪುರಾತನ ಶಿಲಾನ್ಯಾಸಗಳಿಂದ ಅವರು 108 ಕ್ರಿ. ಪೂ. ದಲ್ಲಿದ್ದರು ಮತ್ತು ತಮ್ಮ ಹನ್ನೊಂದನೇ ವಯಸ್ಸಿನಿಂದಲೇ ನಿರ್ಗ್ರಂಥ (ದಿಗಂಬರ) ಪಂಥಕ್ಕೆ ಚಾಲನೆ ನೀಡಿದರು ಎನ್ನುತ್ತಾರೆ. ತಮ್ಮ 44 ನೇ ವಯಸ್ಸಿನಲ್ಲೇ ಅಂದರೆ 64 ಕ್ರಿ.ಪೂ. ದಲ್ಲೆ ಜೈನ ಆಚಾರ್ಯರ ಉಚ್ಚ ಪದವಿಯನ್ನು ಪಡೆದರು. 33 ವರ್ಷಗಳ ಕಾಲ ನಿರಂತರ ಆಳವಾದ ಧಾರ್ಮಿಕ ಅಧ್ಯಯನ, ವ್ರತ ನಿಯಮ, ಕಠಿಣ ಪ್ರಾಯಶ್ಚಿತದಿಂದ ಪ್ರಮುಖ ದಿಗಂಬರ ಸಂನ್ಯಾಸಿಯಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಾದ್ಯಂತ ಪೂಜಿಸಲ್ಪಡುತ್ತಾರೆ. ತಮ್ಮ 96ನೇ ವಯಸ್ಸಿನಲ್ಲಿ ಅಂದರೆ 12 ಕ್ರಿ.ಪೂ ದಲ್ಲಿ ಜೈನ ಸಲ್ಲೇಖನ (ಆಮರಣಾಂತ ಉಪವಾಸ) ಪದ್ಧತಿಯಿಂದ ದೇಹತ್ಯಾಗ ಮಾಡಿದರು.

ಪರಮಪೂಜ್ಯ ಶ್ರೀ ವಿದ್ಯಾನಂದ ಆಚಾರ್ಯ ದಿಗಂಬರ ಜೈನ ಸಮುದಾಯದ ಪ್ರತಿಷ್ಠಿತ ಹೆಸರು. ಈ ಯುಗದ ಯುಗಪುರುಷರು, ಮನೋಜ್ಞ ಚಿಂತಕರು. 1945ರಲ್ಲಿ ಪರಮಪೂಜ್ಯ ಆಚಾರ್ಯ ಶ್ರೀ ಮಹಾವೀರ ಕೀರ್ತಿ ಅವರಿಂದ ಕ್ಷುಲ್ಲಕ ದೀಕ್ಷೆ ಪಡೆದು ತಮ್ಮ ಜೀವನದ ಸುದೀರ್ಘ ಕಾಲಾವಧಿಯಲ್ಲಿ ಜೈನದರ್ಶನ ಹಾಗೂ ಇತರ ಭಾರತೀಯ ದರ್ಶನಗಳನ್ನು ಆಳವಾಗಿ ಅಭ್ಯಸಿಸಿ, ಆಗಾಧವಾದ ಜ್ಞಾನಪ್ರಜ್ಞೆಯನ್ನು ಬೆಳಗಿದವರು. ಆನಂತರ 1963ರಲ್ಲಿ ಆಚಾರ್ಯರತ್ನ ಶ್ರೀ ದೇಶಭೂಷಣರಿಂದ ಮುನಿದೀಕ್ಷೆಯನ್ನು ಪಡೆದರು.

ಕರ್ನಾಟಕದ ಚಿಕ್ಕೋಡಿ ತಾಲೂಕಿನ, ಶೇಡಬಾಳ ಗ್ರಾಮದ ಬ್ರಾಹ್ಮಣ ಉಪಾಧ್ಯೆ ಕುಟುಂಬದಲ್ಲಿ ಏಪ್ರಿಲ್ 22, 1925 ರಲ್ಲಿ ಜನಿಸಿದ ಬಾಲಕನಿಗೆ ಸುರೇಂದ್ರ ಎಂದು ಹೆಸರಿಟ್ಟರು. ತಾಯಿ ಸರಸ್ವತಿ ದೇವಿ, ತಂದೆ ಕಲ್ಲಪ್ಪಾ ಉಪಾಧ್ಯೆ. ಈ ಬಾಲಕ ಮುಂದೆ ಜೈನ ಸಮಾಜದ ಮಹಾಮುನಿ ವಿದ್ಯಾನಂದನಾಗುತ್ತಾನೆಂದು ತಂದೆತಾಯಿಗಳು ಕನಸಿನಲ್ಲೂ ಯೋಚಿಸಿದ್ದಿಲ್ಲ. ಬಾಲ್ಯದಿಂದಲೂ ಸುರೇಂದ್ರನಿಗೆ ಪಾಠಶಾಲಾ ಅಭ್ಯಾಸಕ್ಕಿಂತ ಸಾಧು ಸಂತರ ಸಂದರ್ಶನ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಯತ್ತ ಒಲವು. ತಂದೆಯಿಂದ ಶಿಸ್ತು, ಸ್ವಾಧ್ಯಾಯದ ಪ್ರಾಯೋಜನ ಪಡೆದುಕೊಂಡರು. ತಮ್ಮ 17ನೇ ವಯಸ್ಸಿನಲ್ಲಿ ಅವರಿಗೆ ಆಚಾರ್ಯ ಮಹಾವೀರ ಕೀರ್ತಿ ಮುನಿಯ ಪ್ರಥಮ ಭೆಟ್ಟಿಯ ಲಾಭ ದೊರೆಯಿತು. ಧರ್ಮ–ಆಧ್ಯಾತ್ಮಿಕ ಚರ್ಚೆ, ಮುನಿಚರ್ಯೆಯ ಸಾಧನೆಗಳನ್ನು ಹತ್ತಿರದಿಂದ ಕಂಡ ಸುರೇಂದ್ರನಿಗೆ ಲೌಕಿಕ ಭೋಗಲಾಲಸೆಗಳಿಂದ ವೈರಾಗ್ಯ ಉಂಟಾಯಿತು. ಆಗಲೇ ಅವರು ತಾವು ಭಗವಾನ್ ಮಹಾವೀರ ಸ್ವಾಮಿಯ ಮುಕ್ತಿಮಾರ್ಗದ ಅನುಯಾಯಿಯಾಗುತ್ತೇನೆ ಎಂದು ದೃಢ ಸಂಕಲ್ಪವನ್ನು ಮಾಡಿದರು. ಅನೇಕ ಗ್ರಾಮ ನಿವಾಸಿಗಳ, ಹಿತ ಚಿಂತಕರ ವಿರೋಧಗಳಿದ್ದರೂ ಯುವಕ ಸುರೇಂದ್ರ ವಿಚಲಿತನಾಗದೇ ನಿರಂತರ ಹನ್ನೆರಡು ವರ್ಷಗಳ ಕಾಲ ಧರ್ಮಾಧ್ಯಯನ ಹಾಗೂ ವೈರಾಗ್ಯವನ್ನು ಕಠಿಣಗೊಳಿಸುತ್ತ ಗುರುವಿನ ಮಾರ್ಗದರ್ಶನ ಅನುಶಾಸನದ ಪಾಲನೆಮಾಡಿದರು.

1945ರ ಅನಂತ ಚತುದರ್ಶಿ ದಿನದಂದು ಎರಡು ಪ್ರತಿಮೆ ವ್ರತ ಹಿಡಿದು ವ್ರತ ಶ್ರಾವಕರಾದರು 6–7 ತಿಂಗಳು ಬ್ರಹ್ಮಚಾರಿ ಸುರೇಂದ್ರ ಕಠಿಣತಮ ಸಂಯಮ ಧಾರಣೆಯನ್ನು ಪಾಲಿಸಿದರು. ಕೊನೆಗೆ 1946, ಏಪ್ರಿಲ್ 15ರಂದು, ಆಚಾರ್ಯರ ಕೃಪೆಯಿಂದ ಸುರೇಂದ್ರ ತಮದರ್ಶೈ ಗ್ರಾಮದಲ್ಲಿ 'ಕ್ಷುಲ್ಲಕ ದೀಕ್ಷೆ' ಪಡೆದು 'ಕ್ಷುಲ್ಲಕ ಪಾರ್ಶ್ವಕೀರ್ತಿ ವರ್ಣಿ' ಯಾದರು. ಇದೇ ಅವಸ್ಥೆಯಲ್ಲಿ ಆಚಾರ್ಯಶ್ರೀ ಅವರೊಡನೆ ಕೊಣ್ಣೂರಿನಲ್ಲಿ ಚಾತುರ್ಮಾಸವನ್ನು ಕಳೆದರು. ಅಲ್ಲಿ ಭದ್ರಬಾಹು ಗುಹೆಯಲ್ಲಿ ಸಾಧನೆಯಲ್ಲಿದ್ದು, ಚಾತುರ್ಮಾಸ ಕಳೆದು, ತದನಂತರ ತಮ್ಮ ಗುರುವಿನ ಆಜ್ಞೆ ಪಡೆದು ತೀರ್ಥಯಾತ್ರೆಗೆ ಹೊರಟರು. ಸಿದ್ಧವನ ಗುರುಕುಲ ಧರ್ಮಸ್ಥಳದಲ್ಲಿ ಅವರಿಗೆ ಮಹಾನ್ ವಿದ್ವಾನ್ ತಪಸ್ವಿ, ವಯೋವೃದ್ಧರಾದ ನೇಮಿಸಾಗರ ವರ್ಣಿ ಭೆಟ್ಟಿಯಾದರು. ಕೆಲಕಾಲ ಅಲ್ಲೇ ನೆಲೆಸಿ ಅನೇಕ ಕನ್ನಡ ಗ್ರಂಥಗಳ ಅಧ್ಯಯನ ಮತ್ತು ಧರ್ಮಶಾಸ್ತ್ರದ ಕುರಿತು ಆಳವಾದ ಅಭ್ಯಾಸ ಮತ್ತು ಧಾರ್ಮಿಕ ಚಿಂತನೆಯ ಅನುಭವವನ್ನು ಗಳಿಸಿದರು. ಅಲ್ಲಿಂದ ರಾಜಸ್ತಾನ, ನಾಗೋರ್ ಮುಂತಾದ ಪ್ರದೇಶಗಳನ್ನು ಸುತ್ತುತ್ತಾ ಆಯಾ ಪ್ರದೇಶದ ಶಿಲಾನ್ಯಾಸಗಳನ್ನು ಮತ್ತು ಪಾಂಡುಲಿಪಿಗಳ ಅಧ್ಯಯನ ಮಾಡುತ್ತಾ ದೆಹಲಿ ತಲುಪಿದರು. ದೆಹಲಿಯಲ್ಲಿ ಆಚಾರ್ಯ ರತ್ನ ದೇಶಭೂಷಣ ಮುನಿರಾಜ ವಿರಾಜಮಾನರಾಗಿದ್ದರು. ಅವರ ದರ್ಶನಾಭಿಲಾಷಿ ಮತ್ತು ದರ್ಶನ ಜ್ಞಾನ ಜಿಜ್ಞಾಸುವಾಗಿ ಕ್ಷುಲ್ಲಕರು ಅವರ ದರ್ಶನವನ್ನು ಪಡೆದರು. ಕ್ಷುಲ್ಲಕರ ಸಮಗ್ರ ಜ್ಞಾನವನ್ನು, ಆಧ್ಯಾತ್ಮಿಕ ಮತ್ತು ಧಾರ್ಮಿಕ ಚಿಂತನೆಯ ಜಿಜ್ಞಾಸೆಯನ್ನು ಕಂಡು ದೇಶಭೂಷಣರು ಅತ್ಯಂತ ಪ್ರಸನ್ನರಾದರು. ಇಷ್ಟು ಚಿಕ್ಕವಯಸ್ಸಿಗೆ ಇಷ್ಟೊಂದು ವಿದ್ವತ್ತನ್ನು, ಜ್ಞಾನವನ್ನು ಸಂಪಾದಿಸಿದ್ದಿಯಾ, ಇದೇ ಶುಭಕಾಲದಲ್ಲಿ ಮುನಿದೀಕ್ಷೆಯ ಧಾರಣವನ್ನು ಯಾಕೆ ಮಾಡಬಾರದು? ಎಂದರಂತೆ. ನೀನು ಮುಂದೆ ವಿಶ್ವವಿಖ್ಯಾತನಾಗುವೆ ಮತ್ತು ಜೈನಧರ್ಮದ ಸಾರವನ್ನು ವಿಶ್ವ ಪ್ರಸಿದ್ಧಗೊಳಿಸುತ್ತಿ ಎಂದರಂತೆ.

ಅವರಿಗೆ ಮುನಿದೀಕ್ಷೆ ಯಾಕೆ ಅನ್ನುವ ಕೆಲವು ವಿರೋಧಿಗಳ ಗುಂಪೂ ಇದ್ದಿತು. ಆಚಾರ್ಯರತ್ನ ದೇಶಭೂಷಣರು ಯಾವುದನ್ನೂ ಲೆಕ್ಕಿಸಲಿಲ್ಲ. 1963 ಜುಲೈ 25 ರಂದು ದೆಹಲಿಯ ಪೆರೇಡ್ ಮೈದಾನದಲ್ಲಿ ಸಾವಿರಾರು ಶ್ರದ್ಧಾಳುಗಳ ಸಮಕ್ಷದಲ್ಲಿ 'ಕ್ಷುಲ್ಲಕ ಪಾರ್ಶ್ವಕೀರ್ತಿ ವರ್ಣಿ" ಅವರಿಗೆ 'ಮುನಿದೀಕ್ಷೆ'ಯನ್ನು ಆಚಾರ್ಯರತ್ನ ದೇಶಭೂಷಣ ಮುನಿಗಳು ನೀಡಿದರು. ಅಂದಿನಿಂದ ಅವರು 'ಮುನಿಶ್ರೀ ವಿದ್ಯಾನಂದ' ರಾದರು. ಮುಂದೆ 1987, ಜೂನ್ 28 ರಲ್ಲಿ ಪರಮಪೂಜ್ಯ ಆಚಾರ್ಯರತ್ನ ದೇಶಭೂಷಣರ ಆದೇಶದ



ಅನುಸಾರ 'ಚತುಸಂಘದ' ಮೂಲಕ ಮುನಿಶ್ರೀ ವಿದ್ಯಾನಂದರು 'ಆಚಾರ್ಯಶ್ರೀ ವಿದ್ಯಾನಂದ ಮುನಿರಾಜ'ರಾಗಿ ಆಚಾರ್ಯ ಪದವಿಯನ್ನು ಪಡೆದರು.

ಆಚಾರ್ಯ ಶ್ರೀ ವಿದ್ಯಾನಂದ ಮುನಿಗಳು ಕೇವಲ ಜೈನಧರ್ಮಿಗಳಿಗೆ ಮಾತ್ರವಲ್ಲದೇ ಇಡೀ ದೇಶದ ಜನಹಿತಕ್ಕಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಕಾಲುನಡಿಗೆಯಲ್ಲಿ ಯಾತ್ರೆ ಮಾಡಿದ್ದಾರೆ. ಜನರಲ್ಲಿ ಮೌಲಿಕ ಆಧ್ಯಾತ್ಮಿಕ ಚಿಂತನೆಗಳನ್ನು ಬಿತ್ತಿದ ರಾಷ್ಟ್ರ ಸಂತರು. ಆಚಾರ್ಯ ಶ್ರೀಗಳ ಜೀವನ ಕೇವಲ ವ್ಯಕ್ತಿವಿಕಸನ ಪ್ರಧಾನವಾಗಿರದೇ ಸಮಸ್ತ ಮನುಕುಲದ ವಿಕಸನವೇ ಅವರ ಧ್ಯೇಯೋದ್ದೇಶವಾಗಿ, ಆಧ್ಯಾತ್ಮಿಕ ಸಾಧನೆಯೊಂದಿಗೆ ಅನಾಸಕ್ತಿ ಮತ್ತು ಅಪರಿಗ್ರಹದ ಉತ್ತಮ ಪ್ರಯೋಗಶಾಲೆಯಾಗಿ ಸಿದ್ಧವಾಗಿದೆ. ಅವರು ಮಾಡಿದ ಜೈನ ಪರಂಪರೆಯ ಯುಕ್ತಾಯುಕ್ತಿ ವ್ಯಾಖ್ಯೆಗಳು, ಪ್ರವಚನಗಳು–ಅಂಧವಿಶ್ವಾಸದ ಬುಡವನ್ನು ಅಲ್ಲಾಡಿಸಿವೆ, ಮನುಷ್ಯನಿಗೆ ಪ್ರಖರ ಮನೋಬಲ ದೊರಕಿದೆ. ಆಚಾರ್ಯ ಶ್ರೀವಿದ್ಯಾನಂದ ಮುನಿಗಳ ಉದಾರ ಚಿಂತನೆಯಿಂದ ಭಾರತೀಯತೆಗೆ ಮತ್ತು ಜೈನ ಸಂಸ್ಕೃತಿಗೆ ಒಂದು ಹೊಸ ಆಯಾಮ ದೊರೆತದ್ದನ್ನು ಭಾರತದ ಇತಿಹಾಸವೆಂದೂ ಮರೆಯಲಾರದು. ಅವರು ಯುಗಪುರುಷರು. ಅವರಿಗೆ ಈ ಯುಗದ ಭಾಷೆ ಚೆನ್ನಾಗಿ ಅರ್ಥವಾಗುತ್ತದೆ.

ಪ್ರಾಚೀನ ಭಾರತೀಯ ರಾಜರು ಆಶ್ರಯಿಸಿದ ಸಾಹಿತ್ಯದ ಭಾಷೆ ಪ್ರಾಕೃತ. ಪ್ರಾಕೃತ ಆರಂಭಿಕ ಉಪಲಬ್ಧ ಬಳಕೆಯನ್ನು ಚಕ್ರವರ್ತಿ ಅಶೋಕನ ಶಾಸನಗಳಲ್ಲಿ ಕಾಣಬಹುದು. ಪುರಾತನ ಜೈನ ಕವಿಗಳ ಸಾಹಿತ್ಯ–ಕಾವ್ಯವೆಲ್ಲ ಪ್ರಾಕೃತ ಅಪಭ್ರಂಶದಲ್ಲಿದೆ. ಇದಲ್ಲದೆ, ಪ್ರಾಕೃತ ತೇರವಾಡಾ ಬೌದ್ಧರ ಮತ್ತು ಜೈನರ ಪ್ರಾಕೃತ ವ್ಯಾಕರಣ ಮತ್ತು ಸಾಹಿತ್ಯದಲ್ಲಿನ ನಾಟಕಗಳು ಮತ್ತು ಮಹಾಕಾವ್ಯಗಳಲ್ಲಿ ಪ್ರಾಕೃತ ಕೃತಿಚಕ್ರದ ಪಾಲಿ ರೂಪದ ಸಾಹಿತ್ಯವು ಹೇರಳವಾಗಿ ದೊರೆಯುತ್ತದೆ. ವಿವಿಧ ಪ್ರಾಕೃತ ಭಾಷೆ ವಿವಿಧ ಆಶ್ರಯದಾತ ರಾಜವಂಶಗಳಿಗೆ ಸಂಬಂಧಿಸಿದಂತೆ, ವಿವಿಧ ಧರ್ಮಗಳು ಮತ್ತು ವಿವಿಧ ಸಾಹಿತ್ಯಿಕ ಸಂಪ್ರದಾಯಗಳು, ಎಲ್ಲವೂ ಪ್ರಾಕೃತ್ ಭಾರತದ ಇತಿಹಾಸ ಸಾಹಿತ್ಯದ ಒಂದು ವಿಶಿಷ್ಟ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಇಂದು ಎಲ್ಲೆಡೆ ಪ್ರಾಕೃತ ಭಾಷೆ ಪ್ರಚಾರ–ಪ್ರಸಾರವಾಗುತ್ತಿರುವ ಶ್ರೇಯ ಆಚಾರ್ಯಶ್ರೀಗಳಿಗೆ ಸಲ್ಲುತ್ತದೆ. ಕುಂದ ಕುಂದ ಭಾರತಿ ಜೈನ ಶೋಧ ಸಂಸ್ಥಾನದಲ್ಲಿ ಅನೇಕ ವಿದ್ಯಾರ್ಥಿಗಳು ಪ್ರಾಕೃತ ಭಾಷೆ ಕಲಿಯುತ್ತಿದ್ದಾರೆ. ದೆಹಲಿಯಲ್ಲಿ ಪ್ರಾಕೃತ್ ಅಕಾಡೆಮಿ, ಶೌರಸೇನಿ ಪ್ರಾಕೃತ ಸಾಹಿತ್ಯ ಸಂಸ್ಥೆಯನ್ನು ಸ್ಥಾಪಿಸಿದ ಹೆಗ್ಗಳಿಕೆಯೂ ಪರಮಪೂಜ್ಯರಿಗೆ ಸಲ್ಲುತ್ತದೆ.

ಚಾರಿತ್ರಚಕ್ರವರ್ತಿ ಪುರಸ್ಕಾರ, ಅಹಿಂಸಾ ಪುರಸ್ಕಾರ, ಆಚಾರ್ಯ ವಿದ್ಯಾನಂದ ಪುರಸ್ಕಾರ, ಪ್ರಾಕೃತ ಭಾಷಾ ವಿದ್ವಾಂಸರಿಗೆ ರಾಷ್ಟ್ರೀಯ ಪುರಸ್ಕಾರ ಮುಂತಾದ ಪುರಸ್ಕಾರಗಳನ್ನು ನೀಡಿ ಶ್ರೇಷ್ಠ ಸಾಹಿತಿ, ಪಂಡಿತ –ವಿದ್ವಾಂಸರನ್ನು ಗೌರವಿಸುವ ಪದ್ಧತಿಯನ್ನು ಹುಟ್ಟುಹಾಕಿದ್ದು ಪರಮಪೂಜ್ಯ ವಿದ್ಯಾನಂದ ಆಚಾರ್ಯಶ್ರೀಗಳೇ. ಆಚಾರ್ಯರು ದೇಶದ ಮೂಲೆ ಮೂಲೆಗಳಲ್ಲಿ ಜೈನ ಮಂದಿರಗಳನ್ನು ಸ್ಥಾಪಿಸಿದ್ದಾರೆ. ಮೆಹರೋಲಿಯಲ್ಲಿ ಅಹಿಂಸಾ ಸ್ಥಳ, ನಜಫ್ ಗಡದಲ್ಲಿ ಭಗವಾನ್ ಆದಿನಾಥನ ವಿಶಾಲ ಪ್ರತಿಮೆಯನ್ನು ಸ್ಥಾಪಿಸಿ ಮಹಾಮಸ್ತಕಾಭಿಷೇಕ ನಡೆಸಿದ್ದಾರೆ. ಕರ್ನಾಟಕದ ಶ್ರವಣಬೆಳಗೊಳದಲ್ಲಿ ಭಗವಾನ್ ಬಾಹುಬಲಿ ಮೂರ್ತಿಯ ಮಹಾಮಸ್ತಕಾಭಿಷೇಕದ ಸಂಪೂರ್ಣ ಮಾರ್ಗದರ್ಶನ ಮತ್ತು ಆಶೀರ್ವಚನವನ್ನು ಆಚಾರ್ಯಶ್ರೀಗಳೇ ನೆರವೇರಿಸಿದ್ದಾರೆ. 1982 ರಲ್ಲಿ ಧರ್ಮಸ್ಥಳದಲ್ಲಿ 45 ಅಡಿ ಎತ್ತರದ ಬಾಹುಬಲಿ ಮೂರ್ತಿಯ ಪಂಚಕಲ್ಯಾಣಕ ಪ್ರತಿಷ್ಠಾಪನೆ ಆಚಾರ್ಯರ ಸಮ್ಮುಖದಲ್ಲೇ ನಡೆದಿದೆ. ತಾವು ಹುಟ್ಟಿದ ಊರು ಶೇಡಬಾಳದಲ್ಲಿ ಮುನಿ ವಿದ್ಯಾನಂದ ಹೈಸ್ಕೂಲನ್ನು ಸ್ಥಾಪಿಸಿದ್ದಾರೆ. ಬರೋಡಾದಲ್ಲಿ ಮುನಿ ವಿದ್ಯಾನಂದ ಶೋಧ ಸಂಸ್ಥಾನ ಸ್ಥಾಪನೆ ಇತ್ಯಾದಿ ಜೈನ ಸಂಸ್ಕೃತಿ ಪರಂಪರೆಯನ್ನು ವಿಸ್ತಾರಗೊಳಿಸುವ ಗಣನೀಯ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದ್ದಾರೆ.



ಆಚಾರ್ಯರು ಕ್ಷುಲ್ಲಕರಿದ್ದಾಗಲೇ 'ಸಾಮ್ರಾಟ್ ಸಿಕಂದರ್ ಔರ್ ಕಲ್ಯಾಣ ಮುನಿ' ಎಂಬ ಐತಿಹಾಸಿಕ ಕೃತಿಯನ್ನು ರಚಿಸಿದ್ದರು. ಮುಂದೆ ಅವರು ವಿಶ್ವಧರ್ಮ ಕಿ ರೂಪರೇಖಾ, ಶ್ರಮಣ ಸಂಸ್ಕೃತಿ, ಪ್ರಿಯದರ್ಶಿ ಸಾಮ್ರಾಟ್ ಅಶೋಕ್, ಭಟ್ಟಾರಕ ಭಟ್ಟಾರಿಕಾಂವೋ ಕೀ ಐತಿಹಾಸಿಕ್ ಪರಂಪರಾ, ಮುನಿಭಕ್ತ ಕ್ಷೇತ್ರಪಾಲ್, ಜಿನದರ್ಶ–ಜಿನಪೂಜಾ, ಧರ್ಮ ನಿರಪೇಕ್ಷ ನಹೀ, ಸೂತಕ್ ಪಾತಕ್, ಮುಂತಾದ ಮೇರು ಕೃತಿಗಳನ್ನು ಹಿಂದಿಯಲ್ಲಿ ರಚಿಸಿದ್ದಾರೆ. ಅನೇಕ ಭಾಷೆಗಳ ಗ್ರಂಥಗಳನ್ನು ಸ್ವಾಧ್ಯಾಯದಿಂದ ಆಚಾರ್ಯರು ರಚಿಸಿದ ಉಚ್ಚಕೋಟಿ ಸಾಹಿತ್ಯವು ಮಾನವ ಸಮಾಜಕ್ಕೆ ನೀಡಿದ ಕೊಡುಗೆಯಾಗಿದೆ.

ಇದಲ್ಲದೇ ಆಚಾರ್ಯರ ಪಾವನ ಸನ್ನಿಧಾನದಲ್ಲಿ ಜೈನ ಸಮುದಾಯವು ಆಚರಿಸಿಕೊಂಡು ಬಂದ ಭಗವಾನ್ ಮಹಾವೀರನ 2500ನೇ ನಿರ್ವಾಣ ಮಹೋತ್ಸವ, ಭಗವಾನ್ ಬಾಹುಬಲಿ ಸಹಸ್ರಾಯಿ, ಭಗವಾನ್ ಮಹಾವೀರ ಸಹಸ್ರ ಮಹೋತ್ಸವ, ಕುಂದಕುಂದ ಭಾರತೀ ದ್ವಿಸಹಸ್ರಾಯಿ ಮುಂತಾದವುಗಳು ಜಿನಧರ್ಮದ ಉತ್ತೇರಕಗಳಾಗಿವೆ.


ಇದೇ ವರ್ಷ 2012ರ ಜುಲೈ 28 ರಂದು ಈಗಿನ ಪರಮ ಪೂಜ್ಯ ಆಚಾರ್ಯ ವಿದ್ಯಾನಂದ ಮುನಿಗಳ 'ಮುನಿದೀಕ್ಷ ಸ್ವರ್ಣ ಜಯಂತಿ" ಸವಿನೆನಪಿನ ಉತ್ಸವದ ಪೂರ್ವ ತಯಾರಿ ಆರಂಭವಾಗಿದೆ. ಈ ಸುವರ್ಣ ಸಂದರ್ಭದಲ್ಲಿ ಅನೇಕ ಸಾಹಿತಿ–ವಿದ್ವಾಂಸರುಗಳನ್ನು ಸನ್ಮಾನಿಸಲಾಗುತ್ತಿದೆ. ಅವರಲ್ಲಿ ನಮ್ಮ ಹಿರಿಯ ಸಾಹಿತಿ ಪ್ರೊ.ಹಂಪ ನಾಗರಾಜಯ್ಯನವರಿಗೆ "ಚಾರಿತ್ರ ಚಕ್ರವರ್ತಿ ಪುರಸ್ಕಾರ" ನೀಡಿ ಗೌರವಿಸಲಾಗುತ್ತಿದೆ ಮತ್ತು ಅವರ ಜೈನಸಾಹಿತ್ಯ ಕುರಿತ ಪುಸ್ತಕವೂ ಲೋಕಾರ್ಪಿತಗೊಳ್ಳುತ್ತಿದೆ.

ಕನ್ನಡ ನೆಲೆಯ, ಕನ್ನಡ ಮನಸ್ಸಿನ ಪರಮಪೂಜ್ಯ ಆಚಾರ್ಯ ವಿದ್ಯಾನಂದ ಮುನಿರಾಜರ "ಮುನಿದೀಕ್ಷಾ ಸ್ವರ್ಣ ಜಯಂತಿ ವರ್ಷ" ಪುನೀತ ವರ್ಷದ ಮಹೋತ್ಸವ ಯಶಸ್ವಿಯಾಗಿ ನೆರವೇರಲಿ. ಆಧುನಿಕ ಯುಗದ ಸಮಸ್ಯೆಗಳಿಗೆ ಜೈನಧರ್ಮದ ಚೌಕಟ್ಟಿನೊಳಗೆ ಸಮಾಧಾನವನ್ನು ಶೋಧಿಸುವ ರಾಷ್ಟ್ರಸಂತರಾಗಿ, ವಿಶಾಲ ಮಾನವ ಧರ್ಮವನ್ನು ಸ್ಥಾಪಿಸುತ್ತಿರುವ ವಿಶ್ವಪುರುಷರಾಗಿ ಬೆಳಗಲಿ. ಅವರ ಧರ್ಮೋಪದೇಶಗಳು, ಜೈನ ಧರ್ಮ, ಸಂಸ್ಕೃತಿ, ಸಾಹಿತ್ಯದ ಶ್ರೀಮಂತತೆ ಈಗಿನ ಯುಗದ ತಲ್ಲಣಗಳಿಗೆ ದಾರಿದೀಪವಾಗಲೆಂದು ಹಾರೈಸೋಣ.

❑ **ರೇಣುಕಾ ನಿಡಗುಂದಿ**

**(ಕುಂದ ಕುಂದ ಭಾರತಿ ಪ್ರಕಾಶನದ ಮೂಲಗಳಿಂದ)**

## ಹಂಪನಾಗೆ 'ಚಾರಿತ್ರ ಚಕ್ರವರ್ತಿ ಪುರಸ್ಕಾರ'



ಆಚಾರ್ಯ ವಿದ್ಯಾನಂದರ ಮುನಿದೀಕ್ಷೆಯ ಸ್ವರ್ಣ ಜಯಂತಿ ಸವಿನೆನಪಿನಲ್ಲಿ ಸ್ಥಾಪಿಸಿರುವ 'ಚಾರಿತ್ರ ಚಕ್ರವರ್ತಿ ಪುರಸ್ಕಾರ'ಕ್ಕೆ ಹಿರಿಯ ಸಾಹಿತಿ ಪ್ರೊ. ಹಂಪ ನಾಗರಾಜಯ್ಯ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು ಹಾಗೂ ಸ್ವರ್ಣ ಪದಕ ಒಳಗೊಂಡಿದ್ದು, ನವದೆಹಲಿಯಲ್ಲಿ ಜುಲೈ 29ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಜೈನ ಸಾಹಿತ್ಯಕ್ಕೆ ಹಂಪನಾ ಅವರು ನೀಡಿರುವ ಕೊಡುಗೆಯನ್ನು ಗುರುತಿಸಿ ಈ ಪುರಸ್ಕಾರವನ್ನು ನೀಡಲಾಗುತ್ತಿದೆ.

ಕಾಲ್ನಡಿಗೆಯಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಸಂಚರಿಸಿ ಜನರಲ್ಲಿ ಮೌಲಿಕ ಆಧ್ಯಾತ್ಮಿಕ ಚಿಂತನೆಗಳನ್ನು ಬಿತ್ತಿದ ರಾಷ್ಟ್ರ ಸಂತ ಆಚಾರ್ಯ ವಿದ್ಯಾನಂದಮುನಿಗಳು ಬೆಳಗಾವಿಯ ಚಿಕ್ಕೋಡಿ ತಾಲ್ಲೂಕಿನ ಶೇಡಬಾಳ ಗ್ರಾಮದವರು. ಎರಡೂವರೆ ದಶಕಗಳಿಂದ ಅವರು ನವದೆಹಲಿಯಲ್ಲಿ ನಿರಂತರ ಧಾರ್ಮಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.


ಮುನಿಗಳು ದಿಗಂಬರ ಮುನಿದೀಕ್ಷೆ ಸ್ವೀಕರಿಸಿ ಜುಲೈ 25ಕ್ಕೆ 50ವರ್ಷ ತುಂಬಲಿದೆ. ಮುನಿ ದೀಕ್ಷೆಯ ಸ್ವರ್ಣ ಜಯಂತಿ ಕಾರ್ಯಕ್ರಮಗಳನ್ನು ಜುಲೈ 25ರಿಂದ ಒಂದು ವರ್ಷ ಕಾಲ ವಿವಿಧೆಡೆ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

**ನಾಡೋಜ ಹಂಪನಾ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**


# ವಿಧಾನಮಂಡ




ಕೆ. ಚೆಂಗಲರಾಯ ರೆಡ್ಡಿ



ಕೆಂಗಲ್ ಹನುಮಂತಯ್ಯ




ಕಡಿದಾಳ್ ಮಂಜಪ್ಪ



ಎಸ್. ನಿಜಲಿಂಗಪ್ಪ



ಬಿ.ಡಿ. ಜತ್ತಿ



ಎಸ್.ಆರ್. ಕಂಠಿ

ಕರ್ನಾಟಕ ವಿಧಾನಸಭೆಗೆ ಈಗ ಅರವತ್ತು ವರ್ಷ. ಅಖಂಡ ಕರ್ನಾಟಕದ ಕನಸನ್ನು ಗರ್ಭೀಕರಿಸಿಕೊಂಡು 1952ರ ಜೂನ್ 18ರಂದು ಮೈಸೂರು ವಿಧಾನಸಭೆಯ ಸಾಂವಿಧಾನಿಕ ಕಲಾಪ ಅನಾವರಣಗೊಂಡಿತು. 'ಹೊಸ ಚಿಗುರು ಹಳೇ ಬೇರು ಕೂಡಿರಲು ಮರ ಸೊಬಗು' ಎನ್ನವ ಹಾಗೆ ಭರತಖಂಡದಲ್ಲಿಯೇ ಮೈಸೂರು ಸಂಸ್ಥಾನವನ್ನು ಒಂದು ಮಾದರಿ ರಾಜ್ಯವನ್ನಾಗಿ ರೂಪಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದ ಮೈಸೂರು ಅರಸರ ಆಡಳಿತದ ಜನಪರ ಆಶಯ, ಅಭಿವೃದ್ಧಿಪರ ಮನಸ್ಸು, ಸಾಮಾಜಿಕ ನ್ಯಾಯದ ಬಗೆಗಿದ್ದ ಬದ್ಧತೆಯ ಮುಂಬೆಳಕಲ್ಲಿ ಮೈಸೂರು ವಿಧಾನಸಭೆ ತನ್ನ ಐತಿಹಾಸಿಕ ಯಾನ ಪ್ರಾರಂಭಿಸಿತು.

ಸಂವಿಧಾನಶಿಲ್ಪಿ ಡಾ. ಅಂಬೇಡ್ಕರ್ ಅವರ ಸಾರಥ್ಯದಲ್ಲಿ ರಚನೆಗೊಂಡ ಸಂವಿಧಾನದ ಚೌಕಟ್ಟಿನಲ್ಲಿ ನಡೆದ ಪ್ರಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಗದ್ದುಗೆಗೇರಿತು. ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರಾಗಿದ್ದ ಕೆಂಗಲ್ ಹನುಮಂತಯ್ಯ ಸಂವಿಧಾನದ ಚೌಕಟ್ಟಿನಲ್ಲಿ ರಚನೆಗೊಂಡ ಮೈಸೂರು ರಾಜ್ಯದ ಪ್ರಪ್ರಥಮ ಮುಖ್ಯಮಂತ್ರಿ ಎನಿಸಿಕೊಂಡರು. 1952ರ ಜೂನ್ 18ರಂದು ಕರ್ನಾಟಕದ ವಿಧಾನಸಭೆಯ ಪ್ರಥಮ ಅಧಿವೇಶನ ಪ್ರಾರಂಭಗೊಂಡು ಮತ್ತೊಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕೆ ಚೆಂಗಲರಾಯ ರೆಡ್ಡಿಯವರ ಸಂಪುಟದಲ್ಲಿ ಸಚಿವರಾಗಿದ್ದ ಎಚ್ ಸಿದ್ದಪ್ಪ ಅವರು ವಿಧಾನಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು.

ವಿಧಾನಸಭೆಯ ಸ್ಪೀಕರ್ ಸ್ಥಾನಕ್ಕೆ ಎಚ್. ಸಿದ್ದಪ್ಪ ಅವರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ 99 ಸದಸ್ಯರ ವಿಧಾನಸಭೆಯಲ್ಲಿ ಅಧಿಕ ಸದಸ್ಯಬಲ ಹೊಂದಿದ್ದ ಕಾಂಗ್ರೆಸ್ ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿರಲಿಲ್ಲ. ಇದನ್ನು ಪ್ರತಿಭಟಿಸಿ ಚುನಾವಣಾ ಕಣಕ್ಕಿಳಿದ ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲ ಗೌಡರಿಗೆ 14 ಮತಗಳು ಬಂದಿದ್ದರೆ, ಕಾಂಗ್ರೆಸ್ ಬೆಂಬಲಿತ ಎಚ್ ಸಿದ್ದಪ್ಪ 79 ಸದಸ್ಯ ಬಲದಿಂದ ಸಂವಿಧಾನ ರಚನೆಯ ನಂತರ ಸ್ಥಾಪನೆಗೊಂಡ ಪ್ರಪ್ರಥಮ ವಿಧಾನಸಭೆಯ ಸ್ಪೀಕರ್ ಆಗಿ ನೇಮಕಗೊಂಡರು.

ಮೈಸೂರು ವಿಧಾನಸಭೆಯು ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಅನೇಕ ಮಹತ್ವದ ನಿರ್ಧಾರ ನಿಲುವುಗಳಿಗೆ ಸಾಕ್ಷಿಯಾಗುತ್ತದೆ. 1952ರ ಜೂನ್ 18ರಂದು ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಯಾದ ನಂತರ ವಿಧಾನಸಭೆಯಲ್ಲಿ ಗಂಭೀರ ಚರ್ಚೆಯ ವಿಷಯವಾದದ್ದು ಕರ್ನಾಟಕ ಏಕೀಕರಣ. ಮೈಸೂರು ರಾಜ್ಯದ ಬಹುತೇಕ ಶಾಸಕರು ಎಚ್.ಕೆ. ವೀರಣ್ಣ ಗೌಡ, ಸಾಹುಕಾರ ಚೆನ್ನಯ್ಯ, ಡಿ. ದೇವರಾಜ ಅರಸು, ಎಚ್.ಎಂ. ಚನ್ನಬಸಪ್ಪ, ಹುಚ್ಚಮಾಸ್ತಿಗೌಡ, ತಾಳೆಕೆರೆ ಸುಬ್ರಹ್ಮಣ್ಯ ಮುಂತಾದವರ ನೇತೃತ್ವದಲ್ಲಿ ಕರ್ನಾಟಕ ಏಕೀಕರಣಕ್ಕೆ ವಿರೋಧ ವ್ಯಕ್ತಪಡಿಸಿ ಸದನದಲ್ಲಿ ತಮ್ಮ ಅಭಿಪ್ರಾಯ ಮಂಡಿಸಿದರೆ, ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ, ಸ್ಪೀಕರ್ ಎಚ್. ಸಿದ್ದಪ್ಪ, ಟಿ. ಸಿದ್ಧಲಿಂಗಯ್ಯ ಅವರು ಏಕೀಕರಣದ ಪರ ಗಂಭೀರ ವಾದ ಮಂಡಿಸುತ್ತಾರೆ. ಬಿಸಿ ಬಿಸಿ ಚರ್ಚೆಗಳಿಗೆ ಸಾಕ್ಷಿಯಾದ ಮೈಸೂರು ವಿಧಾನಸಭೆ 1955ರ ಡಿಸೆಂಬರ್ 6ರಂದು ಕರ್ನಾಟಕ ಏಕೀಕರಣಕ್ಕೆ ತನ್ನ ಅಂಗೀಕಾರ ನೀಡುತ್ತದೆ. ವಿಧಾನಸಭೆಯಲ್ಲಿ ಹಾಲಿ ಗೊತ್ತುವಳಿ ಮಂಡಿಸಿದಾಗ ಏಕೀಕರಣದ ಪರವಾಗಿ 57 ಸದಸ್ಯರು, ವಿರುದ್ಧವಾಗಿ 3 ಮಂದಿ ಮತ ನೀಡುತ್ತಾರೆ. 35 ಸದಸ್ಯರು ಪರ–ವಿರುದ್ಧ ಮತ ನೀಡದೆ ತಟಸ್ಥರಾಗಿ ಉಳಿಯುತ್ತಾರೆ.


ಮೈಸೂರು ವಿಧಾನಸಭೆಯ ಇತಿಹಾಸದಲ್ಲಿ ಇದೊಂದು ಐತಿಹಾಸಿಕ ನಿರ್ಧಾರ ಆಗುತ್ತದೆ. ಕರ್ನಾಟಕ ಏಕೀಕರಣ ಕರ್ನಾಟಕದ ರಾಜ್ಯ ರಾಜಕಾರಣದ ದಿಕ್ಕು ದೆಸೆಯನ್ನು ಬದಲಾಯಿಸುತ್ತದೆ. ಹರಿದು ಹಂಚಿಹೋಗಿದ್ದ ಕನ್ನಡದ ನೆಲ ಒಂದುಗೂಡಿದ ನಂತರ ಕರ್ನಾಟಕದ ರಾಜಕೀಯ ಚಿತ್ರಣವೇ ಬದಲಾಗುತ್ತದೆ. ಮೈಸೂರು ವಿಧಾನಸಭೆಯ ಇತಿಹಾಸದಲ್ಲಿ ನೆನಪಿನಲ್ಲಿಟ್ಟುಕೊಳ್ಳುವ ಪ್ರಮುಖ ಸಾಂವಿಧಾನಿಕ ಚರ್ಚೆಗಳಲ್ಲಿ ಬೃಹತ್ ಗ್ರಾನೈಟ್ ವಾಸ್ತುಶಿಲ್ಪದ ಅದ್ಭುತ ಸೌಧ ಎನ್ನುವ ಪ್ರಶಂಸೆಗೆ ಪಾತ್ರವಾಗಿರುವ ವಿಧಾನಸೌಧ ನಿರ್ಮಾಣದಲ್ಲಿ ಘಟಿಸಿದ ಅಕ್ರಮಗಳ ಚರ್ಚೆ. ದಶಕ ದಶಕಗಳ ಕಾಲ ನೆನಪಿನಲ್ಲಿಟ್ಟುಕೊಳ್ಳುವ ಇಂಥ ಭವ್ಯ ಕಟ್ಟಡ ಕಟ್ಟಿದ ರೂವಾರಿ ಕೆಂಗಲ್ ಹನುಮಂತಯ್ಯ ವಿಧಾನ ಸೌಧದ ಹಗರಣಗಳ ಹೊಣೆ ಹೊತ್ತು ತಮ್ಮ ವಿರುದ್ಧದ ಅರೋಪಗಳ ತನಿಖೆಗೆ ನಾಗಪುರ ಹೈಕೋರ್ಟ್‌ನ ನ್ಯಾಯಾಧೀಶ ಪಿ.ಪಿ. ದೇವ್ ಅವರ ನೇತೃತ್ವದಲ್ಲಿ ತನಿಖಾ ಆಯೋಗ ನೇಮಿಸುವ ದಿಟ್ಟತನ ಪ್ರದರ್ಶಿಸುತ್ತಾರೆ. ಕರ್ನಾಟಕ ಏಕೀಕರಣ–ವಿಧಾನಸೌಧ ನಿರ್ಮಾಣ, ಮುಖ್ಯಮಂತ್ರಿ ಪದವಿಯಿಂದ ಕೆಂಗಲ್ ನಿರ್ಗಮನ ಜತೆ ಜತೆಯಲ್ಲಿಯೇ ನಡೆಯುತ್ತದೆ.

ಹೀಗೆ ಮೈಸೂರು ವಿಧಾನಸಭೆಯ ಪರಂಪರೆಯಲ್ಲಿ ಅನೇಕ ವಿವಾದಗ್ರಸ್ತ ನಿಲುವು ನಿರ್ಧಾರಗಳ ಬಗ್ಗೆ ನಡೆದ ಗಂಭೀರ ಚರ್ಚೆ, ಸಂವಾದಗಳ ಪರಿಣಾಮವಾಗಿ ಅನೇಕ ಅಗ್ರಗಣ್ಯರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಸಾಂವಿಧಾನಿಕ ಪರಂಪರೆಯ ಗೌರವ ಎತ್ತಿಹಿಡಿದ ಸಾಕಷ್ಟು ನಿದರ್ಶನಗಳಿವೆ.

1958ರ ಏಪ್ರಿಲ್ ತಿಂಗಳಲ್ಲಿ ನಿಜಲಿಂಗಪ್ಪನವರ ರಾಜೀನಾಮೆಗೆ ಕಾರಣವಾದ ಪ್ರಸಂಗವೊಂದು ವಿಧಾನಸಭೆಯಲ್ಲಿ ಕೋಲಾಹಲ ಉಂಟಾಯಿತು. ಬೆಂಗಳೂರಿನ ಶೇಷಾದ್ರಿಪುರ ಪೋಲಿಸ್ ಠಾಣೆಯಲ್ಲಿ ಅಮಾಯಕ ಹೆಣ್ಣು ಮಗಳು ಮುನಿಯಮ್ಮ ಸಾವು ವಿಧಾನಸಭೆಯಲ್ಲಿ ಆಕ್ರೋಶಭರಿತ ವಾತಾವರಣ ಸೃಷ್ಟಿಸಿತು. ಇದರ ನೈತಿಕ ಹೊಣೆ ಹೊತ್ತ ನಿಜಲಿಂಗಪ್ಪ ಮುಖ್ಯಮಂತ್ರಿ ಪದವಿ ತ್ಯಜಿಸಿದರು. ಅದೇ ರೀತಿ 1967ರಲ್ಲಿ ಮಧುಗಿರಿಯಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಕುರಿತ ಆಕ್ರೋಶಭರಿತ ಚರ್ಚೆಗೆ ಶರಣಾಗಿ, ನಿಜಲಿಂಗಪ್ಪ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಎಂ.ವಿ. ರಾಮರಾವ್ ಸಚಿವ ಪದವಿಗೆ ರಾಜೀನಾಮೆ ನೀಡಿದ್ದರು. ಎಂಭತ್ತರ ದಶಕದಲ್ಲಿ ರಾಮಕೃಷ್ಣ ಹೆಗಡೆಯವರು ಟೆಲಿಫೋನ್ ಕದ್ದಾಲಿಕೆ ಪ್ರಕರಣದ ನೈತಿಕ ಹೊಣೆಗಾರಿಕೆ ಹೊತ್ತು ಮುಖ್ಯಮಂತ್ರಿ



ವೀರಪ್ಪ ಮೊಯಿಲಿ



ಎಚ್.ಡಿ. ದೇವೇಗೌಡ



ಜೆ.ಎಚ್. ಪಟೇಲ್




ಬಿ.ಎಸ್. ಯಡಿಯೂರಪ್ಪ

## –: ಸ್ಪೀಕರ್


- ವಿ. ವೆಂಕಟಪ್ಪ
- ಎಚ್.ಸಿದ್ದಪ್ಪ
- ಎಚ್.ಎಸ್. ರು
- ಎಸ್.ಆರ್. ಕಂ
- ಬಿ. ವೈಕುಂಠ ಬ
- ಎಸ್.ಡಿ. ಕೊಟ
- ಕೆ.ಎಸ್. ನಾಗರ
- ಪಿ. ವೆಂಕಟರಮ
- ಕೆ.ಎಚ್. ರಂಗನ
- ಡಿ.ಬಿ. ಚಂದ್ರೇಗ
- ಬಿ.ಜಿ. ಬಣಕಾರ
- ಎಸ್.ಎಂ. ಕೃಷ್ಣ
- ವಿ.ಎಸ್. ಕೌಜಲ
- ರಮೇಶ ಕುಮಾ
- ಎಂ.ವಿ. ವೆಂಕಟ
- ಕೃಷ್ಣ
- ಜಗದೀಶ್ ಶೆಟ್ಟ
- ಕೆ.ಜಿ. ಬೋಪಯ


# ಲ ವಜ್ರಂಭಣೆ


ವೀರೇಂದ್ರಪಾಟೀಲ್


ಡಿ. ದೇವರಾಜ ಅರಸ್


ಆರ್. ಗುಂಡೂರಾವ್


ರಾಮಕೃಷ್ಣ ಹೆಗಡೆ


ಎಸ್.ಆರ್. ಬೊಮ್ಮಾಯಿ


ಎಸ್. ಬಂಗಾರಪ್ಪ


ಎಸ್.ಎಂ. ಕೃಷ್ಣ


ಧರಂಸಿಂಗ್


ಎಚ್.ಡಿ. ಕುಮಾರಸ್ವಾಮಿ


ಡಿ.ವಿ. ಸದಾನಂದ ಗೌಡ

ಪದವಿಗೆ ರಾಜೀನಾಮೆ ಸಲ್ಲಿಸಿ ಉನ್ನತ ಪ್ರಜಾಪ್ರಭುತ್ವದ ಸಂಪ್ರದಾಯಗಳಿಗೆ ನಾಂದಿ ಹಾಡಿದ್ದರು.

ಶ್ರೇಷ್ಠ ಸಂಪ್ರದಾಯಗಳಿಗೆ ನಾಂದಿ ಹಾಡಿದ ಇಂಥ ರಾಜೀನಾಮೆ ನಿರ್ಧಾರಗಳ ಜತೆಗೆ ಸೆಕ್ಸ್ ಹಗರಣಗಳ ಆರೋಪ ಹೊತ್ತು ಆರ್.ಡಿ. ಕಿತ್ತೂರು, ದೇವೇಂದ್ರಪ್ಪ ಘಾಳಪ್ಪ ಲಕ್ಷ್ಮಣ ಸವದಿ, ಸಿ.ಸಿ. ಪಾಟೀಲ್, ಕೃಷ್ಣಪಾಲೇಮಾರ್ ಅಂತಹವರು ಸಚಿವ ಪದವಿಗೆ ನೀಡಿದ ರಾಜೀನಾಮೆಗೆ ಕರ್ನಾಟಕ ವಿಧಾನಸಭೆ ಸಾಕ್ಷಿ ಆಯಿತು.

ಮೈಸೂರು ವಿಧಾನಸಭೆಯ ಧೀಮಂತ ಸಂಸದೀಯ ಪಟುಗಳಾದ ಶಾಂತವೇರಿ ಗೋಪಾಲಗೌಡ, ಎಸ್. ಶಿವಪ್ಪ, ಎಸ್. ಬಂಗಾರಪ್ಪ, ಕೋಣಂದೂರು ಲಿಂಗಪ್ಪ, ಕಾಗೋಡು ತಿಮ್ಮಪ್ಪ, ವಾಟಾಳ್ ನಾಗರಾಜ್, ಎಚ್.ಡಿ. ದೇವೇಗೌಡ, ಅಜೀಜ್ ಸೇಠ್, ಬಿ.ಎಸ್. ಯಡಿಯೂರಪ್ಪ, ಜಿ.ವಿ. ಶ್ರೀರಾಮ ರೆಡ್ಡಿ, ಜಗಳೂರು ಮಹಮ್ಮದ್ ಇಮಾಂ, ಎ.ಕೆ. ಸುಬ್ಬಯ್ಯ ಮುಂತಾದವರು ಕಾಲದಿಂದ ಕಾಲಕ್ಕೆ ಅಧಿಕಾರದ ಚುಕ್ಕಾಣಿ ಹಿಡಿದ ಸರಕಾರಗಳ ಹಗರಣಗಳನ್ನು ವಿಧಾನಮಂಡಲದ ಅಧಿವೇಶನಗಳಲ್ಲಿ ಬಯಲಿಗೆಳೆದು ಹಳಿ ತಪ್ಪುತ್ತಿದ್ದ ಸರಕಾರಗಳನ್ನು ಹಳಿಯ ಮೇಲೆ ತರುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದನ್ನು ವಿಧಾನಸಭೆಯ ಇತಿಹಾಸದ ಪುಟಗಳಲ್ಲಿ ನಾವು ಕಾಣಬಹುದು.

ಅರವತ್ತರ ದಶಕದಲ್ಲಿ ಭುಗಿಲೆದ್ದ ಶರಾವತಿ ಕರ್ಮಕಾಂಡ, ವೀರೇಂದ್ರ ಪಾಟೀಲರ ಅಧಿಕಾರವಧಿಯ ಎಕ್ಸ್‌ಪೋ–70 ಹಗರಣ, ಎಪ್ಪತ್ತರ ದಶಕದಲ್ಲಿ ದೇವರಾಜ ಅರಸರ ಆಡಳಿತದಲ್ಲಿನ ಭ್ರಷ್ಟಾಚಾರ, ರಾಮಕೃಷ್ಣ ಹೆಗಡೆ ಆಡಳಿತಾವಧಿಯಲ್ಲಿ ಸ್ಫೋಟಗೊಂಡ ರೇವಜಿತು ಬಾಟ್ಲಿಂಗ್, ಟೆಲಿಫೋನ್ ಕದ್ದಾಲಿಕೆ, ಮೊಯ್ಲಿ ಟೇಪ್ ಹಗರಣ, ದೇವೇಗೌಡರ ಆಡಳಿತಾವಧಿಯ ಕೃಷ್ಣಾ ಮೇಲ್ದಂಡೆ ಅವ್ಯವಹಾರ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಗಳು ಮೈಸೂರು ವಿಧಾನಸಭೆ ಪ್ರಜಾಪ್ರಭುತ್ವದ ಮೌಲ್ಯಗಳಿಗೆ, ಆರೋಗ್ಯಕರ ರಾಜಕೀಯ ಸಂವಾದಗಳಿಗೆ ಯಾವ ರೀತಿ ಸಾಕ್ಷಿ ಆಗಿತ್ತು ಎನ್ನುವುದಕ್ಕೆ ನಿದರ್ಶನವಾಗಿದೆ.


ಅದೇ ರೀತಿ ಕಾಲದಿಂದ ಕಾಲಕ್ಕೆ ಕರ್ನಾಟಕದ ಅಧಿಕಾರ ಸೂತ್ರ ಹಿಡಿದ ರಾಜಕೀಯ ಪಕ್ಷಗಳು, ಕರ್ನಾಟಕವನ್ನು ಸ್ವಾಭಿಮಾನಿ, ಸಮೃದ್ಧಿ ರಾಜ್ಯವನ್ನಾಗಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಗಳನ್ನಿರಿಸಿವೆ. ಈ ಸಂಬಂಧ ಅಧಿಕಾರಕ್ಕೆ ಬಂದ ಸರಕಾರಗಳು ಅನುಷ್ಠಾನಗೊಳಿಸಿದ ಜನಪರ ಕಾಯಿದೆಗಳು, ವಿಧೇಯಕಗಳು ಕರ್ನಾಟಕದ ಅಭಿವೃದ್ಧಿ ಪಥದಲ್ಲಿ ಮುಂದಡಿಯಿಡಲು ಸಹಾಯಕವಾಗಿವೆ.

ವಿಧಾನಸಭೆಯ ಆರಂಭಿಕ ವರ್ಷಗಳಲ್ಲಿ ಕರ್ನಾಟಕ ಏಕೀಕರಣ ವಿಷಯವೇ ಪ್ರಭುತ್ವ ಸಾಧಿಸಿದರೆ, ಏಕೀಕರಣದ ನಂತರ ನಿಜಲಿಂಗಪ್ಪನವರ ಆಡಳಿತಾವಧಿಯಲ್ಲಿ ಕೃಷಿ, ನೀರಾವರಿ, ವಿದ್ಯುತ್ ಅಭಿವೃದ್ಧಿಗೆ ಪೂರಕವಾದ ಅನೇಕ ಮಹತ್ವದ ನೀತಿ ನಿರ್ಧಾರಗಳನ್ನು ವಿಧಾನಸಭೆ ಕೈಗೊಂಡಿತು. ಇದು ಯಾವುದೇ ಒಂದು ಸರಕಾರ ಮಾಡಲೇಬೇಕಾದ ಅನಿವಾರ್ಯ ಹಾಗೂ ಅಗತ್ಯ ಹೊಣೆಗಾರಿಕೆ. ಆದರೆ ಈ ಸರಕಾರದಲ್ಲಿ ಪ್ರಭುತ್ವ ಸಾಧಿಸಿದ 'ಯಜಮಾನಿಕೆ ಸಂಸ್ಕೃತಿ' ವಿಧಾನಸಭೆಯ ಅಧಿವೇಶನದಲ್ಲಿ ಅನೇಕ ಬಾರಿ ಕಟು ಟೀಕೆಗೆ ಗುರಿಯಾಗಿದೆ. ಪ್ರಸಕ್ತ ಹಿನ್ನೆಲೆಯಲ್ಲಿ ಕರ್ನಾಟಕ ರಾಜಕಾರಣದ ಇತಿಹಾಸದಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಆಡಳಿತಾವಧಿಯಲ್ಲಿ ಮೈಸೂರು ವಿಧಾನಸಭೆ ಕೈಗೊಂಡ ಅನೇಕ ನೀತಿ ನಿರ್ಧಾರಗಳು, ಸಮಾಜದ ಒಟ್ಟು ಜನರ ಹಿತ ಕಾಪಾಡುವ ದಿಸೆಯಲ್ಲಿ ದಿಟ್ಟ ಹೆಜ್ಜೆಗಳು. ದೇವರಾಜ ಅರಸರು ಪರಂಪರಾಗತವಾಗಿ ಬೇರುಬಿಟ್ಟಿದ್ದ ಯಜಮಾನಿಕೆ ರಾಜಕಾರಣಕ್ಕೆ ಇತಿಶ್ರೀ ಹಾಡಿ ನಿಜ ಅರ್ಥದಲ್ಲಿ 'ಶ್ರೀಸಾಮಾನ್ಯನ ಆಡಳಿತ' ಜಾರಿಗೊಳಿಸುವುದಕ್ಕೆ ವಿಧಾನಸಭೆಯನ್ನು ಅರ್ಥಪೂರ್ಣ ವೇದಿಕೆಯಾಗಿಸಿಕೊಂಡರು.

ಇದಕ್ಕೆ ಪೂರ್ವಭಾವಿಯಾಗಿ ಏನೋ ಎನ್ನುವಂತೆ 223ಸದಸ್ಯರ ಮೈಸೂರು ವಿಧಾನಸಭೆಗೆ ನಡೆಯುವ ಪ್ರತಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದ ಅಭ್ಯರ್ಥಿಗಳ ಸಂಖ್ಯೆಯಲ್ಲಿ 150ಕ್ಕೂ ಹೆಚ್ಚು ಮಂದಿ ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ ಕೋಮಿಗೆ ಸೇರಿದವರಾಗಿರುತ್ತಿದ್ದರು. ಉಳಿದ 73 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ, ಅಲ್ಪಸಂಖ್ಯಾತರು ಮತ್ತು ಒಂದಿಷ್ಟು ಸ್ಥಾನಗಳನ್ನು ಹಿಂದುಳಿದವರಿಗೆ ಹಂಚುವ ಸಂಪ್ರದಾಯ ನಡೆದುಕೊಂಡು ಬಂದಿತ್ತು. ದೇವರಾಜ ಅರಸರು ಇಂಥ ಸಂಪ್ರದಾಯಕ್ಕೆ ಇತಿಶ್ರೀ ಹಾಡುವುದರ ಮೂಲಕ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯಲ್ಲಿ 133 ಹಿಂದುಳಿದವರು, ದಲಿತರು ಮತ್ತು ಅಲ್ಪಸಂಖ್ಯಾತರಿಗೆ ವಿಧಾನಸಭೆಗೆ ಸ್ಪರ್ಧಿಸಲು ಅವಕಾಶ ನೀಡಿ, ಉಳಿದ 90 ಸ್ಥಾನಗಳನ್ನು ಲಿಂಗಾಯತರು, ಒಕ್ಕಲಿಗರು ಮತ್ತು ಬ್ರಾಹ್ಮಣರಿಗೆ ಹಂಚಿದರು. 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯ ಗಳಿಸಿದ 163ಸ್ಥಾನಗಳಲ್ಲಿ 92ಮಂದಿ ಹಿಂದುಳಿದ ಸಮುದಾಯ, ದಲಿತ ಮತ್ತು ಅಲ್ಪಸಂಖ್ಯಾತ ಕೋಮಿಗೆ ಸೇರಿದವರಾಗಿದ್ದರು. ಈ ಮೂಲಕ ದೇವರಾಜ ಅರಸು ಅವರು 70ರ ದಶಕದಲ್ಲಿ ತಾವು ನಡೆಸಬೇಕಾಗಿದ್ದ ವೈಚಾರಿಕ ಪ್ರಯೋಗಕ್ಕೆ ಪೂರಕವಾಗಿ ಸಂವೈಧಾನಿಕ ಅಧಿಕಾರ ಹೊಂದಿದ್ದ ವಿಧಾನಸಭೆಯಲ್ಲಿ ಸಮರ್ಥ ವೇದಿಕೆಯನ್ನಾಗಿಸಿಕೊಂಡರು.

ಕರ್ನಾಟಕ ಏಕೀಕರಣದ ನಂತರ ಸುಮಾರು 17ವರ್ಷಗಳ ಕಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲು ಸಾಧ್ಯವಾಗಿರಲಿಲ್ಲ. ಪ್ರತಿ ವಿಧಾನಸಭೆಯ ಅಧಿವೇಶನದಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಬೇಕೆಂದು ಅನ್ನದಾನಪ್ಪ ದೊಡ್ಡಮೇಟಿ ಎನ್ನುವವರು ಖಾಸಗಿ ನಿರ್ಣಯವೊಂದನ್ನು ತರುತ್ತಲೇ ಇದ್ದರು. ಆದರೆ ರಾಜಕೀಯ ಪ್ರತಿರೋಧ ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ಏಕೀಕರಣದ ರೂವಾರಿ ನಿಜಲಿಂಗಪ್ಪನವರೇ ಆ ನಿರ್ಣಯವನ್ನು ಹಿಂತೆಗೆದುಕೊಳ್ಳುವಂತೆ ಕೋರುತ್ತಿದ್ದರು. ಆದರೆ ನಿಜಲಿಂಗಪ್ಪನವರ ಕೈಯಲ್ಲಿ ಆಗದ ಕೆಲಸವನ್ನು ದೇವರಾಜ ಅರಸು ಅವರು ಸಾಕಾರಗೊಳಿಸಿದರು. 1973ರಂದು ಮೈಸೂರು ರಾಜ್ಯ ಎನ್ನುವ ಹೆಸರು ಇತಿಹಾಸದ ಪುಟ ಸೇರಿ, ಇದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು.

ಇದಾದ ನಂತರ ದೇವರಾಜ ಅರಸ್ ಅವರ ಸರಕಾರ ಭೂಸುಧಾರಣಾ ಕಾಯಿದೆಯನ್ನು ವಿಧಾನಸಭೆಯಲ್ಲಿ ಮಂಡಿಸಿತು. ಈ ಕಾಯಿದೆ ಅತ್ಯಂತ ವೈಜ್ಞಾನಿಕ ಹಾಗೂ ಜನಪರವಾಗಿತ್ತು. ಈ ಬಗ್ಗೆ ವಿಧಾನಸಭೆಯ ಅಧಿವೇಶನದಲ್ಲಿ ವ್ಯಾಪಕ ಚಿಂತನ-ಮಂಥನ ನಡೆದು ಕಟ್ಟಕಡೆಗೆ ಈ ವಿಧೇಯಕಕ್ಕೆ ಅಂಗೀಕಾರ ತರಲಾಯಿತು. ಎಡಪಂಥೀಯ ರಾಷ್ಟ್ರಗಳಲ್ಲಿ ಸಾಕಾರಗೊಂಡಿದ್ದ ಜನತಾ ನ್ಯಾಯಾಲಯ ಎನ್ನುವ ಪರಿಕಲ್ಪನೆಯಲ್ಲಿ ಕರ್ನಾಟಕದಾದ್ಯಂತ ರೂಪುಗೊಂಡ ಭೂ ನ್ಯಾಯಮಂಡಳಿಗಳ ಮೂಲಕ ಲಕ್ಷಾಂತರ ಭೂಹೀನರು ನೆಲದೊಡೆಯರಾಗುವ ಕನಸನ್ನು ಸಾಕಾರಗೊಳಿಸಿದರು. ಅರಸು ಅವರು ಮುಖ್ಯಮಂತ್ರಿಯಾಗಿದ್ದ ಆಡಳಿತದ ಅವಧಿಯಲ್ಲಿ ವಿಧಾನಸಭೆ ಕೈಗೊಂಡ ಮತ್ತೊಂದು ಮಹತ್ವದ ನಿರ್ಧಾರ ಎಂದರೆ ಜಿಲ್ಲಾ ನೇಮಕಾತಿ ಸಮಿತಿಗಳು. ಇವುಗಳ ಮೂಲಕ ದಶಕ ದಶಕಗಳಿಂದ ಅವಕಾಶ ವಂಚಿತರಾಗಿದ್ದ ಶೋಷಿತರು ಮತ್ತು ತುಳಿತಕ್ಕೊಳಗಾದ ಸಮುದಾಯಗಳ ಸರಕಾರಿ ಉದ್ಯೋಗದ ಕನಸು ನನಸಾಗಿತ್ತು. ಇದೇ ಸಂದರ್ಭದಲ್ಲಿ ವಿಧಾನಸಭೆ ಮತ್ತೊಂದು ಮಹತ್ವದ ನಿರ್ಧಾರವನ್ನು ತೆಗೆದುಕೊಂಡು ಕರ್ನಾಟಕದಲ್ಲಿ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿತು. ಅದರ ಜೊತೆಗೆ ಶತ ಶತಮಾನಗಳಿಂದ ಜೀತಗಾರರಾಗಿ ಬದುಕುತ್ತಿದ್ದವರನ್ನು ಜೀತದಿಂದ ಮುಕ್ತಗೊಳಿಸುವ ಮಹತ್ವದ ವಿಧೇಯಕವನ್ನು ಸಾಕಾರಗೊಳಿಸಿತು.



ದೇವರಾಜ ಅರಸ್ ಅವರ ಆಡಳಿತಾವಧಿಯ ವಿಧಾನಸಭೆ ಕೈಗೊಂಡ ಮತ್ತೊಂದು ಮಹತ್ವದ ನಿರ್ಧಾರವೆಂದರೆ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ದೊರಕಿಸುವುದು. ವಾಸ್ತವವಾಗಿ 1951ರಲ್ಲಿಯೇ ಹಿಂದುಳಿದ ಸಮುದಾಯಗಳಿಗೆ ಮೀಸಲಾತಿ ದೊರಕಿಸಬೇಕು ಎನ್ನುವ ವಿಷಯ ರಾಜ್ಯಾಂಗದ ವಿಧಿ ವಿಧಾನಗಳಲ್ಲಿ ಸೇರಿತ್ತು. ಆದರೆ ಇದನ್ನು ಅನುಷ್ಠಾನಗೊಳಿಸಲು ಕರ್ನಾಟಕದ ಹಿಂದಿನ ಯಾವುದೇ ಸರಕಾರ ಕ್ರಮ ತೆಗೆದುಕೊಂಡಿರಲಿಲ್ಲ. ದೇವರಾಜ ಅರಸ್ ಮುಖ್ಯಮಂತ್ರಿಯಾದ ತಕ್ಷಣ ವಿಧಾನಸಭೆಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲು ದೊರಕಿಸುವುದಕ್ಕೆ ಪೂರಕವಾಗಿ ಆಯೋಗವೊಂದನ್ನು ನೇಮಿಸಬೇಕೆಂದು ನಿರ್ಣಯವನ್ನು ಮಂಡಿಸಿದರು. ವಿಧಾನಸಭೆಯಲ್ಲಿ ನಡೆದ ಸುದೀರ್ಘ ಚರ್ಚೆಯ ನಂತರ ಇಂತಹ ಆಯೋಗವೊಂದನ್ನು ನೇಮಿಸುವುದಕ್ಕೆ ವಿಧಾನಸಭೆ ತನ್ನ ಒಪ್ಪಿಗೆಯನ್ನು ನೀಡಿತು. ಇದಾದ ನಂತರ ಅರಸ್ ಅವರು ವಾಲ್ಮೀಕಿ ಸಮುದಾಯಕ್ಕೆ ಸೇರಿದ ಎಲ್.ಜಿ. ಹಾವನೂರ್ ಎನ್ನುವ ಪ್ರಜ್ಞಾವಂತ ಹಾಗೂ ಮೇಧಾವಿ ವಕೀಲರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದರು. ಸುಮಾರು 3ವರ್ಷಗಳ ಸುದೀರ್ಘ ಅಧ್ಯಯನ ನಡೆಸಿದ ನಂತರ ಹಾವನೂರು ಆಯೋಗ 1975ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. 1977ರಲ್ಲಿ ಹಾವನೂರ್ ಆಯೋಗದ ವರದಿಯನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಯಿತು. ಈ ಮೂಲಕ ಕರ್ನಾಟಕ ಇಡೀ ಭಾರತಕ್ಕೆ ಮಾದರಿಯಾಯಿತು. ಇದರ ಯಶಸ್ಸು ಹಾಗೂ ಕೀರ್ತಿ ದೇವರಾಜ್ ಅರಸ್ ನೇತೃತ್ವದ ವಿಧಾನಸಭೆಗೆ ದೊರೆಯಿತು. ಕರ್ನಾಟಕದ ವಿಧಾನಸಭಾ ಇತಿಹಾಸದಲ್ಲಿ ಕೈಗೊಂಡ ಮತ್ತೊಂದು ಮಹತ್ವದ ನಿರ್ಣಯ ಎಂದರೆ ಅದು ಅಧಿಕಾರ ವಿಕೇಂದ್ರಿಕರಣ. ರಾಮಕೃಷ್ಣ ಹೆಗಡೆಯವರು ಕರ್ನಾಟಕದ ಪ್ರಪ್ರಥಮ ಕಾಂಗ್ರೆಸ್ಸೇತರ ಸರಕಾರದ ಚುಕ್ಕಾಣಿ ಹಿಡಿದ ತಕ್ಷಣವೇ ಅನೇಕ ದಶಕಗಳಿಂದ ಅವರ ಚಿಂತನೆಯ ಮೂಸೆಯಲ್ಲಿ ರೂಪುಗೊಂಡಿದ್ದ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಪ್ರಯತ್ನ ಮಾಡಿದ್ದರು. ಈ ಸಂಬಂಧ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಅನೇಕ ಪರಿಣತರ ಜತೆ ವ್ಯಾಪಕ ಸಮಾಲೋಚನೆ ನಡೆಸಿ, ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ನಜೀರ್ ಸಾಬ್ ಅವರ ನೇತೃತ್ವದಲ್ಲಿ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ಸಿದ್ಧಪಡಿಸಲಾಯಿತು. ವಿಧಾನಸಭೆಯ ಅಧಿವೇಶನದಲ್ಲಿ ಹಾಲಿ ವಿಧೇಯಕದ ಅನುಕೂಲ ಮತ್ತು ಅನಾನುಕೂಲಗಳ ಬಗ್ಗೆ ವ್ಯಾಪಕ ಚರ್ಚೆ ನಡೆದು ಕಟ್ಟಕಡೆಗೆ 1987ರಲ್ಲಿ ಪಂಚಾಯತ್ ರಾಜ್ ವಿಧೇಯಕಕ್ಕೆ ಕರ್ನಾಟಕ ವಿಧಾನಸಭೆ ತನ್ನ ಅಂಗೀಕಾರ ನೀಡಿತು. ವಾಸ್ತವವಾಗಿ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕ ಇಡೀ ರಾಷ್ಟ್ರಕ್ಕೆ ಒಂದು ಮಾದರಿ ವಿಧೇಯಕವಾಗಿ ರೂಪಾಂತರಗೊಂಡಿತು. ಇದು ಒಂದು ವಿಧಾನಸಭೆ ಕೈಗೊಂಡ ಮಹತ್ವದ ವಿಧೇಯಕಗಳಲ್ಲಿ ಒಂದು ಎಂದು ಹೇಳಬಹುದು. ಹಾಲಿ ಪಂಚಾಯತ್ ರಾಜ್ ವಿಧೇಯಕವನ್ನು ಆಧಾರವಾಗಿಟ್ಟುಕೊಂಡು ರಾಜೀವ್ ಗಾಂಧಿಯವರ ಆಡಳಿತಾವಧಿಯಲ್ಲಿ ಇಡೀ ದೇಶಕ್ಕೆ ಮಾದರಿಯಾಗುವ ಪಂಚಾಯತ್ ರಾಜ್ ಪದ್ಧತಿಯನ್ನು ಜಾರಿಗೊಳಿಸುವುದಕ್ಕೆ ಪೂರಕವಾಗಿ ಸಂವಿಧಾನ ತಿದ್ದುಪಡಿ ಮಾಡಲಾಯಿತು. ಇದು ನಿಜವಾಗಿಯೂ ಕರ್ನಾಟಕ ವಿಧಾನಸಭೆ ಹೆಮ್ಮೆ ಪಟ್ಟುಕೊಳ್ಳುವಂತಹ ಒಂದು ನಿರ್ಧಾರವಾಯಿತು.

ಸಾಮಾಜಿಕ ನ್ಯಾಯ ಮತ್ತಷ್ಟು ಪರಿಪೂರ್ಣವಾಗಿ ಅನುಷ್ಠಾನಗೊಳ್ಳುವ ದಿಸೆಯಲ್ಲಿ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಪಂಚಾಯತ್ ರಾಜ್ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದವರಿಗೆ ಮೀಸಲು ನೀಡಬೇಕು ಎನ್ನುವ ಆಶಯದ ಬಗ್ಗೆ ವಿಧಾನಸಭೆಯಲ್ಲಿ ವ್ಯಾಪಕ ಚರ್ಚೆ ನಡೆಯಿತು. ಆದರೆ ಈ ಆಶಯ ಸಾಕಾರಗೊಳ್ಳುವ ಮುನ್ನ ಮೊಯಿಲಿಯವರು ಪರಾಜಿತರಾಗಿದ್ದರು, ತದನಂತರ ಅಧಿಕಾರದ ಗದ್ದುಗೆಗೇರಿದ ದೇವೇಗೌಡರು ಹಾಲಿ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆದುಕೊಂಡರು.

ಹೀಗೆ ಹತ್ತು ಹಲವು ರೀತಿಯಲ್ಲಿ ಸುಮಾರು ಆರು ದಶಕಗಳ ಕಾಲ ಕರ್ನಾಟಕ ರಾಜ್ಯದ ಭವಿಷ್ಯವನ್ನು ತಿದ್ದಿ ತೀಡಿ ರೂಪಿಸಿದ ಹೆಗ್ಗಳಿಕೆ ಕರ್ನಾಟಕ ವಿಧಾನಸಭೆಗಿದೆ. ಇಂಥ ವಿಧಾನಸಭೆ ಇತ್ತೀಚಿನ ದಿನಗಳಲ್ಲಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿರುವುದು ದುರಂತ. ಅರವತ್ತು, ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ಪ್ರತಿ ವರ್ಷ ವಿಧಾನಸಭೆಯ ಅಧಿವೇಶನ ಮೂರು ತಿಂಗಳಿಂದ ನಾಲ್ಕು ತಿಂಗಳ ಕಾಲ ನಡೆಯುತ್ತಿತ್ತು. ಅಧಿಕಾರ ಸೂತ್ರ ಹಿಡಿದವರ ಔದಾಸೀನ್ಯ ಮತ್ತು ಶಾಸಕರ ನಿರಾಸಕ್ತಿಯ ಕಾರಣದಿಂದ ಈಗ ವಿಧಾನಸಭಾ ಅಧಿವೇಶನ ನಡೆಯುವುದೇ ಅಪರೂಪವಾಗಿದೆ, ಅಧಿವೇಶನ ನಡೆದರೂ ಅದು ಒಂದಲ್ಲ ಒಂದು ಕಾರಣಕ್ಕೆ ಸ್ಥಗಿತಗೊಳ್ಳುತ್ತಿದೆ. ವಿಧಾನಸಭಾ ಅಧಿವೇಶನಗಳ ಗುಣಮಟ್ಟ ಸಂಪೂರ್ಣ ನೆಲಕಚ್ಚಿದೆ. ಸದ್ಯ ಕರ್ನಾಟಕದ ಅಧಿಕಾರ ಸೂತ್ರ ಹಿಡಿದಿರುವವರು ಎಷ್ಟು ಹೊಣೆಗೇಡಿಗಳಾಗಿದ್ದಾರೆ ಎಂದರೆ ಅವರಿಗೆ ವಿಧಾನಸಭೆಗೆ ಅರವತ್ತು ವರ್ಷಗಳು ಘಟಿಸಿದೆ ಎನ್ನುವುದೇ ಗೊತ್ತಿಲ್ಲ.

ಭವ್ಯ ಇತಿಹಾಸ ಹೊಂದಿರುವ ಕರ್ನಾಟಕ ವಿಧಾನಮಂಡಲಕ್ಕೆ ಈಗ ವಜ್ರಮಹೋತ್ಸವದ ಪುಳಕ. ಇಲ್ಲಿ ನಡೆಯುತ್ತಿದ್ದ ಅರ್ಥಪೂರ್ಣ ಕಲಾಪ ದೇಶಕ್ಕೆ ಮಾದರಿಯಾಗಿತ್ತು. 70-80ರ ದಶಕದಲ್ಲಿ ಮೂರು-ನಾಲ್ಕು ತಿಂಗಳ ಕಾಲ ನಿರಂತರವಾಗಿ ಮೌಲ್ಯಯುತ ಚರ್ಚೆ ನಡೆಯುತ್ತಿತ್ತು. ಆದರೆ ಈಗ? ನಾಲ್ಕು ದಿನ ಸಾತ್ವಿಕ ಸಂವಾದ ನಡೆಯುವುದೇ ಕಷ್ಟ. ಹಿಂದಿನ ಆ ಹೆಮ್ಮೆಯ ದಿನಗಳು ಮತ್ತೆ ಬಂದಾವೆ? . . . .

**ಮಹದೇವ್ ಪ್ರಕಾಶ್, ಹಿರಿಯ ಪತ್ರಕರ್ತರು**
ಕೃಪೆ : ವಿಜಯ ಕರ್ನಾಟಕ

# ಅವ್ವ

ಜನಸಂಖ್ಯೆ ದಿನಾಚರಣೆ ಹತ್ತಿರವಾದಂತೆಲ್ಲಾ ಬಹಳ ಸಲ ನನ್ನ ಹುಟ್ಟಿನ ಸಂದರ್ಭವನ್ನು ನಿಮ್ಮೊಡನೆ ಹಂಚಿಕೊಳ್ಳುವ ಕಾತರವಿರುತ್ತಿತ್ತು. ಜುಲೈ ತಿಂಗಳಿನಲ್ಲಿ ನಾವೆಲ್ಲ ಜನಸಂಖ್ಯಾ ದಿನಾಚರಣೆಯನ್ನು ಆಚರಿಸಲು ಹೊರಟಿದ್ದೇವೆ. ಅದಕ್ಕೂ ಮೊದಲು, ಸುಮಾರು 40 ವರ್ಷದ ಹಿಂದೆ ನನ್ನ ಅನಕ್ಷರಸ್ಥೆ ಅವ್ವ ಸರಕಾರದ ಜನಸಂಖ್ಯಾ ನಿಯಂತ್ರಣದ ಕಾರ್ಯಕ್ರಮಕ್ಕೆ ದನಿಗೂಡಿಸಿದ ಯಾತ್ರೆಯನ್ನು ದಾಖಲಿಸುವ ತವಕ ನನ್ನನ್ನು ಕಾಡುತ್ತಿತ್ತು. ಹಾಗಾಗಿ ಈ ಬರಹ.

ನನ್ನ ಹುಟ್ಟಿನ ನಂತರ ತನ್ನ ಇಡೀ ಸಮಾಜವನ್ನು ಎದುರು ಹಾಕಿಕೊಂಡು ಕೇವಲ 15 ದಿನದ ನನ್ನನ್ನು ನನ್ನ ದೊಡ್ಡವ್ವನಿಗೆ ಒಪ್ಪಿಸಿ, ಯಾರಿಗೂ ತಿಳಿಸದೇ ನನ್ನೂರಿಗೆ ಬಸ್ಸೇ ಇರದ ಅಂದು ಸುಮಾರು ಇಪ್ಪತ್ತೈದು ಕಿ.ಮೀ ದೂರದ ಮಂಡ್ಯ ಕಲ್ಲಾಸ್ಪತ್ರೆಗೆ ಒಬ್ಬಂಟಿಯಾಗಿ ಕಬ್ಬಿನ ಲಾರಿಗೆ ಹತ್ತಿ ಹೊರಟು, ಇನ್ನು ನನಗೆ ಮಕ್ಕಳು ಬೇಡ ಹೆಚ್ಚಿನ ಜಮೀನು ಇಲ್ಲದ ನಮಗೆ ಇರುವ ಮಕ್ಕಳನ್ನೇ ಚೆನ್ನಾಗಿ ಸಾಕಿದರಾಯ್ತು ಎಂದು ನಿಶ್ಚಯಿಸಿ ಆಪರೇಷನ್ ಮಾಡಿಸಿಕೊಂಡಿಯೇ ಬಿಟ್ಟಿದ್ದಳು. ಸರಿಸುಮಾರು ನಾಲ್ಕೈದು ದಿನಗಳಾದ ಮೇಲೆ, ಸರಕಾರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿ ಕೈಗೆ 50ರೂ ಕೊಟ್ಟು ಕಳಿಸಿಕೊಟ್ಟರಂತೆ. ಆ ದುಡ್ಡಿನಲ್ಲಿ ನನಗೆ (20 ದಿನದ ಮಗು) ಪೌಡರ್, ಕಣ್ಣಿನ ಕಾಡಿಗೆ, ಒಂದು ಜೊತೆ ಬಟ್ಟೆ ತೆಗೆದುಕೊಂಡು ನನ್ನೂರು ತಲುಪುವ ಹೊತ್ತಿಗೆ, ಊರಿನಲ್ಲೆಲ್ಲಾ ಅವಳಿಗೆ ದೆವ್ವ ಹಿಡಿದು ಊರು ಬಿಟ್ಟಿದ್ದಾಳೆ ಎಂಬ ವದಂತಿ ಹರಡಿ, ಜನರೆಲ್ಲ ನನ್ನ ಅವ್ವನನ್ನು ಭಯದಿಂದ ನೋಡಲು ಸಂತೆ ಬರಲಾರಂಭಿಸಿದರಂತೆ. ಊರಿಗೆ ಬಂದ ಅವ್ವ, ನನ್ನನ್ನು ನನ್ನ ದೊಡ್ಡವ್ವನಿಂದ ಪಡೆದು, ಎದೆ ಹಾಲು ಕುಡಿಸಿ, ಆರೈಕೆ ಮಾಡಿ, ಹೊಸ ಬಟ್ಟೆ ತೊಡಿಸಿದರಂತೆ. ಮಾರನೇ ದಿನ ನನ್ನ ಪೈಕಿಯ ಜನರೆಲ್ಲ ಪಂಚಾಯ್ತಿ ಸೇರಿದರಂತೆ. ಅಷ್ಟೊತ್ತಿಗಾಗಲೇ ಅವರಿಗೆಲ್ಲಾ ನಿಜ ವಿಚಾರ ತಿಳಿದು, ಅವಳ ತವರಿಗೆ ಬಿಟ್ಟು, ನ್ಯಾಯ ಒಪ್ಪಿಸಿ, ಅಪ್ಪನಿಗೆ ಮರು ಮದುವೆಯ ತಯಾರಿ ನಡೆಸಿದರಂತೆ.

ಆಗಿನ ದಿನಗಳಲ್ಲಿ ಶಿಶು ಮರಣ ಹೆಚ್ಚಾಗಿದ್ದು, ಹುಟ್ಟಿದ ಮಕ್ಕಳು ಉಳಿಯುವುದು ದುಸ್ತರವಾಗಿದ್ದ ಕಾಲ ಮತ್ತು ನನ್ನ ಚಿಕ್ಕಪ್ಪ ದೊಡ್ಡಪ್ಪಂದಿರುಗಳಿಗೆಲ್ಲ ಎಂಟತ್ತು ಜನ ಗಂಡು ಮಕ್ಕಳು. ಆದರೆ ನನ್ನವ್ವ ಒಬ್ಬನೇ ಮಗ ಸಾಕು ಎಂದು ರಾತ್ರೋ ರಾತ್ರಿ ಊರು ಬಿಟ್ಟು ಆಪ್ರೇಶನ್ ಮಾಡಿಸಿಕೊಂಡಿಯೇ ಬಿಟ್ಟಿದ್ದಳು. ನನ್ನ ದೊಡ್ಡಪ್ಪ ಗಿರಿಗೌಡನ ಸ್ಥಿತಿಯನ್ನು ಅವ್ವಳ ಬಾಯಿಯಿಂದಲೇ ಕೇಳುವುದಾದರೆ, ಆಪ್ರೇಶನ್  ವಿಷಯ ತಿಳಿದು 'ಕೆಟ್ನಲ್ಲಪ್ಪೋ ಅದು ಸತ್ತ್ಹೋದ್ರೆ ತಮ್ಮನಿಗೆ ಸುಳಿ ಇಲ್ದಂಗಾಯ್ತಲ್ಲಪ್ಪೋ' ಅಂತ ಮೂರ್ಛೆ ಹೋದ್ನಂತೆ. ಹೊಲದಿಂದ ಬಂದವನೇ ತಮ್ಮನ ಹೆಂಡತಿ ಎಂದು ನೋಡದೇ ಒಂದೇ ಸಮನೆ ನನ್ನ ಬಾಣಂತಿ ತಾಯಿಗೆ ಬಾರಿಸಿದನಂತೆ. ಹಾಗೂ ಮೂರ್ನಾಲ್ಕು ದಿನ 'ಚೆನ್ನಮ್ಮ ಕದ್ದು ಹೋಗಿ ಆಪ್ರೇಶನ್ ಮಾಡಿಸಿಕೊಂಡ್ಳಂತೆ' ಎಂಬುದೇ ಊರಲ್ಲಿ ಸುದ್ದಿಯಂತೆ.

ಸರಿ ನನ್ನ ಅವ್ವಳನ್ನು ಅವಳ ತವರಿಗೆ ಕರೆದುಕೊಂಡು ಹೋಗಿ ನ್ಯಾಯ ಒಪ್ಪಿಸಿ, ನನ್ನಪ್ಪನಿಗೆ ಮರು ಮದುವೆ ಮಾಡುವ ನಿಶ್ಚಯ ಮಾಡಿ, ಚೆನ್ನಪಟ್ಟಣದ ಬಳಿ ಇರುವ ಅಬ್ಬೂರುದೊಡ್ಡಿಗೆ ನನ್ನ ಅಪ್ಪನ ಸಮೇತ, ಚಿಕ್ಕಪ್ಪ ದೊಡ್ಡಪ್ಪರನ್ನೊಳಗೊಂಡ ಹತ್ತು ಹದಿನೈದು ಜನರ ನಿಯೋಗ ಗಾಡಿ ಕಟ್ಟಿ ಹೊರಟಿತಂತೆ. ಇವರೆಲ್ಲ ನನ್ನವ್ವಳ ತವರು ಸೇರಿದಾಗ ನನ್ನಜ್ಜಿ (ಅವ್ವಳ ತಾಯಿ) ಎಲ್ಲರನ್ನೂ ನೋಡಿ ಗಾಬರಿಗೊಂಡರಂತೆ. ಎಲ್ಲರೂ ಹೋಗಿ ಪಡಸಾಲೆಯ ಮೇಲೆ ಆಸೀನರಾಗಿ, ಏನೊಂದೂ ಮಾತಾಡದೆ ದೊಡ್ಡ ಪ್ರಮಾದವಾಗಿದೆಯೆಂಬಂತೆ ಮೌನವಹಿಸಿದರಂತೆ. ನನ್ನವ್ವ ಅಲ್ಲೆ ನನ್ನನ್ನು ಕಂಕುಳಿನಲ್ಲಿರಿಸಿ ಕಂಬಕ್ಕೆ ಒರಗಿ ನಿಂತೇ ಇದ್ದರಂತೆ. ನನ್ನಜ್ಜಿ ಅವ್ವಳ ಕೆನ್ನೆಗೆ ತಿವಿದು ಏನು ತಪ್ಪು ಮಾಡಿದೆ ಹೇಳು ಎಂದು ದಬಾಯಿಸಿದಾಗ, ನನ್ನ ದೊಡ್ಡಪ್ಪ ಎದ್ದು ನಿಂತು 'ನಿಮ್ಮಗ್ಳು ಯಾರ್ನೂ ಹೇಳ್ದೆ ಕೇಳ್ದೆ ಹೊಟ್ಟೆ ಕುಯ್ಸಿಕೊಂಡವ್ಳೆ. ಇರೋ ಒಂದ್ಮಗ ಸತ್ರೆ, ನಮ್ಮ ವಂಶದ್ಕುಡಿ ಹಾಳಾದ್ಹಂಗೆ. ಅದ್ಕೆ ನಿಮ್ಮಗ್ಳ ನಿಮ್ಗೆ ಒಪ್ಸಿ, ನನ್ನ ತಮ್ಮನ್ಗೆ ಇನ್ನೊಂದ್ಹೆಣ್ಣು ಕಟ್ಟುವ ಅಂತ ಅಂದ್ಕೊಂಡಿದ್ದೀವಿ' ಎಂದಾಗ ಬಹಳ ತಾಳ್ಮೆಯುಳ್ಳ, ಬುದ್ದಿವಂತೆಯಾದ ನನ್ನಜ್ಜಿ 'ಆಯ್ತಪ್ಪ, ನನ್ಮಗ್ಳು ದೊಡ್ಡ ತಪ್ಪು ಮಾಡ್ಬುಟ್ಟಾವ್ಳೆ ಅವಳ ಹಣೇಲಿ ಬರೆದ್ಹಂಗಾಯ್ತದೆ. ಆಯ್ತು ನನ್ನಳಿಯನ್ಗೆ ಬೇರೆ ಮದ್ವೆ ಮಾಡೋರಂತೆ. ಇಷ್ಟೊಂದ್ ದೂರ್ದಿಂದ ಗಾಡೀಲಿ ದಣ್ದು ಬಂದಿದ್ದೀರಿ, ಅಡ್ಗೆ ಆಗ್ತೀದೆ, ಹಾಗೇ ಹೋಗ್ಬೇಡಿ ಊಟ ಮಾಡ್ಕಂಡು ಹೋಗೋರಂತೆ' ಎಂದು ಎಲ್ಲರನ್ನೂ ಕೇಳಿಕೊಂಡರಂತೆ. ಅದಕ್ಕೆ ಸಮ್ಮತಿಸಿದ ನಿಯೋಗ ಅಲ್ಲೇ ಸ್ವಲ್ಪ ಹೊತ್ತು ಕುಳಿತುಕೊಂಡರಂತೆ. ಇದೆಲ್ಲಾ ಘಟನೆಯನ್ನು ಆಗಾಗ್ಗೆ ನನಗೆ ಹೇಳುತ್ತಿದ್ದ ನನ್ನಜ್ಜಿಯ ಬಾಯಿಯಿಂದಲೇ ಕೇಳುವುದಾದರೆ 'ಮಗ ಎಲ್ರಿಗೂ ಒಂದ್ ಮಾರುದ್ದದ ಹಲಸಿನ ಹಣ್ಣ ಬರಬರನೆ ಕೊಯ್ದೆ, ಬೆಲ್ಲ ಕಾಯಿ ಬೆರಸಿ ರಸಾಯ್ನ ಮಾಡ್ಕೊಟ್ಟೆ. ಎಲ್ರೂ ತಿಂತಾ ಇದ್ಹಂಗೆ ಅಲ್ಲೇ ಮನೆ ಮುಂದಿದ್ದ ಮೂರು ಹಿತ್ತಲ ಕೋಳಿ ಹಿಡ್ತಂದು ಕೊಯ್ದು ಒಲೆ ಹಚ್ಚಿದೆ. ಎಲ್ರೂ ಸಮಧಾನ ಆದ್ಹಂಗೆ ಕಾಣಿಸ್ತು. ಬರ್ರಬರ್ರನೆ ಕಲ್ನಾಗೆ ಒಂದೊಂದು ಚೆಂಡು ರಾಗಿ ಮುದ್ದೆ ಹೊಣಿಸ್ದೆ, ಎಲ್ರನ್ನೂ ಕರ್ದು ಒಂತಣ್ಗೆ ಬಾಡಾಕಿ ಹೊಟ್ಟೆ ತುಂಬ ಉಂಡ್ರಪ್ಪ ಸಾಕಾಗಿದ್ದೀರಿ ಅಂತ ಬಡಿಸ್ದೆ' ಎಲ್ರು ಊಟ ಮಾಡಿ ಪಡಸಾಲೆಗೆ ಬಂದು ಎಲೆ ಅಡ್ಕೆ ಹಾಕ್ಕೊಂಡು ಕುಳ್ತುಕೊಂಡ್ರಂತೆ. ಇನ್ನೇನು ಎಲ್ಲಾ ಎದ್ದು ನಿಂತು 'ನಿಂಗಮ್ಮ ಬತ್ತೀವಿ' ಅಂತ ಹೊರಡಲು ಸಿದ್ದರಾದರಂತೆ. ಬುದ್ದಿವಂತೆಯಾದ ನನ್ನ ಅಜ್ಜಿ 'ಆಯಿತ್ರಪ್ಪ ನನ್ನ ಮಗ್ಳ ಹಣೇಲಿ ಬರ್ದಂಗೆ ಆಯ್ತದೆ. ಯಂಗಾದ್ರೂ ಆಗ್ಲಿ ಒಂದ್ಸಾರಿ ನನ್ನಳಿಯ ಏನಂತಾರೆ ಕೇಳ್ಬುಡ್ರಪ್ಪಾ' ಎಂದಿದ್ದಕ್ಕೆ ನನ್ನ ದೊಡ್ಡಪ್ಪ ನನ್ನಪ್ಪನ ಕಡೆ ತಿರುಗಿ 'ಏನ್ಲಾ ಚಿಕ್ಕಭದ್ರ ಏನಂತೀಯಾ' ಅಂದಿದ್ದಕ್ಕೆ ಅಲ್ಲಿಯವರೆಗೂ ಅಣ್ಣಂದಿರಿಗೆ ಹೆದರಿ, ಬೆಲೆ ಕೊಟ್ಟು, ಧರ್ಮರಾಯನಂತೆ ಬಾಳಿ ಬದುಕಿದ ನನ್ನ ಮುಗ್ಧ ಅಪ್ಪ 'ಮೌನ ಬೆಳ್ಳಿ ಮಾತು ಚಿನ್ನ' ಎಂಬಂತೆ ಶಾಂತ ಚಿತ್ತದಿಂದಿದ್ದ ನನ್ನಪ್ಪ 'ಲೋ ಹೊಗುರ್ಲಾ ಹೊಟ್ಟೆ ಕುಯ್ಸಿಕೊಂಡವ್ಳೆ ಅಂತ ನನ್ನೆಡ್ತಿ ಬುಟ್‌ಬುಡನೇ? ಆದಾಗ್ದೆರೊ ಕೆಲ್ಸ, ನಡಿಯಮ್ಮಿ ಮಗ ಕರ್ಕೊಂಡು ಗಾಡಿಕ್ಕುತ್ಕೊ' ಎಂದವನೆ.... ಗಾಡಿಕಟ್ಟಿ ಹೆಂಡತಿ ಕರ್ಕೊಂಡು ಹೊರಟೇ ಬಿಟ್ನಂತೆ... ಇದೆಲ್ಲವನ್ನು ನನ್ನಜ್ಜಿಯ ಬಾಯಿಯಿಂದ ಆಗಾಗ್ಗೆ ಕೇಳುತ್ತಿದ್ದ ನನಗೆ ನಗು ಬರುತ್ತಿತ್ತು. ಮುಂದೆ ನನ್ನಪ್ಪ, ಅವ್ವ ಹಾಗೆ ಅನ್ಯೋನ್ಯವಾಗಿ ಬಾಳಿ ಬದುಕಿದರು.

ಮುಂದೆ ನಾನು ಉನ್ನತ ವ್ಯಾಸಂಗಕ್ಕೆಂದು ಬಿ.ಎ. ಸೇರಿದ ಮೇಲೆ 'ಜನಸಂಖ್ಯಾ ಸಿದ್ಧಾಂತದ ಮೇಲೆ ಒಂದು ಪುಸ್ತಕವನ್ನು ಅಭ್ಯಸಿಸಿದ ಮೇಲೆ ಅರಿವಾಯಿತು. ಜನಸಂಖ್ಯಾ ಸ್ಫೋಟ ಎಷ್ಟು ಗಂಭೀರವಾದದ್ದು, ಅದರಿಂದ ಹುಟ್ಟಿಕೊಳ್ಳುವ ಜಾಲದಂತಹ ಸಮಸ್ಯೆಗಳೇನು? ಮತ್ತು ಟಿ.ಆರ್. ಮಾಲ್ತಸ್ ಹಾಗೂ ಎಡ್ವಿನ್ ಕ್ಯಾನನ್ ಮುಂತಾದ ಅರ್ಥಶಾಸ್ತ್ರಜ್ಞರ ಸಿದ್ಧಾಂತಗಳನ್ನು ತಿಳಿದುಕೊಂಡೆ. ಆಹಾರದ ವೃದ್ಧಿ 1:2:3:4:5 ಪ್ರಮಾಣದಲ್ಲಿ ಹೆಚ್ಚಾಗುತ್ತಿದ್ದರೆ ಜನಸಂಖ್ಯಾ ವೃದ್ಧಿ 2:4:8:16:32 ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಭಾರತದಲ್ಲಿ ಪ್ರತಿ ಒಂದು ಕಾಲು ಸೆಕೆಂಡಿಗೆ ಒಂದು ಮಗು ಜನ್ಮ ತಳೆಯುತ್ತಿದೆ. ಎಲ್ಲ ಸಮಸ್ಯೆಗಳ ಮೂಲ ವಿಪರೀತವಾದ ಜನಸಂಖ್ಯೆ ಎಂದು ತಿಳಿದುಕೊಂಡ ಮೇಲೆ ನನ್ನವ್ವ ಇಂದಿಗೂ ಎಷ್ಟು ಪ್ರಸ್ತುತ, ಪುರುಷಪ್ರಧಾನವಾದ ಸಮಾಜದಲ್ಲಿ ಸುಮಾರು 40ವರ್ಷಗಳ ಹಿಂದೆಯೇ ಆಕೆ ತೆಗೆದುಕೊಂಡ ದೃಢ ನಿಲುವು, ತೋರಿದ ಎದೆಗಾರಿಕೆ ಇಡೀ ನೆಂಟರಿಷ್ಟರೆಲ್ಲರನ್ನೂ ಎದುರು ಹಾಕಿಕೊಂಡು ಬದುಕಿದ ಬಗೆ, ಎಲ್ಲವನ್ನು ಒಮ್ಮೆ ನೆನೆದರೆ, ಒಂದು ಸಣ್ಣ ನಿಲುವನ್ನು ತೆಗೆದುಕೊಳ್ಳಲು ಆಗದ ನನ್ನಂತವನಿಗೆ ನಾಚಿಕೆ ಎನಿಸುತ್ತದೆ.

ಆಗಾಗ್ಗೆ ನನ್ನ ಅವ್ವಳಿಗೆ ಈ ಒಂದು ದೊಡ್ಡ ನಿರ್ಧಾರ ತೆಗೆದುಕೊಳ್ಳಲು ಸ್ಫೂರ್ತಿ ಸಿಕ್ಕಿದ್ದಾದರೂ ಹೇಗೆ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುವಾಗ **'ಮಗನೇ ಆಗೆಲ್ಲ (1973) ರೇಡಿಯೋದಲ್ಲೆಲ್ಲಾ ನಾನು ಸಮಾಚಾರ ಕೇಳುತ್ತಿದ್ದೆ ಮತ್ತು ಜನಸಂಖ್ಯಾ ಸ್ಫೋಟದ ಮೇಲೆ ನಾಟಕ ಇತ್ಯಾದಿ ಕಾರ್ಯಕ್ರಮಗಳು ಬರುತ್ತಿದ್ದೊ. ಅವೆಲ್ಲವನ್ನೂ ಕೇಳುತ್ತಿದ್ದೆ, ಹೆಚ್ಚಾಗಿ ನಿನ್ನ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳನ್ನೆಲ್ಲಾ ಕಣ್ಮುಂದೆ ನೋಡಿದ್ದೆ, ಎಂಟತ್ತು ಮಕ್ಕಳು, ಹೊಟ್ಟೆಗಿದ್ರೆ ಬಟ್ಟೆಗಿಲ್ಲ, ಬಟ್ಟೆಗಿದ್ರೆ ಹೊಟ್ಟೆಗಿಲ್ಲ, ಸಣ್ಣ ಇಡುವಳಿ, ಹತ್ತಾರೆಕ್ರೆ ಜಮೀನು ಹರಿದು ಹಂಚಿ ಹೋಗಿ ಕಷ್ಟಪಡೋದನ್ನೆಲ್ಲ ನೋಡಿದ್ದೆ. ಅದಕ್ಕೊಂದಿನ ನಿರ್ಧಾರ ಮಾಡಿ ಮಂಡ್ಯಾದ ಕಲ್ಲಾಸ್ಪತ್ರೆಗೆ ಯಾರ್ನೂ ಹೇಳ್ದೆ ಕೇಳ್ದೆ ಹೋಂಟೋದೆ'** ಎಂದು ಹೇಳಿ ನಿಟ್ಟುಸಿರು ಬಿಡುತ್ತಿದ್ದಳು.

❑ ಪಿ.ಸಿ. ಶ್ರೀನಿವಾಸ
ತೀನ್‌ಮೂರ್ತಿ

ಶ್ರದ್ಧಾಂಜಲಿ

# ಇತಿಹಾಸಕ್ಕೆ ಸರಿದ ದೆಹಲಿ ಕನ್ನಡಿಗ ಡಾ. ಜಿ.ಎ. ಬಿರಾದಾರ



ಜೂನ್ 30, ಶನಿವಾರ ಬೆಳಬೆಳಗ್ಗೆ ದೆಹಲಿ ಕನ್ನಡಿಗರಿಗೊಂದು ನಂಬಲಸಾಧ್ಯವಾದ ಆಘಾತಕಾರಿ ಸುದ್ದಿ–ಜಿ.ಎ. ಬಿರಾದಾರ ಇನ್ನಿಲ್ಲ. . . ಜೂನ್ 29ರ ಸಂಜೆ ತಮ್ಮ ಮನೆದೇವರ ದರ್ಶನ ಮಾಡಿ ಬರುವಾಗ ದಾರಿಯಲ್ಲೇ ಹಠಾತ್ ಹೃದಯಾಘಾತದಿಂದ ಜಿ.ಎ. ಬಿರಾದಾರ ಅವರು ನಿಧನರಾದ ಸುದ್ದಿ ತಿಳಿದ ಅಪಾರ ಬಂಧು–ಮಿತ್ರರು ಶೋಕತಪ್ತರಾದರು. ಬೇಸಿಗೆಯ ರಜಕ್ಕೆ ಊರಿಗೆ ತೆರಳಿದ್ದ ಮನೆಯವರನ್ನು ಕರೆದುಕೊಂಡು ಬರಲು ಹೋಗಿದ್ದ ಬಿರಾದಾರ ಅವರು ಜೂನ್ 30ರಂದು ರೈಲು ಹತ್ತಿ ಜುಲೈ 1ರಂದು ದೆಹಲಿಗೆ ತಲುಪುವವರಿದ್ದರು. ಆದರೆ ವಿಧಿಯ ಕೈವಾಡ ಬೇರೆಯೇ ಇತ್ತು ! ಬಾಳ ಪಯಣವನ್ನು ಹಠಾತ್ ಮುಗಿಸಿ ಹಿಂದಿರುಗಲಾರದ ಕಾಣದ ಲೋಕಕ್ಕೆ ಒಬ್ಬರೇ ಪಯಣಿಸಿ ಬಿಟ್ಟರು!!! ಓ ದೇವರೇ ನೀನೆಷ್ಟು ನಿರ್ದಯಿ!

ಡಾ. ಗೋಲ್ಲಾಳಪ್ಪಗೌಡ ಅಪ್ಪಾಸಾಹೇಬಗೌಡ ಬಿರಾದಾರರು ಹೆಸರಾಂತ ತರುಣ ಇತಿಹಾಸ ಸಂಶೋಧಕರು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಮಹಾತ್ಮಗಾಂಧಿ ಕುರಿತು ಅವರದು ಅಪಾರ ಪಾಂಡಿತ್ಯ. ಡಾ. ಬಿರಾದಾರರ 'ಜಾಗತಿಕ ಯುದ್ಧಗಳ ನಡುವಿನ ಯುರೋಪ್' ಎಂಬ ಸಂಶೋಧನ ಲೇಖನ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಶ್ವಕೋಶದಲ್ಲಿ ಪ್ರಕಟವಾಗಿರುವುದು. ಕರ್ನಾಟಕದ ಸರದಾರ ಪಟೇಲ ಚನ್ನಬಸಪ್ಪ ಅಂಬಲಿ (2001), ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿ (2010) ಮತ್ತು Mahatma Gandhi's Campaign Against Untouchability in Karnataka (2010) ಎನ್ನುವ ಮಹತ್ವದ ಸಂಶೋಧನ ಗ್ರಂಥಗಳು ಪ್ರಕಟವಾಗಿರುವುವು. ಕಳೆದ ಏಪ್ರಿಲ್ ತಿಂಗಳಲ್ಲಿ ಅವರ "ಕರ್ನಾಟಕ ಭೂಷಣ ಶ್ರೀನಿವಾಸ ರಾವ ಕೌಜಲಗಿ" ಕೃತಿಯನ್ನು ಮಾಜಿ ಸಚಿವ ಎಚ್.ಕೆ. ಪಾಟೀಲರು ದೆಹಲಿಯಲ್ಲಿ ಬಿಡುಗಡೆಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸರದಾರ ಶರಣಗೌಡ ಇನಾಮದಾರ, ಚನ್ನಬಸಪ್ಪ ಕುಳಗೇರಿ ಹಾಗೂ ವಿಠ್ಠಲರಾವ ದೇವುಳಗಾಂವಕರ ಅವರ ಕುರಿತು ಬರೆದ ಸಂಶೋಧನ ಲೇಖನಗಳಿಗೆ ಗುಲಬರ್ಗಾ ಉದಯೋನ್ಮುಖ ಬರಹಗಾರರ ಬಳಗದಿಂದ ಪ್ರಶಸ್ತಿ ಪತ್ರ ಮತ್ತು ಮೂರು ಬೆಳ್ಳಿ ಪದಕಗಳ ಪುರಸ್ಕಾರ ದೊರೆತಿವೆ. Mahatma Gandhi's Campaign Against Untouchability in Karnataka ಕೃತಿಗೆ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಬೆಂಗಳೂರಿನಿಂದ 'ಜಯಶ್ರೀ ಪ್ರಶಸ್ತಿ' ದೊರೆತಿದೆ. ಡಾ. ಬಿರಾದಾರರು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ 20ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಬರೆದಿರುವರು. Mahatma Gandhi on Mahomedan atrocities at Sharan Basaveshwar Temple ಎಂಬ ಸಂಶೋಧನ ಗ್ರಂಥವು ಪ್ರಕಟಣೆಯ ಹಂತದಲ್ಲಿದೆ. ಪ್ರಸ್ತುತ Mahatma Gandhi's Campaign for Removal of Untouchability ಕುರಿತ ಗ್ರಂಥ ಬರೆಯುತ್ತಿದ್ದರು.

01.01.1969 ರಂದು ವಿಜಾಪುರ ಜಿಲ್ಲೆಯ ಗೋಲಗೇರಿ ಗ್ರಾಮದಲ್ಲಿ ಅಪ್ಪಾಸಾಹೇಬಗೌಡ ಹಾಗೂ ಸುಂದರಬಾಯಿಯವರ ಸುಪುತ್ರರಾಗಿ ಜನಿಸಿದ ಡಾ. ಜಿ.ಎ. ಬಿರಾದಾರ ಅವರು ಪ್ರಾಥಮಿಕ, ಮಾಧ್ಯಮಿಕ ಹಾಗೂ ಪದವಿಪೂರ್ವ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿ, ಪದವಿ ಶಿಕ್ಷಣವನ್ನು ಜಿ.ಪಿ. ಪೋರವಾಲ ಮಹಾವಿದ್ಯಾಲಯ ಸಿಂದರಗಿಯಲ್ಲಿ ಪೂರ್ಣಗೊಳಿಸಿದರು. 1990ರಲ್ಲಿ ಎಂ.ಎ. ಪದವಿ ವ್ಯಾಸಂಗಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದ ಇತಿಹಾಸ ವಿಭಾಗವನ್ನು ಪ್ರವೇಶಿಸಿದ ಅವರು Freedom Movement in Bijapur District ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ 1997ರ ಫೆಬ್ರವರಿ ತಿಂಗಳಲ್ಲಿ ಅದೇ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದರು. ಎನ್.ವಿ. ಪದವಿ ಮಹಾವಿದ್ಯಾಲಯ, ಗುಲಬರ್ಗಾ, ಕೇಂದ್ರ ಗೃಹ ಮಂತ್ರಾಲಯ, ನವದೆಹಲಿಯಲ್ಲಿ ಸೇವೆ ಸಲ್ಲಿಸಿದ ನಂತರ ಪ್ರಸ್ತುತ ಭಾರತ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯಲ್ಲಿ ಪತ್ರಾಗಾರ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು.

ಬಿರಾದಾರ ಅವರ ಪತ್ನಿ ಗೀತಾ ಬಿರಾದಾರ ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸರಳ, ಸಜ್ಜನಿಕೆಯ ಇತಿಹಾಸ ಸಂಶೋಧಕ, ವಿದ್ವಾಂಸ, ಲೇಖಕ ಜಿ.ಎ. ಬಿರಾದಾರ ಅವರ ನಿಧನದಿಂದ ದೆಹಲಿ ಕನ್ನಡಿಗರ ಸಾಹಿತ್ಯಕ ವಲಯಕ್ಕೆ, ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇವೆ.

# ಹ್ಯಾಂಗ ನಂಬಲಿ – ಈ ಕಟು ಸತ್ಯ !

30.06.2012 ಶನಿವಾರ ಬೆಳಿಗ್ಗೆ ಶ್ರೀ ಚೆನ್ನು ಮಠದ ಅವರು ಫೋನ್ ಮಾಡಿ ನಿಮಗೆ ವಿಷಯ ಗೊತ್ತಾಯ್ತಾ ? ಎಂದು ಪ್ರಶ್ನಿಸಿದಾಗ ಮನದಲ್ಲೇನೋ ಅಳುಕು, ಮತ್ತೆ ಅವರೇ ಮುಂದುವರೆದು ದುಃಖದ ಸುದ್ದಿ, ಡಾ. ಜಿ. ಎ. ಬಿರಾದಾರ ಇನ್ನಿಲ್ಲ. ಅವರಿಗೂ ಮುಂದೆ ಮಾತನಾಡಲಾಗಲಿಲ್ಲ. ನನಗೂ ಏನೂ ತೋಚದಂತಾಯ್ತು.

28.06.2012ರ ಗುರುವಾರ ಮಧ್ಯಾಹ್ನ ಫೋನ ರಿಂಗಾಯ್ತು, 'ಬೀಜೀ ಅದಿರೇನ', ಅದೇ ಮಾಮೂಲಿ ಧಾಟಿಯೊಳಗ ಡಾ. ಜಿ.ಎ. ಬಿರಾದಾರ ಕೇಳಿದಾಗ

'ಇಲ್ಲ ಹೇಳ್ರಿ'... ... ಅಂತ ಹೇಳ್ದೆ.

ಡಾ. ಜಿ. ಎ. ಬಿರಾದಾರ ಅಂದ್ರು–'ನಾ ಈಗ ಊರಾಗ ಅದೀನಿ ರವಿವಾರ (01.07.2012) ಮಧ್ಯಾಹ್ನ ದಿಲ್ಲಿಯಲ್ಲಿ ಇರ್ತೀನಿ, ನೀವು ಬರ್ತಿರೋ ? ಇಲ್ಲ. ವಸಂತ ಶೆಟ್ಟರ ಒಂದು ಸಣ್ಣ ಕಾರ್ಯಕ್ರಮ ಅದ' ಅಂದ್ರು.

'ಇಲ್ಲ, ಈ ವಾರ ಸ್ವಲ್ಪ ಆಫೀಸ್ ಕೆಲಸ ಅದ, ಮುಗಿಸಿ ಮಂಗಳವಾರ ಇಲ್ಲಾ ಬುಧವಾರ ಬರ್ತೀನಿ' ಅಂತ ನಾ ಹೇಳ್ದೆ.

'ಹಂಗಾರ ಬಂದಾಗ ಸಿಗೋಣ' ಅಂತ ಹೇಳಿ ಫೋನ ಬಂದ್ ಮಾಡಿದ್ರು. ಆದರ ಅವರ ಮತ್ತು ನನ್ನ ಮಾತುಕತೆ ಇದೇ ಕೊನೆದು ಅಂತ ಅವತ್ತು ಅನಿಸಿರಲಿಲ್ಲ.

ಭಾರತದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದ ಕರ್ನಾಟಕ, ಕರ್ನಾಟಕದ ಜನ, ಜನನಾಯಕರ ಸಹಭಾಗಿತ್ವದ ಪರಿಚಯ ಮಾಡಿಕೊಡುವ ದಿಟ್ಟ ಸಾಹಸದ ಪರಿಣಾಮ ಡಾ. ಜಿ. ಎ. ಬಿರಾದಾರ ಅವರಿಂದ ಕೆಲವು ರಚಿತ ಕೃತಿಗಳು. ಅವರ ಕೃತಿಗಳು ಅವರ ಇತಿಹಾಸ ಪ್ರಜ್ಞೆ, ಅವರಲ್ಲಿದ್ದ ಒಬ್ಬ ಸಂಶೋಧಕನ ಪರಿಚಯ ಮಾಡಿಸುತ್ತವೆ. ಇತ್ತೀಚೆಗೆ ಬಿಡುಗಡೆಯಾದ ಅವರ 'ಕರ್ನಾಟಕ ಭೂಷಣ ಕೌಜಲಗಿ ಶ್ರೀನಿವಾಸರಾಯರು' ಇನ್ನೂ ಜನರ ಕೈಗೆ ತಲುಪುವ ಹಂತದಲ್ಲೇ ಅದರ ಕರ್ತೃ ಇತಿಹಾಸದ ಪುಟ ಸೇರಿದ್ದು ಒಂದು ವಿಪರ್ಯಾಸ.

ಜೂನ್ ತಿಂಗಳ ಮಧ್ಯದಲ್ಲಿ ಹೀಗೇ ಮಾತಾಡ್ತ ತಾವು ಸಂಶೋಧಿಸಿದ ಮುಂಬರುವ ಕೃತಿಗಳ ಕುರಿತು ಚರ್ಚಿಸುತ್ತಿದ್ದಾಗ "ನಿಮಗಾಗಿ ಒಂದು ನಾಟಕ ಬರೀತಾ ಇದ್ದೇನೆ, ಇನ್ನು 1–2 ದೃಶ್ಯಗಳ ಕೆಲಸ ಬಾಕಿ ಇದೆ, ಊರಿಂದ ಬಂದ ನಂತರ ಪೂರ್ತಿಗೊಳಿಸಿ ಕೊಡುತ್ತೇನೆ" ಎಂದು ಹೇಳಿದ ಆತ್ಮೀಯ ಗೆಳೆಯ ದೃಶ್ಯಗಳ ಬಾಕಿ ಇಟ್ಟು ಅದೃಶ್ಯವಾದದ್ದು ! ನಂಬಲಸಾಧ್ಯ.

ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಸಂದೇಶದಲ್ಲಿ "I am unable to believe my best friend G. A. Biradar is no more. We lost an academic scholar"-

ಹೌದು ನಾವು ದೆಹಲಿ ಕನ್ನಡಿಗರಿಗಷ್ಟೇ ಅಲ್ಲ, ಕರ್ನಾಟಕಕ್ಕೆ, ಈ ದೇಶಕ್ಕೆ ಆದ ಒಂದು ದೊಡ್ಡ ಹಾನಿ.

ಈ ಸಧ್ಯದ ಆಘಾತಕರ ಸ್ಥಿತಿಯಲ್ಲಿ ನನಗೇನೂ ತೋಚುತ್ತಿಲ್ಲ. ಅದ್ರೆ ಚಿ. ಶ್ರೀನಿವಾಸ ರಾಜು ಅವರ ಕವನದ ಕೆಲ ಸಾಲುಗಳು ನನ್ನನ್ನು ಕಾಡುತ್ತಿವೆ ಅವು:

ದಿಬ್ಬಣ ಕನಸಲ್ಲಿ ಮುಸ್ಸಂಜೆ ಮುಡಿಪಾಗಿ<br>
ಸಾವಿನ ಅಚ್ಚರಿ ಹೆಚ್ಚಿಸಿದೆ<br>
ಕಲಬೆರಿಕಿಲ್ಲದ ಸ್ವಾರ್ಥಕೆ ಜಗ್ಗದ<br>
ಸಾವೊಂದೇ ಕಟುಸತ್ಯ ಲೋಕದಲಿ... ...

ಹೌದು! ಈ ಕಟು ಸತ್ಯ ಇಂದಲ್ಲ ನಾಳೆ ನಾವು ಒಪ್ಪಲೇ ಬೇಕು.

❑ ಶಿವಾನಂದ ಇಂಗಳೇಶ್ವರ

# ಗೆಳೆಯನ ಸಾವಿನ ಸುತ್ತ

ಯಾಕೆ ಸಾವು ಹೀಗೆ ನನ್ನ ಸುತ್ತಲೇ ಸುತ್ತುತ್ತಿದೆ? ಈಚೆಗೆ 12 ದಿನಗಳ ಕಾಲ ಸಾವಿನ ಸಮೀಪ ಸುಳಿದಾಡಿ, ಅದರ ಕದ ತಟ್ಟಿ ಮಹಾ ಅನಿಶ್ಚಿತತೆಯ ದಿನಗಳನ್ನು ಕಳೆದಿದ್ದೆ. ಅವು ಸಾವಿನ ಬಾಗಿಲು ತಟ್ಟಿದ ತಣ್ಣಗೆ ಕೊರೆಯುವಂಥಾ ದಿನಗಳು. ಅದೂ ರಾಮಾಯಣದ ವನವಾಸದಂತೆ, ಭಾರತದ ಅಜ್ಞಾತವಾಸದಂತೆ, ಯಾರಿಗೂ ಕಾಣದ, ಯಾರಿಂದಲೂ ಏನನ್ನೂ ಕೇಳದ ಮೌನದ ದಿನಗಳು.

ಆಗ ಕೇಳಿದ್ದು ಒಂದೇ ಸುದ್ದಿ,

ಅದೂ ಸಾವಿನ ಸುದ್ದಿ,

ನಾನು ಬಹುವಾಗಿ ಗೌರವಿಸುತ್ತಿದ್ದ ನನ್ನ ವಾವ ಸಾವಿನ ಕದ ತಟ್ಟಿ, ಮತ್ತೆ ಹಿಂದಿರುಗಲಾಗದ ಲೋಕಕ್ಕೆ ಹೋಗಿದ್ದರು. ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ, ಎಂಥ ದಿನಗಳವು?

ಹೇಗೋ ಈಚೆಗೆ ಬಂದರೆ, ಗೆಳೆಯ ಡಾ. ಜಿ ಎ. ಬಿರಾದಾರ ಎಲ್ಲವನ್ನೂ ಕಡಿದುಕೊಂಡು ಆಚೆಗೆ ಹೊರಟು ಹೋಗಿದ್ದ. ಅಂದರೆ ಆತ ಮತ್ತೆ ಬರಲಾರನೇ? ನಿಜಕ್ಕೂ ಆತ ಇನ್ನೆಂದೂ ನಮಗೆ ಕಾಣಲಾರನೇ? ಆತನ ಬರಲಿರುವ ಹೊಸ ಪುಸ್ತಕದ ಬಗ್ಗೆ ಮಾತನಾಡಲಾರನೇ? ಅಕ್ಟೋಬರದಲ್ಲಿ ಬಿಜಾಪುರದಲ್ಲಿ ನಡೆಯಲಿರುವ ಆತನ ಹೊಸ ಪುಸ್ತಕದ ಬಗೆಗಣ ಚರ್ಚೆಗೆ ಈಗ ಏನು ಅರ್ಥ ಉಳಿದಿದೆ? ಸಾವಿನ ಸುಳಿವೇ ನೀಡದೆ ಸಾವಿನ ಮೊರೆ ಹೊಕ್ಕ ಗೆಳೆಯ ಬಿರಾದಾರನ ಬಗ್ಗೆ ಸಾವಿಗ್ಯಾಕೆ ಅಷ್ಟೊಂದು ಮೋಹ?

ಆತನೂ ನಾನೂ ಒಟ್ಟೊಟ್ಟಿಗೇ ದೆಹಲಿಗೆ ಬಂದವರು. 1999ರಲ್ಲಿ ಭೇಟಿಯಾಗಿದ್ದೆವು. ಪ್ರಖ್ಯಾತವಾದ ರಾಷ್ಟ್ರೀಯ ಪತ್ರಾಗಾರದಲ್ಲಿ ಕನ್ನಡಿಗರೊಬ್ಬರು ಇರುವುದರಿಂದ ನಾನೂ ಸಂತೋಷಗೊಂಡಿದ್ದೆ. ನಾನು ಕೆಲಸ ಮಾಡುತ್ತಿರುವ ಸಂಸ್ಥೆಯ ಮೂಲಕ ಬರುವ ಎಲ್ಲ ಸಂಶೋಧಕರು ಆತನಲ್ಲಿ ನನ್ನ ಹೆಸರು ಹೇಳುತ್ತಿದ್ದ ತಕ್ಷಣ ಆತ ಉದಾರವಾಗಿ ಎಲ್ಲ ಸಹಾಯ ನೀಡುತ್ತಿದ್ದ.

ಆತನ ಆಹ್ವಾನದ ಮೇಲೆ ಆ ಪತ್ರಾಗಾರಕ್ಕೆ ಮತ್ತೆ ಮತ್ತೆ ಹೋಗುತ್ತಿದ್ದೆ. ಹೋದಾಗಲೆಲ್ಲ ಅದೆಂಥಾ ಪ್ರೀತಿ ಗೌರವ ತೋರುತ್ತಿದ್ದ. ಎಷ್ಟೊಂದು ಹಳೆಯ ರೆಕಾರ್ಡುಗಳನ್ನು ಜತನದಿಂದ ಕಾಣಿಸುತ್ತಿದ್ದ? ಕರ್ನಾಟಕಕ್ಕೆ ಸಂಬಂಧಿಸಿದ್ದ ಹಳೆಯ ಬ್ರಿಟಿಷ್ ದಾಖಲೆಗಳ ಬಗೆಗೆ ಆತನಿಗೆಷ್ಟು ಮೋಹವಿತ್ತು? ಅಂಥ ದಾಖಲೆಗಳ ಆಧಾರದಿಂದಲೇ ಅಲ್ಲವೇ ಆತ 'ಉತ್ತರ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳುವಳಿ' ಪುಸ್ತಕವನ್ನು ಬರೆದದ್ದು? ಎಂಥಾ ಒಳ್ಳೆಯ ಪುಸ್ತಕವದು!. ದೆಹಲಿ ಕನ್ನಡಿಗರ ಮಾನ ಹೆಚ್ಚಿಸಿದ ಪುಸ್ತಕವಲ್ಲವೇ ಅದು?

ಸಾಮಾನ್ಯವಾಗಿ ನಮಗೆಲ್ಲರಿಗೂ ಭಾರತ ದೇಶದ ಸ್ವಾತಂತ್ರ್ಯ ಚಳುವಳಿಯ ಬಗೆಗೆ ಅಷ್ಟು ಇಷ್ಟು ಗೊತ್ತಿದೆ. ಗಾಂಧಿ, ನೆಹರೂ, ಪಟೇಲ್ ಮೊದಲಾದ ಹೆಸರುಗಳನ್ನು ಹೇಳುತ್ತಾ ಅಗಸ್ಟ್ 15ರಂದು ಈ ದೇಶದ ಎಲ್ಲ ಮಕ್ಕಳೂ ದೇಶಕ್ಕೆ ವಂದನೆ ಹೇಳುತ್ತಾರೆ. ಉಪ್ಪಿನ ಸತ್ಯಾಗ್ರಹ, ಖಿಲಾಫತ್ ಚಳುವಳಿ, ಜಲಿಯಾನ ವಾಲಾ ಭಾಗ್ ದುರಂತ..ಇವೆಲ್ಲ ಪಾಠ ಪುಸ್ತಕಗಳಲ್ಲಿ ಇದ್ದುದರಿಂದ ಅವುಗಳನ್ನು ಕಲಿಯದೇ ಬೇರೆ ಹಾದಿಗಳಿರಲಿಲ್ಲ. ಆದರೆ ಆಮೇಲೆ ನಾವೆಷ್ಟು ಓದಿದ್ದೇವೆ? ನಮ್ಮ ಊರಿನಲ್ಲಿಯೇ ನಡೆದಿರಬಹುದಾದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ನಮಗೇನು ತಿಳಿದಿದೆ? ಗೆಳೆಯ ಬಿರಾದಾರನ ಕುತೂಹಲ ಆ ಕಡೆಗಿತ್ತು. ಆತ ಉತ್ತರ ಕರ್ನಾಟಕದಲ್ಲಿ ನಡೆದ ಸವಿನಯ ಕಾನೂನು ಭಂಗ ಚಳುವಳಿಯ ಬಗ್ಗೆ ಸಾಮಾನ್ಯರಿಂದ ಮಾಹಿತಿ ಕಲೆ ಹಾಕಿದ, ಪತ್ರಾಗಾರದಿಂದ ವಿವರ ಸಂಗ್ರಹಿಸಿದ, ಹಳೆಯ ಪತ್ರಿಕೆಗಳನ್ನು ಓದಿದ. ಗೆಳೆಯರಿಗೆ ಪತ್ರ ಬರೆದ..ಉತ್ತರ ಕನ್ನಡ, ಬೆಳಗಾವಿ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಜನಸಾಮಾನ್ಯರು ದೇಶದ ಬಿಡುಗಡೆಗೆ ನಡೆಸಿದ ಹೋರಾಟಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅವುಗಳನ್ನು ಅಚ್ಚುಕಟ್ಟಾಗಿ ಜೋಡಿಸಿದ. ವಿಶ್ಲೇಷಿಸಿದ. ಲಭಿಸಿದ ಮಾಹಿತಿಗಳು ಅವನಿಗೇ ಅಚ್ಚರಿ ತಂದಿತು. ಜಾತಿ ಕಲಹಗಳು, ಪ್ರಾದೇಶಿಕ ಕಲಹಗಳು, ವೈಚಾರಿಕ ಭಿನ್ನತೆಗಳು, ರಾಜಕೀಯ ಹುನ್ನಾರಗಳು–ಇವೆಲ್ಲವುಗಳ ನಡುವೆಯೇ, ಹೆಂಗಸರು ಬ್ರಿಟಿಷರಿಗೆ ಪೊರಕೆ ತೋರಿಸಿದ್ದು, ಬ್ರಿಟಿಷರ ಗುಂಡಿಗೆ ಎದೆ ಕೊಟ್ಟದ್ದು, ಹಿಡಿ ಉಪ್ಪು ತೋರಿಸಿ ಬ್ರಿಟಿಷರನ್ನು ಕಂಗಾಲಾಗಿಸಿದ್ದು..ಇತ್ಯಾದಿ ವಿವರಗಳನ್ನು ಆತ ಅದ್ಭುತವಾಗಿ ಕನ್ನಡ ಭಾಷೆಯಲ್ಲಿ ಹಿಡಿದು ಕೊಟ್ಟಿದ್ದ. ಈ ಪುಸ್ತಕಕ್ಕೆ ಮುನ್ನುಡಿ ಬರೆಯುವ ಭಾಗ್ಯ ನನ್ನದಾಯಿತು. ಕರ್ನಾಟಕದ ಉದ್ದಗಲದಿಂದ ಈ ಪುಸ್ತಕಕ್ಕೆ ಮನ್ನಣೆ ಪ್ರಾಪ್ತವಾಯಿತು. ಪತ್ರಿಕೆಗಳಲ್ಲಿ ಒಳ್ಳೆಯ ವಿಮರ್ಶೆ ಬಂತು. ಪ್ರಶಸ್ತಿಗಳು ಹುಡುಕಿಕೊಂಡು ಬಂದುವು. ಈ ದೆಹಲಿ ಕನ್ನಡಿಗ ಹೊರನಾಡು ಕನ್ನಡಿಗರ ಪ್ರತಿಷ್ಠೆಯನ್ನು ಹೆಚ್ಚು ಮಾಡಿದ್ದ. ನಾವು ಹೆಚ್ಚು ಹೆಚ್ಚು ಹತ್ತಿರವಾದೆವು. ಆತನಲ್ಲಿ ಪ್ರತಿಭೆಯಿತ್ತು.

ಗೆಳೆಯ ಬಿರಾದಾರ ಮತ್ತೆಂದೂ ಹಿಂದಿರುಗಿ ನೋಡಲಿಲ್ಲ. ಮಹಾತ್ಮಾ ಗಾಂಧಿಯವರು ಕರ್ನಾಟಕದಲ್ಲಿ ನಡೆಸಿದ ಅಸ್ಪೃಶ್ಯತಾ ವಿಮೋಚನಾ ಚಳುವಳಿಯ ಬಗೆಗೆ ಇಂಗ್ಲಿಷ್‌ನಲ್ಲಿ ಒಂದು ಪುಸ್ತಕ ಬರೆದ. ಗಾಂಧಿಯವರು ನನ್ನ ಊರಾದ ಸುಳ್ಯಕ್ಕೆ ಬಂದಿದ್ದನ್ನು ದಿನಾಂಕ ಸಹಿತ ವಿವರಿಸಿ ನನಗೆ ಫೋನ್ ಮಾಡಿ ನನ್ನಲ್ಲಿ ರೋಮಾಂಚನ ಉಂಟುಮಾಡಿದ್ದ. ಆ ಪುಸ್ತಕದ ಬಿಡುಗಡೆಗೆ ಎಷ್ಟು ಸಂಭ್ರಮದಿಂದ ಓಡಾಡಿದ್ದ. ಆದರೆ ನಾನಾಗ ಕಣ್ಣಿನ ತೊಂದರೆಯಿಂದ ಬಳಲುತ್ತಿದ್ದೆ. ಹಾಗಾಗಿ ಆತ ನಿರೀಕ್ಷಿಸಿದ ಸಹಾಯ ಮಾಡಲಾಗಲಿಲ್ಲ ನನಗೆ. ಆದರೂ ದೆಹಲಿಯ ಗಾಂಧಿ ಸ್ಮಾರಕ ಸಂಸ್ಥೆಯಿಂದ ಪುಸ್ತಕ ಬಿಡುಗಡೆಯಾಗುವಂತೆ ನೋಡಿಕೊಂಡೆ. ನನ್ನ ಕೇಳದೆ ಆತ ಏನೂ ಮಾಡುತ್ತಿರಲಿಲ್ಲ. ಮನೆಗೆ ಬಂದು ಪುಸ್ತಕ ನೀಡಿ, ಕಣ್ಣಿನ ಸಮಸ್ಯೆಯ ಕುರಿತು ವಿಚಾರಿಸಿಕೊಂಡಿದ್ದ. ಈ ಪುಸ್ತಕ ಕನ್ನಡದಲ್ಲಿ ಬರಬೇಕು ಬಿರಾದಾರರೇ ಅಂದದ್ದಕ್ಕೆ 'ಅನುವಾದಕರನ್ನು ಹುಡುಕುತ್ತಿದ್ದೇನೆ' ಅಂದಿದ್ದ. ಈಗಾತ ಎಲ್ಲ ಹುಡುಕಾಟಗಳಾಚೆ ಹೊರಟು ಹೋಗಿಬಿಟ್ಟ.

ಮತ್ತೆ ಬರೆಹ! ಈಗ ಕೌಜಲಗಿ ಶ್ರೀನಿವಾಸ ರಾಯರ ಕುರಿತು ಪುಸ್ತಕ. ಪುಸ್ತಕ ಬರೆದಾದ ಮೇಲೆ ಅದರ ಪ್ರಕಾಶಕರಿಗಾಗಿ ಹುಡುಕಾಟ. ಧಾರವಾಡದಲ್ಲೆಲ್ಲ ಓಡಾಟ. ಕೊನೆಗೂ ಪುಸ್ತಕ ಪ್ರಕಟವಾಯಿತು, ದೆಹಲಿಯಲ್ಲಿ ಬಿಡುಗಡೆಯೂ ಆಯಿತು. ನಾನಾಗ ಆರೋಗ್ಯವಾಗಿರಲಿಲ್ಲ. ಆದರೂ ಪುಸ್ತಕ ಓದಿ ಆತನಿಗೊಂದು ಪತ್ರ ಬರೆದೆ–

'ಪ್ರಿಯರಾದ ಡಾ. ಜಿ ಎ. ಬಿರಾದಾರ ಅವರಿಗೆ ವಂದನೆಗಳು.

ತಾವು ಪ್ರೀತಿಯಿಂದ ಕೊಟ್ಟ ತಮ್ಮ ಈಚಿನ ಕೃತಿ 'ಕರ್ನಾಟಕ ಭೂಷಣ ಶ್ರೀನಿವಾಸ ರಾವ್ ಕೌಜಲಗಿ' ಯನ್ನು ಪೂರ್ತಿ ಓದಿದೆ. ನಾವೆಲ್ಲ ಮರೆತು ಬಿಟ್ಟಿರುವ ಮಹನೀಯರೋರ್ವರನ್ನು ಮತ್ತೆ ನೆನಪಿಗೆ ತಂದುಕೊಟ್ಟ ತಮಗೆ ನಾನು ಕೃತಜ್ಞನಾಗಿದ್ದೇನೆ.

ಕೌಜಲಗಿಯವರು ಕೆಲಸ ಮಾಡಿದ ಕಾಲ ಘಟ್ಟ ನಿಜಕ್ಕೂ ಅತ್ಯಂತ ಮಹತ್ವದ್ದು ಮತ್ತು ಬಹಳ ಸಂಕೀರ್ಣವಾದದ್ದು. ಒಂದೆಡೆ ಲೋಕಮಾನ್ಯ ತಿಲಕರ ಉಗ್ರಗಾಮೀ ನಿಲುವುಗಳು, ಇನ್ನೊಂದೆಡೆ ಅದಕ್ಕೆ ವಿರುದ್ಧವಾದ ಮಹಾತ್ಮಾ ಗಾಂಧೀಯವರ ಅಹಿಂಸಾವಾದ, ಮತ್ತೊಂದೆಡೆ ವಸಾಹತೀಕರಣದ ಫಲವಾಗಿ ದೊರೆತ ಹೊಸ ತಿಳುವಳಿಕೆಯಿಂದ ಎಚ್ಚೆತ್ತ ಹಿಂದುಳಿದ ಜನವರ್ಗ ತಮ್ಮ ಅಸ್ತಿತ್ವಕ್ಕಾಗಿ ನಡೆಸುತ್ತಿದ್ದ ಹೋರಾಟ ಮತ್ತು ಇವನ್ನೆಲ್ಲ ಮೀರಿ ನಡೆಯಬೇಕಾದ ರಾಷ್ಟ್ರೀಯ ವಿಮೋಚನಾ ಚಳುವಳಿ. ಇವುಗಳನ್ನೆಲ್ಲ ಆಗಣ ನಾಯಕರು ಗಮನಿಸಲೇಬೇಕಾಗಿತ್ತು. ಕೌಜಲಗಿಯವರ ಕುರಿತ ತಮ್ಮ ಪುಸ್ತಕವು ಅಂತಹ ಸಂಕೀರ್ಣ ಪರಿಸ್ಥಿತಿಯನ್ನು ತಾಳ್ಮೆಯಿಂದ ವಿವರಿಸುತ್ತದೆ. 1920ರ ದಶಕದಿಂದ 1940ರ ದಶಕದ ಕರ್ನಾಟಕದ ಚರಿತ್ರೆಯನ್ನು ಅರ್ಥಮಾಡಿಕೊಳ್ಳಬಯಸು ವವರಿಗೆ ಇದೊಂದು ಅತ್ಯುತ್ತಮ ಕೈಪಿಡಿ. ಈ ಅರ್ಥದಲ್ಲಿ ನಿಮ್ಮ ಕೃತಿಯು ಕೇವಲ ಒಂದು ಜೀವನ ಚರಿತ್ರೆಯಲ್ಲ, ಬದಲು ಕರ್ನಾಟಕದ ಒಂದು ಕಾಲದ ಇತಿಹಾಸವೂ ಹೌದು'

ಬಿರಾದಾರ್ ಫೋನ್ ಮಾಡಿದ್ದ–" ಒಂದು ಉದ್ದ ಲೇಖನ ಬರೆದು ಬಿಡಿ, ನೀವು ಬರೆದರೆ ಬಹಳ ಜನ ಓದುತ್ತಾರೆ'.

ಬರೆಯುವೆ ಎಂದಿದ್ದೆ.

ಆದರೆ ಬರೆದದ್ದು ಇದು.

ಇದನ್ನು ನಾನು ಬಯಸಿರಲಿಲ್ಲ,

ಆತನೂ ಬಯಸಿರಲಿಲ್ಲ.

ನಾನು ಆಸ್ಪತ್ರೆಯಿಂದ ಬಂದ ಮರುದಿನ

ಫೋನ್ ಮಾಡಿದ್ದ.

ನಾನು ಮಾತಾಡುವ ಸ್ಥಿತಿಯಲ್ಲಿ ಇರಲಿಲ್ಲ.

ಈಗ ನಾನು ಮಾತಾಡಬಲ್ಲೆ,

ಆದರೆ ಆತ ಮಾತಾಡಲೊಲ್ಲ.

❑ ಡಾ. ಪುರುಷೋತ್ತಮ ಬಿಳಿಮಲೆ

ಅಭಿನಂದನೆ

# ಕಲಾವಿದ ಶ್ರೀ ಸುಧೀರ್ ಫಡ್ನೀಸರ ವಿದೇಶ ಕಲಾಯಾತ್ರೆ



ಶ್ರೀ ಸುಧೀರ್ ಫಡ್ನೀಸ್ ಇತ್ತೀಚೆಗೆ ಇರಾನ್ ರಾಜಧಾನಿ ತೆಹರಾನ್‌ಗೆ ಹೋಗಿ ಬಂದ ಸಂದರ್ಭದಲ್ಲಿ ಅವರೊಟ್ಟಿಗೆ ಹೀಗೆ ನಾಲ್ಕು ಮಾತು. . . .

**ಇಂಗಳೇಶ್ವರ :** ತಾವು ತೆಹರಾನ್‌ಗೆ ಹೋಗಿದ್ದು ಯಾಕೆ ?

**ಫಡ್ನೀಸ್ :** ಭಾರತ-ಇರಾನ್ ಸಾಂಸ್ಕೃತಿಕ ಸಪ್ತಾಹ ದಿನಾಂಕ 07.06.2012 ರಿಂದ 12.06.2012ರವರೆಗೆ ತೆಹರಾನ್‌ನಲ್ಲಿ ಜರುಗಿತು. ಅದರಲ್ಲಿ ಭಾಗವಹಿಸಲಿಕ್ಕೆ ಹೋಗಿದ್ದೆ.

**ಇಂಗಳೇಶ್ವರ :** ಈ ಸಪ್ತಾಹದ ಸಂಯೋಜಕರಾರು ?

**ಫಡ್ನೀಸ್ :** ಭಾರತ ಸರಕಾರದ ಮಿನಿಸ್ಟ್ರಿ ಆಫ್ ಟೆಕ್ಸ್‌ಟೈಲ್ಸ್ ಇರಾನದ ಸಹಕಾರದೊಂದಿಗೆ ಏರ್ಪಡಿಸಿತ್ತು. ಈ ಸಪ್ತಾಹದಲ್ಲಿ ಭಾರತದ ವಿವಿಧ ಕಲಾ ಪ್ರಕಾರಗಳ ಪ್ರದರ್ಶನ ಆಯೋಜಿಸಲಾಗಿತ್ತು, ಅದರಲ್ಲಿ ಪೈಂಟಿಂಗ್ ಕೂಡಾ ಒಂದು

**ಇಂಗಳೇಶ್ವರ :** ಚಿತ್ರಕಲೆಗೆ ಸಂಬಂಧಿಸಿದಂತೆ ಎಷ್ಟು ಜನ ಕಲಾವಿದರು ಭಾರತದಿಂದ ಭಾಗವಹಿಸಿದ್ದರು?

**ಫಡ್ನೀಸ್ :** ವಿವಿಧ ರಾಜ್ಯಗಳ 6 ಜನ ಕಲಾವಿದರು ಮಿನಿಸ್ಟ್ರಿ ಆಫ್ ಟೆಕ್ಸ್‌ಟೈಲ್ಸ್‌ನಿಂದ ನಾಮಾಂಕಿತರಾಗಿದ್ದು ಅದರಲ್ಲಿ ನಾನೂ (ದೆಹಲಿಯಿಂದ) ಒಬ್ಬ. ಇಂತಹ ಒಳ್ಳೆಯ ಅವಕಾಶವನ್ನು ಭಾರತ ಸರಕಾರ ನನಗೆ ದೊರಕಿಸಿಕೊಟ್ಟಿದ್ದಕ್ಕೆ ಭಾರತ ಸರಕಾರ, ಮಿನಿಸ್ಟ್ರಿ ಆಫ್ ಟೆಕ್ಸ್‌ಟೈಲ್ಸ್‌ನ ಎಲ್ಲ ಅಧಿಕಾರಿ, ಸಿಬ್ಬಂದಿ ವರ್ಗಕ್ಕೆ ನಾನು ಋಣಿ.

**ಇಂಗಳೇಶ್ವರ :** ತೆಹರಾನ್ ಜನರು ಭಾರತೀಯರ ಬಗ್ಗೆ / ಭಾರತದ ಕಲಾವಿದರ ಬಗ್ಗೆ ಯಾವ ಭಾವನೆ ಹೊಂದಿದ್ದಾರೆ?

**ಫಡ್ನೀಸ್ :** ಭಾರತ, ಭಾರತೀಯರು ಅದರಲ್ಲೂ ಕಲಾವಿದರ ಬಗ್ಗೆ ಹೆಮ್ಮೆ ಗೌರವ. ನಮ್ಮೊಂದಿಗೆ ಸಹೃದಯತೆಯಿಂದ ನಡೆದುಕೊಂಡರು. ನಮ್ಮ ಕಲಾ ಪ್ರಕಾರಗಳ ಬಗ್ಗೆ ಆಸಕ್ತಿ, ಕುತೂಹಲದಿಂದ ಅವಲೋಕಿಸಿ ಪ್ರತಿ ವಿವರಗಳನ್ನು ಪಡೆದುಕೊಳ್ಳುತ್ತಿದ್ದರು.

**ಇಂಗಳೇಶ್ವರ :** ನಿಮ್ಮ ಅವರ ಮಧ್ಯೆ ವಾತುಕತೆಗೆ ಭಾಷೆಯು ತೊಡಕಾಗಿರಬೇಕಲ್ಲ?

**ಫಡ್ನೀಸ್ :** ಹೌದು, ಅರ್ಧಂಬರ್ಧ ಹಿಂದಿ, ಇಂಗ್ಲಿಷ್‌ನಲ್ಲಿ ಮಾತುಕತೆ ಸಾಗುತ್ತಿತ್ತು. ಇನ್ನು ಕಲೆ, ಕಲಾಪ್ರಕಾರ ಇತ್ಯಾದಿ ಸೂಕ್ಷ್ಮ ವಿಷಯಗಳ ಬಗ್ಗೆ ವಿವರಣೆ ಕೊಡುವಾಗ ದ್ವಿಭಾಷಿಗಳ ಸಹಾಯ ಸಿಗ್ತಿತ್ತು. ಹೀಗಾಗಿ ಯಾವುದೇ ರೀತಿಯ ಅಡಚಣೆ ಬರಲಿಲ್ಲ. ಅಲ್ಲಿನ ಜನರಿಗೆ ಭಾರತದ ಕಲಾಪ್ರಕಾರ, ಐತಿಹಾಸಿಕ ವಾಸ್ತುಗಳಾದ, ದೆಹಲಿ, ಬಾದಾಮಿ, ಬೇಲೂರು-ಹಳೇಬೀಡು, ಕೊನಾರ್ಕ್, ಅಜಂತಾ, ಎಲ್ಲೋರಾ, ಖಜುರಾಹೋ ಮುಂತಾದ ಸ್ಥಳಗಳ ಕಲಾ ಪ್ರಕಾರಗಳ ಬಗ್ಗೆ ಕುತೂಹಲ, ಗೌರವ, ಹೆಮ್ಮೆ. ಆ ಚಿತ್ರಗಳು ಜನರ ಮನಸೂರೆಗೊಂಡವು.

**ಇಂಗಳೇಶ್ವರ :** ನಿಮ್ಮ ಚಿತ್ರಗಳ ಬಗ್ಗೆ ಅವರಿಂದ ಬಂದ ಪ್ರತಿಕ್ರಿಯೆ?

**ಫಡ್ನೀಸ್ :** ನಮ್ಮ ಚಿತ್ರಕಲಾ ಪ್ರದರ್ಶನ "ಹೋನಾರ ಮಂದಾರ" ಆರ್ಟ್ ಗ್ಯಾಲರಿಯಲ್ಲಿ ಜರುಗಿದ್ದು, ದಿನಕ್ಕೆ ಸುಮಾರು 700-800 ಪ್ರೇಕ್ಷಕರು ಈ ಪ್ರದರ್ಶನ ವೀಕ್ಷಿಸಿದ್ದಾರೆ. ಅದರಲ್ಲಿ ನನ್ನ ಕಲಾಪ್ರಕಾರವಾದ ಬಾಟಿಕ್ ಬಗ್ಗೆಯೇ ಸೂಕ್ಷ್ಮ ವಿಷಯಗಳನ್ನು ಅರಿತುಕೊಳ್ಳುವ ಹಂಬಲ ಅಲ್ಲಿನ ಜನರಲ್ಲಿತ್ತು. ಅಂದ್ರೆ, ಸಾಧಾರಣವಾಗಿ ಬಾಟಿಕ್‌ನಲ್ಲಿ 3 ಬಣ್ಣಗಳನ್ನು ಮಾತ್ರ ಹೆಚ್ಚಾಗಿ ಉಪಯೋಗಿಸ್ತಾರೆ. ಆದ್ರೆ ಸಸ್ಯಗಳಿಂದ (ವೆಜಿಟೇಬಲ್ ಕಲರ್ಸ್) ತಯಾರಿಸಿದ ವಿವಿಧ ಬಣ್ಣಗಳ ಪ್ರಯೋಗ ನನ್ನ ವಿಶೇಷತೆ. ಇದು ಇರಾನ್ ಜನರ ಮೆಚ್ಚುಗೆಗೆ ಪಾತ್ರವಾಯ್ತು. (ಬಾಟಿಕ್ ಪೇಂಟಿಂಗ್‌ನ್ನು ಹೆಚ್ಚಾಗಿ ಡೈಯಿಡ್ ಬಣ್ಣಗಳಿಂದ ತಯಾರಿಸುತ್ತಾರೆ, ಆದರೆ ಸುಧೀರ್ ಫಡ್ನೀಸರ ಕೃತಿಯಲ್ಲಿ ನೈಜ ಸಸ್ಯಗಳ ಬಣ್ಣದ ಉಪಯೋಗ ಜೊತೆಗೆ ವಿವಿಧ ಬಣ್ಣಗಳ ನೆರಳಿನ ಛಾಯೆ ಹಾಗೂ ಮಿಶ್ರಣ ಕಾಣುವುದು ವಿಶೇಷ.)

**ಇಂಗಳೇಶ್ವರ :** ಅಲ್ಲಿಯ ಕಲಾ ಗ್ಯಾಲರಿ ಸಂಸ್ಕೃತಿ ಹೇಗೆ?

**ಫಡ್ನೀಸ್ :** ತೆಹರಾನ್‌ದಲ್ಲಿ 10-15 ಕಲಾ ಗ್ಯಾಲರಿಗಳಿವೆ. ಕಲಾವಿದರ ಪ್ರೋತ್ಸಾಹನೆಗಾಗಿ ಬಾಡಿಗೆ ರಹಿತವಾಗಿ ಕಲಾವಿದರ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಡುತ್ತಾರೆ. ಇದರಿಂದ ಅವರಿಗೆ ಕಲಾವಿದರ ಬಗ್ಗೆ ಇರುವ ಗೌರವ, ಕಾಳಜಿ ಸ್ಪಷ್ಟವಾಗುತ್ತದೆ.

ಇನ್ನು ಅಲ್ಲಿನ ಜನ, ಸಂಸ್ಕೃತಿ ಬಗ್ಗೆ ಹೇಳಬೇಕೆಂದರೆ, ಕೇವಲ ಒಂದು ವಾರದ ನಮ್ಮ ಅಲ್ಲಿನ ವಾಸ್ತವ್ಯದಲ್ಲಿ ಆ ಜನರ, ಸಂಸ್ಕೃತಿಯ ಅರಿವು ಕಷ್ಟ. ಆದಾಗ್ಯೂ ಸ್ವಲ್ಪದರಲ್ಲೇ ಹೇಳಬೇಕೆಂದ್ರೆ ತುಂಬಾ ಒಳ್ಳೆ ಜನ, ಸಹಕಾರ ಪ್ರವೃತ್ತಿ, ಭಾರತೀಯರ ಬಗ್ಗೆ ಗೌರವ, ಹೆಮ್ಮೆ. ಅಲ್ಲಿನ ವ್ಯವಸ್ಥೆಯ ಬಗ್ಗೆ ಹೇಳಬೇಕಂದ್ರೆ ಎಲ್ಲ ಕಲಾವಿದರನ್ನ ಸಮಾನರೂಪವಾಗಿ ನೋಡುತ್ತಾರೆ, ಯಾವುದೇ ಭೇದಭಾವ, ತಾರತಮ್ಯ ಅಲ್ಲಿಲ್ಲ. ಇನ್ನು ಅಲ್ಲಿನ ಸರಕಾರಿ ನೀತಿ ನಿಯಮ ಅಷ್ಟಾಗಿ ಗಮನಕ್ಕೆ ಬರಲಿಲ್ಲ. ಇಲ್ಲಿ ಒಂದು ಘಟನೆಯನ್ನು ಅವಶ್ಯ ತಿಳಿಸಬಯಸುತ್ತೇನೆ ಅದೇನಂದ್ರೆ ನಮ್ಮೊಟ್ಟಿಗಿದ್ದ ಕೆಲ ಸಹ ಕಲಾವಿದರು ಗ್ಯಾಲರಿ ಪಕ್ಕದ ಜಾಗದಲ್ಲಿ (ಪ್ಯಾಸೇಜ್) ನಮಾಜ್ ಮಾಡುತ್ತಿದ್ದರು. ಆಗ ಅಲ್ಲಿ ಒಬ್ಬ ವ್ಯಕ್ತಿ ಬಹುಶಃ ಸೆಕ್ಯುರಿಟಿಗೆ ಸಂಬಂಧಿಸಿದವರಿರಬಹುದು, ನಮ್ಮ ಸಹ ಕಲಾವಿದರಿಗೆ ಈ ರೀತಿ ಹೇಳಿದರು "ನಿಮ್ಮ ಧಾರ್ಮಿಕ ಆಚರಣೆ, ಆಚಾರ-ವಿಚಾರ ಹೀಗೆ ಸಾರ್ವತ್ರಿಕವಾಗಿ ಆಚರಿಸಲು ಇಲ್ಲಿ ಅವಕಾಶ ಇಲ್ಲ. ಅದೇನಿದ್ರೂ ಸಂಬಂಧಿಸಿದ ಸ್ಥಳ (ಮಸೀದಿ, ಚರ್ಚ್, ಮಂದಿರ, ಗುರುದ್ವಾರ ಇತ್ಯಾದಿ) ಅಥವಾ ನಿಮ್ಮ ಮನೆ / ವಾಸಸ್ಥಾನಗಳಲ್ಲಿ ಮಾತ್ರ ಮಾಡತಕ್ಕದ್ದು. ಹೀಗೆ ಸಾರ್ವಜನಿಕ ಸ್ಥಳಗಳಲ್ಲಿ ಧಾರ್ಮಿಕ ಆಚರಣೆ ದಂಡನೀಯ ಅಪರಾಧ" ಎಂದು ತಿಳಿ ಹೇಳಿದರು.

ಶ್ರೀ ಫಡ್ನೀಸ್ ಅವರಿಗೆ ಇನ್ನೂ ಇಂತಹ ಹೆಚ್ಚಿನ ಅವಕಾಶಗಳು ದೊರೆತು ಮುಂಬರುವ ದಿನಗಳಲ್ಲಿ ಇನ್ನೂ ಅನೇಕ ಕಡೆ ದೇಶ-ವಿದೇಶಗಳಲ್ಲಿ ತಮ್ಮ ಕಲಾ ಪ್ರತಿಭೆ ಮೆರೆಯಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.

❑ ಶಿವಾನಂದ ಇಂಗಳೇಶ್ವರ

## ಫಲವುಂಡು

ಇಂದಿನ ನಿಶೆಯಲ್ಲ ನಾಳಿನ ಉಷೆಯನ್ನು ನೆನಸಿಕೊಂಡು
ನಿನ್ನೆಯ ಫಲವುಂಡು ನಾಳೆಯ ಕನಸು ಕಂಡು
ನಿನ್ನೆ ಮೊನ್ನೆ ನಾಳೆ ನಾಡಿದ್ದು ಎಂದು
ದಿನಗಳನ್ನೆಣಿಸಿ
ಶಿಶು, ಕಿಶೋರ, ಯುವಕ ವೃದ್ಧರ ಸ್ಥಿತಿಗೆ ಹೋಲಿಸಿ
ಬದುಕು ಬಾಳು ಎಂದರೆ ಇದೇ ಎಂಬರಿವು ಮೂಡಿ
ನನ್ನ ಕ್ರಿಯಾಶಕ್ತಿ ಹೆಚ್ಚಾಗಿ
ನಾಳೆ ಇಂದು, ಈಗ, ಈ ಕ್ಷಣ ಎಂದು
ಸ್ವಪ್ನ ಲೋಕದಲ್ಲ ತೇಲಾಡುತ್ತ ನಾನು
ಕ್ರಿಯೆ-ಪ್ರಕ್ರಿಯೆ ಎಂಬ ಹೊಂಡದಲ್ಲ ಮುಳುಗಿದೆ

❑ ಡಾ. ಅಹಲ್ಯಾಚಿಂತಾಮಣಿ

ಸ್ಮರಣೆ
ಜನ್ಮಶತಮಾನೋತ್ಸವ




# ಕನ್ನಡದ ಕೋಗಿಲೆ ಜಯದೇವಿ ತಾಯಿ

❑ ಎಸ್. ವಿದ್ಯಾಶಂಕರ್

ಎಲ್ಲ ಬಲ್ಲವಳೆಂಬ ಇಲ್ಲವದು ಭ್ರಮೆ ಎನಗೆ
ಬಲ್ಲವರ ಪಾದ ಹಿಡಿಯುವೆ ಬಲ್ಲಿದರು
ಕಲಿಸಿರಿ ಮತ್ತೆ ನುಡಿಸಿರಿ

ಜಯದೇವಿ ತಾಯಿ ಲಿಗಾಡೆಯವರದು ವಿನಯವೇ ಮೈವೆತ್ತ ವ್ಯಕ್ತಿತ್ವ. ಮೇಲಿನ ತ್ರಿಪದಿ ಇದಕ್ಕೆ ಸಾಕ್ಷಿ. ಸದಾ ಬಿಳಿಯುಡಿಗೆ ಅವರ ಸಾತ್ವಿಕತೆಗೆ ಸಂಕೇತ. ತೀರಾ ಎತ್ತರವೂ ಅಲ್ಲದ ತೀರಾ ಕುಳ್ಳೂ ಅಲ್ಲದ ಮಧ್ಯಮಗಾತ್ರದ, ಮೊದಲ ನೋಟಕ್ಕೇ ಗೌರವ ಹುಟ್ಟಿಸುವ ಚೆಲುವಾದ ದುಂಡು ಮುಖ, ಹಣೆಯ ಮೇಲಿನ ವಿಭೂತಿ, ಹುಬ್ಬುಗಳ ನಡುವಣ ಕಪ್ಪು ಬೊಟ್ಟು, ಕೊರಳಲ್ಲಿ ರುದ್ರಾಕ್ಷಿ ಸರ, ತಲೆಯ ಮೇಲೆ ಸೆರಗು, ತುಂಬು ಶರೀರ. 1974ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಅವರು ಬಂದಾಗ ನಾನು ಅವರನ್ನು ಮೊದಲಿಗೆ ಕಂಡೆ. ಅವರ ಮಹಾಕಾವ್ಯ 'ಸಿದ್ಧರಾಮಪುರಾಣ' 1965ರಲ್ಲಿ ಬಿಡುಗಡೆಯಾದಾಗ ನಾನು ಎಂ.ಎ. ವಿದ್ಯಾರ್ಥಿ, ಅದನ್ನು ಓದಿ ನನ್ನ ಮೆಚ್ಚುಗೆ ಸೂಚಿಸಿದ್ದೆ. ಆಗಿನಿಂದಲೂ ನನ್ನ ಅವರ ನಡುವೆ ಪತ್ರವ್ಯವಹಾರ ನಡೆದಿದ್ದಿತು.

## ಜೀವನ

ಕನ್ನಡನಾಡಿನ ಗಡಿಭಾಗವಾದ ಸೊಲ್ಲಾಪುರದಲ್ಲಿ ಆಗರ್ಭ ಶ್ರೀಮಂತ ಮನೆತನಗಳು ವಾರದ, ಮಡಕಿ ಹಾಗೂ ಲಿಗಾಡೆ-ಈ ಮೂರೂ ಕುಟುಂಬಗಳ ಸಂಬಂಧ ಹೊಂದಿದ್ದರು ಜಯದೇವಿಯವರು. ವಾರದ ಮಲ್ಲಪ್ಪನವರ ಮೊದಲನೆಯ ಹೆಂಡತಿಯ ಸೋದರ ಮಡಕಿ ಮನೆತನದ ಚೆನ್ನಬಸಪ್ಪನವರು ಜಯದೇವಿಯವರ ತಂದೆ. ಮಕ್ಕಳಿಲ್ಲದ ವಾರದ ಮಲ್ಲಪ್ಪನವರು ಚೆನ್ನಬಸಪ್ಪನವರನ್ನು ಸಾಕುಮಗನಂತೆ ಕಂಡಿದ್ದರು; ತಮ್ಮ ಮಗಳು ಸಂಗವ್ವಳನ್ನು ಇವರಿಗೆ ಮದುವೆ ಮಾಡಿಕೊಟ್ಟಿದ್ದರು. ಇವರು ಅನಾರೋಗ್ಯದಿಂದ ತೀರಿಕೊಂಡರು. ಚೆನ್ನಬಸಪ್ಪನವರು ತಮ್ಮ ಮೂರನೇ ಪತ್ನಿ ಭಾಗೀರಥಿಯನ್ನು ಸಂಗವ್ವನೆಂದೇ ಕರೆಯುತ್ತಿದ್ದರು. ಈ ದಂಪತಿಗಳ ಮೂರನೇ ಮಗಳೇ ಜಯದೇವಿ (ಜನನ : 23.06.1912). ಜಯದೇವಿ ಓದಿದ್ದು ಮರಾಠಿಶಾಲೆಯಲ್ಲಿ. ಕನ್ನಡ ಕಲಿಸುವುದಕ್ಕೆ ಅಲ್ಲಿ ಯೋಗ್ಯ ಕನ್ನಡ ಪರಿಸರವಿರಲಿಲ್ಲ. ಇವರ ಹೆಸರಿನ ಮುಂದಿರುವ ಲಿಗಾಡೆ ಗಂಡನ ಸಂಬಂಧದಿಂದ ಬಂದುದು. ತಮ್ಮ ಹದಿನಾಲ್ಕನೇ ವಯಸ್ಸಿಗೇ (1926) ಮದುವೆಯಾಗಿ ಚೆನ್ನಮಲ್ಲಪ್ಪ ಮಹದೇವರಾಯ ಲಿಗಾಡೆಯವರ ಪತ್ನಿಯಾಗಿ ಗಂಡನ ಮನೆಗೆ ಬಂದಾಗ ಅವರ ದಾಂಪತ್ಯ ಜೀವನ ಮಧುರವಾಗಿರಲಿಲ್ಲ. ಬೆಳಗಿನ ಐದು ಗಂಟೆಗೆ ಎದ್ದು ಮನೆಗೆಲಸಕ್ಕೆ ತೊಡಗಿದರೆ ರಾತ್ರೆ ಹನ್ನೆರಡಕ್ಕೆ ಅದರಿಂದ ಬಿಡುವು. ಮಲಗಲು ಬಂದಾಗ ತಾಯಿಯ ಚಾಡಿ ಮಾತು ಕೇಳಿ ಹೆಂಡತಿಯನ್ನು ಗಂಡ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದ. ಮಧ್ಯರಾತ್ರಿಯಲ್ಲಿ ನಿಲ್ಲುವ ಶಿಕ್ಷೆ. ಕಾಲು ಸೋತಾಗ ತಮ್ಮದು ತಪ್ಪಿಲ್ಲದಿದ್ದರೂ 'ತಪ್ಪಾಯಿತು ಕ್ಷಮಿಸಿ' ಎಂದು ಬೇಡಿಕೊಳ್ಳುತ್ತಿದ್ದರು. 'ಅಲ್ಲಿಯೇ ಬಿದ್ದುಕೋ' ಎಂದು ಗಂಡ ಆಜ್ಞೆ ಮಾಡುತ್ತಿದ್ದ. ನೆಲದ ಮೇಲೆಯೇ ಸೋತು ಮಲಗುತ್ತಿದ್ದರು. ಈ ಅಸಹನೀಯ ವಾತಾವರಣದಲ್ಲಿಯೂ ತಾಳ್ಮೆ ಕಳೆದುಕೊಳ್ಳದೆ ತಮ್ಮ ಸಹನೆ, ಪ್ರೀತಿ, ವಿಶ್ವಾಸಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಗಂಡನ ಜೊತೆ ಬಾಳುವೆ ನಡೆಸಿದ್ದು ಕೇವಲ ಇಪ್ಪತ್ತು ವರ್ಷ ಮಾತ್ರ. ಗಂಡ 1946ರಲ್ಲಿ ಮರಣ ಹೊಂದಿದಾಗ ಐವರು ಮಕ್ಕಳ ತಾಯಿಯಾದ ಜಯದೇವಿಯವರು ಧೈರ್ಯ ಕಳೆದುಕೊಳ್ಳಲಿಲ್ಲ. ಕೋರ್ಟಿನ ಮೆಟ್ಟಿಲೇರಿ ತಮಗೆ ಬರಬೇಕಾದ ಆಸ್ತಿಯನ್ನು ಪಡೆದರು. ಅಂಥ ಗಟ್ಟಿ ಹೆಂಗಸು!

## ಕನ್ನಡಪರ ಹೋರಾಟ

ಗಡಿಭಾಗವಾದದ್ದರಿಂದ ಕನ್ನಡ ತೀರಾ ನಿರ್ಲಕ್ಷಕ್ಕೆ ಒಳಗಾಗಿದ್ದಿತು. ಸೊಲ್ಲಾಪುರದ ಸುತ್ತಮುತ್ತ ಕನ್ನಡದ ದನಿ ಕೇಳುವಂತೆ ಮಾಡಲು ಅವರು 'ಕನ್ನಡ ಕೋಟೆ' ಕಟ್ಟಿದ್ದರು. ಊರೂರು ಸುತ್ತಿ ಅಕ್ಕನ ಜಯಂತಿ, ಬಸವಜಯಂತಿ, ನಾಡಹಬ್ಬ, ಅಕ್ಕನ ಬಳಗ-ಈ ವೇದಿಕೆಗಳ ಮೂಲಕ ಒಂದು ಕನ್ನಡಪರವಾದ ಸಾಂಸ್ಕೃತಿಕ ವಾತಾವರಣ ನಿರ್ಮಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಜಯದೇವಿ ತಾಯಿಯವರು ತ್ರಿಕರಣಪೂರ್ವಕವಾಗಿ ದುಡಿದರು. ಸೊಲ್ಲಾಪುರ ಕನ್ನಡದ ಗಂಡುನೆಲ, ಅದು ಕರ್ನಾಟಕಕ್ಕೆ ಸೇರಬೇಕು, ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರಿರುವರು ಎಂಬುದನ್ನು ಮೇಲಿನ ಅಧಿಕಾರಿಗಳಿಗೆ ಮನವರಿಕೆ ಮಾಡಿದರು. ಇಂದಿರಾಗಾಂಧಿಯವರು ಬೆಂಗಳೂರಿಗೆ ಬಂದಾಗ ಅವರನ್ನು ಕಂಡು ಮಹಾಜನ್ ಆಯೋಗದ ವರದಿಯನ್ನು ಶೀಘ್ರವಾಗಿ ಜಾರಿಗೆ ತರಬೇಕೆಂದು ಒತ್ತಾಯಿಸಿ ಮನವಿಪತ್ರ ಸಲ್ಲಿಸಿದರು.

ಇಷ್ಟೆಲ್ಲ ಅವಿರತ ಪ್ರಯತ್ನ ನಡೆಸಿದರೂ ಸೊಲ್ಲಾಪುರ ಮಹಾರಾಷ್ಟ್ರಕ್ಕೆ ಸೇರಿದಾಗ ಜಯದೇವಿ ತಾಯಿ ತೀರಾ ನಿರಾಶರಾದರು. ಹೈದರಾಬಾದ್‌ನಲ್ಲಿ ನೆಲೆನಿಂತ ಕನ್ನಡಿಗರಿಗೆ ಜಯದೇವಿ ತಾಯಿ ಬೆಂಬಲವಾಗಿ ನಿಂತರು. ಕನ್ನಡ ಶಾಲೆಗಳನ್ನು ಪ್ರಾರಂಭಿಸಿದರು. 'ಕನ್ನಡ ಶಾಲೆಗಳಲ್ಲಿ ಕಲಿಸಲು ಶಿಕ್ಷಕರೇ ಸಿಗುತ್ತಿಲ್ಲ' ಎಂದು ಮಂತ್ರಿಗಳು ಹೇಳಿಕೆ ಕೊಟ್ಟಾಗ ಜಯದೇವಿ ತಾಯಿಯವರು ತಮ್ಮ ಸ್ವಂತ ಹಣದಿಂದ ನಾಲ್ಕುನೂರು ಕನ್ನಡ ಶಿಕ್ಷಕರನ್ನು ನೇಮಿಸಿದರು. ಇದು ಅವರ ಕನ್ನಡಪ್ರೇಮಕ್ಕೆ ಸಾಕ್ಷಿ. ಹೈದರಾಬಾದಿಗೆ ಸೇರಿದ್ದ ಕನ್ನಡಪ್ರದೇಶಗಳಲ್ಲಿ ಕನ್ನಡ ಪ್ರಚಾರ ಮಾಡುವ ಸಂದರ್ಭದಲ್ಲಿ ನಿಜಾಮನ ವಿರೋಧವನ್ನೂ ಲೆಕ್ಕಿಸಲಿಲ್ಲ. ರಜಾಕಾರರ ಹಾವಳಿಯ ಸಂದರ್ಭದಲ್ಲಿ ಹೈದರಾಬಾದಿನಿಂದ ನಿರಾಶ್ರಿತರಾಗಿ ಬಂದವರಿಗೆಲ್ಲಾ ತಾವೇ ಖುದ್ದಾಗಿ ನಿಂತು ಬಿಡಾರಗಳನ್ನು ಏರ್ಪಡಿಸಿ ಆಶ್ರಯ ನೀಡಿದರು. ಜಯದೇವಿ ತಾಯಿಯವರದು ಅಖಂಡ ಕರ್ನಾಟಕದ ಪರಿಕಲ್ಪನೆ. 1952ರಲ್ಲಿ ಬೇಲೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡನಾಡಿನ ವಿಭಜನೆಯ ವಾದ ಕಾಣಿಸಿಕೊಂಡಾಗ ಅವರು ಅದನ್ನು ಉಗ್ರವಾಗಿ ಖಂಡಿಸಿದರು.

## ಗಾಂಧಿ ಅನುಯಾಯಿ

ಜಯದೇವಿ ತಾಯಿಯವರು ಪಕ್ಕಾ ಗಾಂಧಿ ಅನುಯಾಯಿ. ಮಹಿಳೆಯರ ಸಮಸ್ಯೆಗಳನ್ನು ತೀರಾ ಹತ್ತಿರದಿಂದ ಬಲ್ಲ ಅವರು ಅವುಗಳ ಪರಿಹಾರಕ್ಕಾಗಿ ಹೋರಾಡಿದರು. ಮಹಿಳಾ ವಿದ್ಯಾಭ್ಯಾಸ, ಸ್ವಾವಲಂಬನೆಗೆ ಒತ್ತುಕೊಟ್ಟರು. ಬಾಲ್ಯವಿವಾಹ, ವೈಧವ್ಯಗಳ ನೋವಿನ ನಂಜುಂಡ ಅವರು ಅವನ್ನು ಬಲವಾಗಿ ಖಂಡಿಸಿದರು. 'ಸ್ತ್ರೀಯರು ಸುಶಿಕ್ಷಿತರಾಗುವುದು ಧರ್ಮಸಮ್ಮತ. ಕೇವಲ ಪುರುಷರಷ್ಟೇ ಉಚ್ಚಶಿಕ್ಷಣ ಹೊಂದುವುದರಿಂದ ಅಷ್ಟು ಉಪಯೋಗವಾಗುವುದಿಲ್ಲ. ಯಾಕೆಂದರೆ ಎಲೆಗಳ ಮೇಲೆ ನೀರೆರಚುವುದರಿಂದ ಗಿಡಕ್ಕೆ ಉಪಯೋಗವಿಲ್ಲವಷ್ಟೇ. ಬೇರಿಗೆ ನೀರು ಹಾಕುವುದರಿಂದ ಗಿಡಕ್ಕೆಲ್ಲ ಪ್ರಯೋಜನವಾಗುವಂತೆ ಸ್ತ್ರೀಶಿಕ್ಷಣವು ಸಮಾಜದ ಏಳ್ಗೆಗೆ ಅತ್ಯವಶ್ಯಕ'. ಇಂಥ ಉದಾರವಾದ ಸ್ತ್ರೀಪರ ನಿಲುವು ಅವರದು.

## ಸಾಹಿತ್ಯ ಸೇವೆ


ಜಯದೇವಿ ತಾಯಿಯವರದು ನಾಡು, ಸಂಸ್ಕೃತಿಯ ಸೇವೆಯ ಜೊತೆಗೆ ಅವಿಭಾಜ್ಯ ಭಾಗವಾಗಿರುವುದು ಸಾಹಿತ್ಯಸೇವೆ. ಅವರ ವ್ಯಕ್ತಿತ್ವದ ಎರಡು ಮುಖ ಒಂದು ಸಾಮಾಜಿಕ, ಇನ್ನೊಂದು ಸಾಹಿತ್ಯಕ. ಜಯದೇವಿಯವರಿಗೆ ತಾಯಿಯಿಂದ ಬಂದ ಬಳುವಳಿ ಸುಮಧುರ ಕಂಠಸಿರಿ. ತಾಯಿಯ ಒಳ್ಳೆಯ ಗುಣಗಳೆಲ್ಲವೂ ಇವರಲ್ಲಿ ಮೈದಾಳಿದವು. ಅವರಿಗೆ ಬಾಲ್ಯದಿಂದಲೇ ಮನೆಯ ಪರಿಸರದಿಂದಲೇ ಶಿವಶರಣರ ವಾಙ್ಮಯದ ಬಗೆಗೆ ಕುತೂಹಲಾಸಕ್ತಿ. ಅವರು ಸ್ವಂತ ಪರಿಶ್ರಮದಿಂದ ಕನ್ನಡ ಕಲಿತವರು. ಮರಾಠಿ ಬಳಕೆಯಿಂದ, ಶಾಲೆಯ ಕಲಿಕೆಯಿಂದ ಬಂದದ್ದು. ಬಸವಣ್ಣ ಅವರ ಜೀವದುಸಿರು, ಅಕ್ಕಮಹಾದೇವಿ, ಸಿದ್ಧರಾಮ ಮೊದಲಾದ ಶರಣರ ಸಾಹಿತ್ಯಸಂಪದ ಇವರ ಸಾಹಿತ್ಯಕ್ಕೆ ಗೊಬ್ಬರ, ಮಣ್ಣು, ನೀರು. ಕನ್ನಡ-ಮರಾಠಿ ಭಾಷಾಸಾಹಿತ್ಯಕ್ಕೆ ಇವರು ಸೇತುವೆಗಟ್ಟಿದರು. ಜಯಗೀತೆ, ತಾಯಿಯ ಪದಗಳು, ತಾರಕತಂಬೂರಿ, ಸಿದ್ಧರಾಮಪುರಾಣ, ಬಂದೇವು ಕಲ್ಯಾಣಕೆ, ಸಾವಿರದ ಪದಗಳು ಸ್ವತಂತ್ರ ಕೃತಿಗಳಾದರೆ, ಅರುವಿನಾಗರದಲ್ಲಿ ಸಂಪಾದಿತ ಕೃತಿ. ಮರಾಠಿಗೆ ಕನ್ನಡದ ಇಂಪು ಸೊಂಪನ್ನು

ಪರಿಚಯಿಸಿದ ಕೀರ್ತಿ ಜಯದೇವಿ ತಾಯಿಯವರದು. ಸಿದ್ಧವಾಣಿ, ಬಸವದರ್ಶನ, ಸಮೃದ್ಧ ಕರ್ನಾಟಕಾಂಬೆ ರೂಪರೇಷೆ, ಮಹಾಯೋಗಿನಿ, ಸಿದ್ಧರಾಮಾಂಚಿ ತ್ರಿವಿಧಿ, ಬಸವವಚನಾಮೃತ, ಶೂನ್ಯಸಂಪಾದನೆ–ಇವು ತಾಯಿಯವರ ಮರಾಠಿಕೃತಿಗಳು, 'ಸಿದ್ಧರಾಮಪುರಾಣ', ಕನ್ನಡದ ಅಪರೂಪದ ತ್ರಿಪದಿ ಮಹಾಕಾವ್ಯ. ಆ ಕಾಲಕ್ಕೆ (1965) ಓರ್ವ ಗಡಿನಾಡಿನ ಮಹಿಳೆ ಬರೆದ ಏಕೈಕ ಮಹಾಕಾವ್ಯ. ಇದು 41 ಸಂಧಿ 4100 ತ್ರಿಪದಿಗಳನ್ನು ಒಳಗೊಂಡಿದ್ದು, ತಾಯಿಯವರ ಹತ್ತು ವರ್ಷಗಳ ತಪಸ್ಸಿನ ಫಲ.

ಜಯದೇವಿ ತಾಯಿಯವರ ಸಾಹಿತ್ಯಸೇವೆಯ ಮಹತ್ವವನ್ನು ಮನಗಂಡೇ ಅವರಿಗೆ 1950ರಲ್ಲಿ ಮುಂಬಯಿಯಲ್ಲಿ ನಡೆದ 32ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾಗೋಷ್ಠಿಯ ಅಧ್ಯಕ್ಷಸ್ಥಾನ; 1960ರಲ್ಲಿ ಬೀದರ್‌ನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಪರಿಷತ್ತಿನ ಅಧ್ಯಕ್ಷಸ್ಥಾನ; ಉಡುಪಿಯಲ್ಲಿ ನಡೆದ ವಿಶ್ವ ಹಿಂದೂ ಪರಿಷತ್ತಿನ ಮಹಿಳಾ ಗೋಷ್ಠಿಯ ಅಧ್ಯಕ್ಷಸ್ಥಾನ; 1974ರಲ್ಲಿ ಮಂಡ್ಯದಲ್ಲಿ ನಡೆದ 48ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಕೊಡಲಾಯಿತು. 1974ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನದ ಅಧ್ಯಕ್ಷಸ್ಥಾನವು ಇವರಿಗೆ ಲಭಿಸಿತು. ಜಯದೇವಿ ತಾಯಿಯವರ ಬಹುಮುಖೀ ಸೇವೆಯನ್ನು ಮಾನ್ಯ ಮಾಡಿ 1976ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್ ಪದವಿ ನೀಡಿ ಗೌರವಿಸಿತು. ಹೆಚ್ಚು ವಿದ್ಯಾವಂತಳಲ್ಲದ ಓರ್ವ ಮಹಿಳೆಗೆ ಈ ಗೌರವ ದೊರೆತದ್ದು ಗಮನಾರ್ಹ ಸಂಗತಿ.

ಜಯದೇವಿ ತಾಯಿಯವರು ನೊಂದಜೀವಿ. ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡರು. ಬದುಕುವ ಅದಮ್ಯ ಉತ್ಸಾಹ, ಏನನ್ನಾದರೂ ಸಾಧಿಸಬೇಕೆನ್ನುವ ಛಲ, ರಾಷ್ಟ್ರಪ್ರೇಮ, ಸೊಲ್ಲಾಪುರದಲ್ಲಿ ಕನ್ನಡದ ಸುಮಧುರ ವಾತಾವರಣ ನಿರ್ಮಿಸಿದ ಸಾಹಸ, ಏಕೀಕರಣಕ್ಕಾಗಿ ಮಾಡಿದ ಸೇವೆ, ಅಪಾರ ಸಂಪತ್ತನ್ನು ಲೋಕಕಲ್ಯಾಣಕ್ಕಾಗಿ ವಿನಿಯೋಗಿಸುವಲ್ಲಿ ತೋರಿದ ಮಾನವೀಯತೆ ಅವರನ್ನು ಬೇರೆಯವರಿಗಿಂತ ಭಿನ್ನವಾಗಿಸುತ್ತದೆ. ಶತಮಾನೋತ್ಸವದ ಸಂದರ್ಭದಲ್ಲಿ ಅವರನ್ನು ನೆನೆಯುವುದು ನಮ್ಮ ಕರ್ತವ್ಯಗಳಲ್ಲಿ ಒಂದು.


ಕೃಪೆ : ವಿಜಯವಾಣಿ



ಶ್ರದ್ಧಾಂಜಲಿ

## ತೆರೆಮರೆಗೆ ರಂಗಕಲಾವಿದ ಏಣಗಿ ನಟರಾಜ



ಏಣಗಿ ನಟರಾಜ ಅವರು ನಾಡೋಜ ಡಾ. ಏಣಗಿ ಬಾಳಪ್ಪನವರ ಪುತ್ರ. ತಂದೆ ಏಣಗಿ ಬಾಳಪ್ಪನವರಂತೆಯೇ ರಕ್ತಗತ ನಟನಾ ಕೌಶಲ್ಯ ಹೊಂದಿದ್ದ ನಟರಾಜ್ ಚಿಕ್ಕಂದಿನಲ್ಲಿಯೇ ಅಪ್ಪನ ಗರಡಿಯಲ್ಲಿ ಹತ್ತು ಹಲವು ನಾಟಕಗಳ ಪಾತ್ರ ಮಾಡಿ ಸೈ ಎನಿಸಿಕೊಂಡಿದ್ದರು. ಮುಂದೆ ನೀನಾಸಂನಲ್ಲಿ ತರಬೇತಿ ಪಡೆದು ರಂಗಭೂಮಿಯಲ್ಲಿ ಸಾಕಷ್ಟು ಹೆಸರು ಮಾಡಿದ್ದ ನಟರಾಜ, ಚಿತ್ರರಂಗದಲ್ಲೂ ಗುರುತಿಸಿಕೊಂಡಿದ್ದರು. ಅವರ ವಿಶಿಷ್ಟ ನಟನೆ ಮತ್ತು ಕಂಠಕ್ಕೆ ಮಾರು ಹೋಗದವರೇ ಇರಲಿಲ್ಲ. ನೀನಾಸಂ ತಿರುಗಾಟದಲ್ಲಿ ನಾಡಿನಾದ್ಯಂತ ಸಾವಿರಾರು ಪ್ರದರ್ಶನಗಳನ್ನು ನೀಡಿದ ಹೆಗ್ಗಳಿಕೆ ಏಣಗಿ ನಟರಾಜ ಅವರದ್ದು. ಧಾರವಾಡದಲ್ಲಿ ನೆಲೆ ನಿಂತ ನಂತರ ತಮ್ಮದೇ ಸಂಸ್ಥೆಯೊಂದನ್ನು ಕಟ್ಟಿಕೊಂಡ ಅವರು, ನೂರಾರು ಪ್ರದರ್ಶನಗಳನ್ನು ಏರ್ಪಡಿಸಿ ರಂಗಭೂಮಿಗೆ ತನ್ನದೇ ಆದ ಕೊಡುಗೆ ನೀಡಿದ್ದರು.ನೀನಾಸಂ ರಂಗ ತರಬೇತಿ ಶಾಲೆಯಲ್ಲಿ ತರಬೇತಿ ಪಡೆದಿದ್ದ ಏಣಗಿ ಬಳಿಕ ನೀನಾಸಂ ತಿರುಗಾಟದಲ್ಲಿಯೇ ಅನೇಕ ನಾಟಕಗಳಲ್ಲಿ ನಟಿಸಿದ್ದರು. ಹಿರಿಯ ರಂಗಕರ್ಮಿ ಪ್ರಸನ್ನ ಮತ್ತು ಜಂಬೆ ನಿರ್ದೇಶನದ ಹಲವಾರು ನಾಟಕಗಳಲ್ಲಿ ಅವರು ಅಭಿನಯಿಸಿದ್ದರು. ಬಿರುದಂತೆಂಬರ ಗಂಡ, ತದ್ರೂಪಿ, ನಾ ತುಕಾರಾಂ ಅಲ್ಲ, ಸಾಂಬಶಿವ ಪ್ರಹಸನ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಉತ್ತರ ಕರ್ನಾಟಕ ಶೈಲಿಯ ಧಾರಾವಾಹಿಗಳನ್ನು ವಿವಿಧ ಚಾನೆಲ್‌ಗಳಿಗೆ ನಿರ್ದೇಶಿಸುವ ಮೂಲಕವೂ ಹೆಸರುವಾಸಿಯಾದರು. ಅವರಿಗೆ ಜನಪ್ರಿಯತೆ ತಂದುಕೊಟ್ಟ ಧಾರಾವಾಹಿ ಈಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಮಹಾನವಮಿ. ಚಿನ್ನಾರಿ, ಇದು ಎಂಥಾ ಲೋಕವಯ್ಯ, ಸಂಕ್ರಾಂತಿ ಮುಂತಾದ ಧಾರಾವಾಹಿಗಳು, ಟಿ.ಎಸ್. ನಾಗಾಭರಣ ನಿರ್ದೇಶನದ ಸಿಂಗಾರೆವ್ವ, ಸಿ.ಪಿ. ಯೋಗೀಶ್ವರ್ ನಾಯಕನಾಗಿದ್ದ ಸೈನಿಕ (ಚಲನಚಿತ್ರ) ಸೇರಿದಂತೆ ಹಲವು ಸಿನಿಮಾಗಳಲ್ಲೂ ಏಣಗಿ ನಟರಾಜ ಅಭಿನಯಿಸಿದ್ದರು.ಮೂಡಲ ಮನೆ ಧಾರಾವಾಹಿಯಲ್ಲಿ ಅವರ ವಾಡೆ ಯಜಮಾನನ ಪಾತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಅವರದೇ ನಿರ್ದೇಶನದಲ್ಲಿ ಪ್ರಸಾರವಾಗುತ್ತಿದ್ದ ಧಾರಾವಾಹಿಯಲ್ಲೂ ಅವರದೇ ಛಾಪಿತ್ತು. ವಾಡೆಯ ಯಜಮಾನನಾಗಿ ಅವರು ತಮ್ಮ ಅಭಿನಯದಲ್ಲಿ ತೋರುತ್ತಿದ್ದ ಗತ್ತು–ಗೈರತ್ತು ಜನಮಾನಸದಲ್ಲಿ ಯಾವತ್ತೂ ಹಸಿರಾಗಿರುವಂತಾದ್ದು.

ನಟರಾಜ್ ಅವರು ಇತ್ತೀಚೆಗಷ್ಟೇ ಧಾರವಾಡದ ರಂಗಾಯಣದ ಜವಾಬ್ದಾರಿಯನ್ನು ಹೊತ್ತಿದ್ದರು. ಅದನ್ನೊಂದು ಪ್ರಗತಿಪರ ಸಂಘಟನೆಯಾಗಿ ರೂಪಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡಿದ್ದರು. ಮೈಸೂರು ರಂಗಾಯಣದಲ್ಲಿ 1991 ರಿಂದ 1993 ರವರೆಗೆ ಅಭಿನಯ ತರಬೇತಿದಾರರಾಗಿ ಕಾರ್ಯ ನಿರ್ವಹಿಸಿದ ನಟರಾಜ, 1993 ರಿಂದ 1994 ರವರೆಗೆ ತ್ರಿಶ್ಯೂರ್ ನ ಕ್ಯಾಲಿಕಟ್ ಯುನಿವರ್ಸಿಟಿ ಥೇಟರ್ ಇನ್ಸ್ಟಿಟ್ಯೂಟ್‌ನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಪ್ರತಿಭಾವಂತ ಕಲಾವಿದ. ಅಪಾರ ಬಣ್ಣದ ಗೀಳು ಹೊಂದಿದ್ದ ಅವರು ಸುಮಾರು 40 ನಾಟಕಗಳಿಗೆ ನಿರ್ದೇಶನ ನೀಡಿ 200 ಕ್ಕೂ ಅಧಿಕ ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದರು. 30ಕ್ಕೂ ಹೆಚ್ಚು ಕಿರು ತೆರೆಯಲ್ಲಿನ ಧಾರಾವಾಹಿ ಹಾಗೂ 25 ಚಲನಚಿತ್ರಗಳಲ್ಲಿ ಅಭಿನಯಿಸಿ ಪ್ರೇಕ್ಷಕರ ಮನ ಗೆದ್ದಿದ್ದರು.

ಅಗಲಿದ ಕಲಾವಿದ ಏಣಗಿ ನಟರಾಜ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.

ವಿದಾಯ

# ಹಿರಿಯ ಐಎಎಸ್ ಅಧಿಕಾರಿ ಡಾ. ಸಿ.ಎಸ್. ಕೇದಾರ್ ಅವರಿಗೆ ಆತ್ಮೀಯ ವಿದಾಯ

ಹಿರಿಯ ಐಎಎಸ್ ಅಧಿಕಾರಿ ಡಾ. ಸಿ.ಎಸ್. ಕೇದಾರ್‌ರವರು ಬಿಡಿಎ ಚೇರ್ಮನ್‌ರಾಗಿ ವರ್ಗಾವಣೆಯಾಗಿ ಕರ್ನಾಟಕಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆಯು ಜೂನ್ 16, 2012ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆತ್ಮೀಯ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿತ್ತು.

ಕೃಷಿಕ್ ಸರ್ವೋದಯ ಫೌಂಡೇಶನ್‌ನ ಕಾರ್ಯದರ್ಶಿ ವಿ.ಆರ್. ಗುಡ್ಡೇಗೌಡರು ಡಾ. ಸಿ.ಎಸ್. ಕೇದಾರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಮಾತನಾಡಿದರು. "ಸೆಪ್ಟಂಬರ್ 9, 2007ರಂದು ಆರಂಭಗೊಂಡ ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆಯು ಹಿರಿಯ ಅಧಿಕಾರಿಗಳಾದ ಡಾ. ಸಿ.ಎಸ್. ಕೇದಾರ್ ಐಎಎಸ್, ವಿಜಯ ಭಾಸ್ಕರ್ ಐಎಎಸ್ ಹಾಗೂ ಕೃಪಾನಿಧಿ ಐಎಎಸ್ ಅವರ ಮುಂದಾಳತ್ವದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕೇಂದ್ರ ನಾಗರಿಕ ಸೇವೆಗಳಿಗೆ ಸ್ಪರ್ಧಿಸಲು ಬಯಸುವ ಕನ್ನಡ ಅಭ್ಯರ್ಥಿಗಳಿಗೆ ಎಲ್ಲಾ ರೀತಿಯ ಸಲಹೆ, ಸಹಕಾರ, ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಅದರ ಪ್ರತಿಫಲದಿಂದಾಗಿ ಕೇವಲ ಬೆರಳೆಣಿಕೆಯ ಮಂದಿ ಕೇಂದ್ರ ನಾಗರೀಕ ಸೇವೆಗಳಿಗೆ ಆಯ್ಕೆಯಾಗುತ್ತಿದ್ದು, ಇಂದು ಈ ನಾಲ್ಕೈದು ವರ್ಷಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಮಂದಿ ಕೇಂದ್ರ ನಾಗರೀಕ ಸೇವೆಗಳಿಗೆ ಆಯ್ಕೆಯಾಗಿರುವುದನ್ನು ಗಮನಿಸಿದರೆ ಡಾ. ಸಿ.ಎಸ್. ಕೇದಾರ್ ಮತ್ತು ಎಲ್ಲಾ ಹಿರಿಯ ಅಧಿಕಾರಿಗಳಿಗೆ ಈ ಗೌರವ ಸಲ್ಲಬೇಕಾಗುತ್ತದೆ. ಡಾ. ಸಿ.ಎಸ್. ಕೇದಾರ್‌ರವರ ಪರಿಶ್ರಮ ಮತ್ತು ಕನ್ನಡ ನಾಡು ನುಡಿಯ ಮೇಲಿನ ಅಪಾರ ಪ್ರೇಮವೇ ಇಷ್ಟು ಮಂದಿ ಆಯ್ಕೆಯಾಗಲು ಸಾಧ್ಯವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು" ಎಂದು ಗುಡ್ಡೇಗೌಡರು ಅಭಿಮಾನದಿಂದ ನುಡಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಕಾರ್ಯದರ್ಶಿ ಎಸ್.ಕೃಷ್ಣ ಭಟ್ ಅವರು ಆರಂಭಿಕ ದಿನಗಳಲ್ಲಿ ಸಂಘದ ಸಾಂಸ್ಕೃತಿಕ ಸಮುಚ್ಚಯಕ್ಕಾಗಿ ಸರ್ಕಾರ ನೀಡಿದ ಅನುದಾನವನ್ನು ಬಿಡುಗಡೆ ಮಾಡುವಲ್ಲಿ ಮಹತ್ತರ ನಿರ್ಣಯ ಕೈಗೊಂಡು ನೆರವಾದ ಸಹೃದಯಿ ಕನ್ನಡಿಗ ಸಿ.ಎಸ್. ಕೇದಾರ್ ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು. ದೆಹಲಿ ಕರ್ನಾಟಕ ಸಂಘದ ಪರವಾಗಿ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಕೇದಾರ್ ಅವರಿಗೆ ಹೂಗುಚ್ಛ ನೀಡಿ ಅವರ ಕನ್ನಡ ಸೇವೆ ನಿರಂತರವಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಅಭಿನಂದನೆ ಸ್ವೀಕರಿಸಿದ ಕೇದಾರ್ ಅವರು ಕೃಷಿಕ್ ಸರ್ವೋದಯ ಫೌಂಡೇಶನ್ ಜೊತೆಗಿನ ತಮ್ಮ ಒಡನಾಟವನ್ನು ಸ್ಮರಿಸುತ್ತಾ ಸಂತಸದ ಕ್ಷಣಗಳನ್ನು ಹಂಚಿಕೊಂಡರು. "ಬಿಡುವಿಲ್ಲದ ವೃತ್ತಿ ಜೀವನದ ಜೊತೆ ಜೊತೆಗೆ ಹಲವಾರು ಅಭ್ಯರ್ಥಿಗಳ ಭವಿಷ್ಯ ರೂಪಿಸಲು ನೆರವಾದದ್ದು ನಿಜಕ್ಕೂ ಆತ್ಮ ತೃಪ್ತಿ ತಂದಿದೆ. ಇದಕ್ಕಾಗಿ ನಾನು ನಕ್ಷತ್ರಿಕನ ಹಾಗೆ ಎಲ್ಲರನ್ನೂ ಕಾಡಿದ್ದೇನೆ. ಈ ಕಾರ್ಯಕ್ಕಾಗಿ ಸಂಕೋಚವಿಲ್ಲದೇ ಕನ್ನಡದ ಅಧಿಕಾರಿಗಳ ಸೇವೆಯನ್ನು ಸದಾ ಬಳಸಿಕೊಳ್ಳಿ" ಎಂಬ ಹಿತನುಡಿಗಳೊಂದಿಗೆ ಶುಭ ಹಾರೈಸಿದರು. ಐಎಎಸ್ ಅಧಿಕಾರಿ ವಿಜಯಭಾಸ್ಕರ್ ಅವರು ಕೇದಾರ್ ಅವರು ತೋರಿಸಿದ ಮಾರ್ಗದಲ್ಲಿ ತಾವೆಲ್ಲರೂ ಮುನ್ನಡೆಯುತ್ತಾ ಸಹಕರಿಸುವ ಭರವಸೆ ಇತ್ತರು.






ಕೃಷಿಕ್ ಸರ್ವೋಯ ಫೌಂಡೇಶನ್ ಅಧ್ಯಕ್ಷ ಎನ್.ಎ. ಮಾಧವ ಅವರು ಕೇದಾರ್ ಅವರಿಗೆ ವಂದನೆಗಳನ್ನು ಸಲ್ಲಿಸುತ್ತಾ "2010-11ರಲ್ಲಿ ಕೃಷಿಕ್ ಸರ್ವೋದಯ ಫೌಂಡೇಶನ್ ದೆಹಲಿ ಶಾಖೆಯು ನಡೆಸಿದ ಅಣುಕು ಸಂದರ್ಶನದಲ್ಲಿ ಸುಮಾರು 70ಕ್ಕೂ ಹೆಚ್ಚು ಕನ್ನಡದ ಅಭ್ಯರ್ಥಿಗಳು ಭಾಗವಹಿಸಿ, ಅದರಲ್ಲಿ ಒಟ್ಟು 43 ಮಂದಿ ಕೇಂದ್ರ ನಾಗರೀಕ ಸೇವೆಗಳಿಗೆ ಆಯ್ಕೆಯಾಗಿರುತ್ತಾರೆ. ಇದರ ಯಶಸ್ಸು ಸಿ.ಎಸ್. ಕೇದಾರ್ ಮತ್ತು ಎಲ್ಲ ಹಿರಿಯ ಅಧಿಕಾರಿಗಳಿಗೆ ಸಲ್ಲುತ್ತದೆ" ಎಂದು ಹೇಳಿದರು.

ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್. ಕೃಷ್ಣ ಭಟ್ ಹಾಗೂ ಹಿರಿಯ ಅಧಿಕಾರಿಗಳಾದ ಟಿ.ಎಂ. ವಿಜಯ ಭಾಸ್ಕರ್ ಐಎಎಸ್, ಅನಂತರಾಮ ಅರಳಿ ಉಪಕಾರ್ಯದರ್ಶಿ, ರಕ್ಷಣಾ ಮಂತ್ರಾಲಯ, ಎಲ್.ಕೆ. ಅತೀಕ್ ಐಎಎಸ್, ರಿತ್ವಿಕ್ ಪಾಂಡೆ ಐಎಎಸ್, ಎನ್.ಜೆ. ಕಾಮತ್ ನಿವೃತ್ತ ಐಸಿಎಸ್, ಪ್ರೊ. ಚಂದ್ರಶೇಖರ್ ಐಐಟಿ, ಸುಬ್ರಹ್ಮಣ್ಯ ರಾವ್ ಐಎಸ್‌ಎಸ್, ಶ್ರೀನಿವಾಸ್ ಬಿ.ಪಿ. ಐಆರ್‌ಎಸ್ ಹಾಗೂ ಕೃಷಿಕ್ ಸರ್ವೋದಯ ಫೌಂಡೇಶನ್‌ನ ಪದಾಧಿಕಾರಿಗಳಾದ ಅಧ್ಯಕ್ಷ ಎನ್.ಎ. ಮಾಧವ, ಪ್ರಧಾನ ಕಾರ್ಯದರ್ಶಿ ವಿ.ಆರ್. ಗುಡ್ಡೇಗೌಡ, ಖಜಾಂಚಿ ಶಿವರಾಮ್ ಉಪಸ್ಥಿತರಿದ್ದರು.

❑ ಪಿ.ಸಿ. ಶ್ರೀನಿವಾಸ್

**ದೆಹಲಿ ಕರ್ನಾಟಕ ಸಂಘ**

**ಯಮುನೆಯ ತಡಿಯಲ್ಲಿ ಕನ್ನಡ ನುಡಿ-ಸಾಂಸ್ಕೃತಿಕ ಮಾಲಿಕೆ**

**ಮುಂಬರುವ ಕಾರ್ಯಕ್ರಮಗಳು**

**ಸೆಪ್ಟೆಂಬರ್, 2012ರ 2ನೇ ಶನಿವಾರ**
**ಕು.ಪೂಜ್ಯಾ ಮೋಹನ್, ತುಮಕೂರು ತಂಡದವರಿಂದ**
**ವಚನ ಗಾಯನ**

**ಅಕ್ಟೋಬರ್, 2012ರ 2ನೇ ಶನಿವಾರ**
**ಶ್ರೀ ಮೃತ್ಯುಂಜಯ ದೊಡ್ಡವಾಡ ಮತ್ತು ತಂಡದವರಿಂದ**
**ಸುಗಮ ಸಂಗೀತ**

**ನವೆಂಬರ್ 2012ರ 2ನೇ ಶನಿವಾರ**
**ಶ್ರೀ ಸಾಣೇಹಳ್ಳಿ ಶಿವಕುಮಾರ್ ಕಲಾತಂಡ ಸಾಣೇಹಳ್ಳಿ, ಚಿತ್ರದುರ್ಗ ಇವರಿಂದ**
**ನಾಟಕ**

**ಡಿಸೆಂಬರ್ 2012ರ 2ನೇ ಶನಿವಾರ**
**ಡಾ. ವೀರೇಶ್ ಬಳ್ಳಾರಿ ಮತ್ತು ತಂಡದವರಿಂದ**
**ಜಾನಪದ ಸಂಗೀತ**

Delhi Karnataka Sangha's Abhimatha Monthly,
July -2012, Price Rs.1/- RNI Regn. No. 53405/91, DL-SW-15/4016/10-11-12
Printout Date : July 8th / 9th, Postal Date :10th / 11th, Total Pages-20




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770